ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 14 ಮಂಗಳವಾರ 2023

ಸಂಪುಟ: 43 | ಸಂಚಿಕೆ: 297 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




ಬೆಂಗಳೂರಲ್ಲಿ ಏಷ್ಯಾದ ಅತಿದೊಡ್ಡ ವೈಮಾನಿಕ ಪ್ರದರ್ಶನ

ಏರೋ ಇಂಡಿಯಾ–2023

ಪ್ರಧಾನಿ ನರೇಂದ್ರ ಮೋದಿ ಚಾಲನೆ







ಬೆಂಗಳೂರು: ಬೆಂಗಳೂರು ಹೊರವಲಯದಲ್ಲಿರುವ ಯಲಹಂಕ ವಾಯುನೆಲೆಯಲ್ಲಿ ಏರೋ ಇಂಡಿಯಾ ವೈಮಾನಿಕ ಪ್ರದರ್ಶನದ 14ನೇ ಆವೃತ್ತಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸೋಮವಾರ ಚಾಲನೆ ನೀಡಿದ್ದಾರೆ.

5 ದಿನಗಳ ಕಾಲ ನಡೆಯಲಿರುವ ಏಷ್ಯಾದ ಅತಿದೊಡ್ಡ ವೈಮಾನಿಕ ಪ್ರದರ್ಶನವನ್ನು ಮೋದಿಯವರು 2ನೇ ಬಾರಿ ಉದ್ಘಾಟಿಸಿದ್ದಾರೆ. ಮುಂದಿನ 5 ದಿನಗಳ ಕಾಲ ಸಿಲಿಕಾನ್ ಸಿಟಿಯ ನಭದಲ್ಲಿ ಲೋಹದ ಹಕ್ಕಿಗಳ ಕಲರವ ಜೋರಾಗಿರಲಿದೆ. 2015ರಲ್ಲೂ ಮೋದಿಯವರು ಏರೋ ಇಂಡಿಯಾವನ್ನು ಉದ್ಘಾಟಿಸಿದ್ದರು.

ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ: ಏರೋ ಇಂಡಿಯಾಗೆ ಚಾಲನೆ ನೀಡಿದ ಬಳಿಕ ಪ್ರಧಾನಿ ಮೋದಿಯವರು ಸ್ಮರಣಾರ್ಥ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದರು. ಆವೃತ್ತಿಯಿಂದ ಆವೃತ್ತಿಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವ ಏರೋ ಇಂಡಿಯಾ ಈ ಬಾರಿಯೂ ತನ್ನ ಪ್ರದರ್ಶನ ವ್ಯಾಪ್ತಿಯನ್ನು ಶೇ.3ರಷ್ಟು ವಿಸ್ತಾರಗೊಳಿಸಿಕೊಂಡಿದೆ. ಹೀಗಾಗಿ ಕಳೆದ ವರ್ಷಕ್ಕಿಂತ ರಕ್ಷಣಾ ಕ್ಷೇತ್ರಕ್ಕೆ ಹೆಚ್ಚು ಹೂಡಿಕೆ ಬರುವ ನಿರೀಕ್ಷೆಗಳಿವೆ. 2021ರಲ್ಲಿ ನಡೆದ 13ನೇ ಆವೃತ್ತಿಯ ವೈಮಾನಿಕ ಪ್ರದರ್ಶನದಲ್ಲಿ 600 ಮಂದಿ ಪ್ರದರ್ಶಕರು ಭಾಗವಹಿಸಿದ್ದರು. ಈ ಸಂಖ್ಯೆ ಪ್ರಸಕ್ತ ವೈಮಾನಿಕ ಪ್ರದರ್ಶನದಲ್ಲಿ 809ಕ್ಕೆ ಹೆಚ್ಚಳವಾಗಿದೆ. ಕಳೆದ ವರ್ಷ 55 ರಾಷ್ಟ್ರಗಳು ಮಾತ್ರ ಪ್ರದರ್ಶನದಲ್ಲಿ ಭಾಗವಹಿಸಿದ್ದು, ಪ್ರಸ್ತುತ 98 ರಾಷ್ಟ್ರಗಳು ತಮ್ಮ ಭಾಗವಹಿಸುವಿಕೆಯನ್ನು ಖಚಿತಪಡಿಸಿವೆ. ಒಟ್ಟು 251 ಒಡಂಬಡಿಕೆ ಸಿದ್ಧಗೊಂಡಿದ್ದು, ಕಳೆದ ವರ್ಷ 23 ಸಾವಿರ ಚದರ ಮೀಟರ್ ವ್ಯಾಪ್ತಿಗೆ ಸೀಮಿತವಾಗಿದ್ದ ಪ್ರದರ್ಶನ ವ್ಯವಸ್ಥೆಯು ಈ ಬಾರಿ 35,000 ಚ.ಮೀ. ವ್ಯಾಪ್ತಿಗೆ ವಿಸ್ತರಿಸಿದೆ. ಕಳೆದ ಬಾರಿ 67 ವಿಮಾನಗಳು ವೈಮಾನಿಕ ಪ್ರದರ್ಶನ ನೀಡಿದ್ದವು. ಈ ಬಾರಿ ಸಾರಂಗ್, ಸೂರ್ಯಕಿರಣ್ ವೈಮಾನಿಕ ಪ್ರದರ್ಶನ ತಂಡ, ಸುಖೋಯ್, ರಫೇಲ್, ತೇಜಸ್ ಸೇರಿದಂತೆ ಒಟ್ಟು 67 ವಿಮಾನಗಳು ಪ್ರದರ್ಶನ ನೀಡಲಿವೆ. ಉಳಿದಂತೆ ಸ್ಟ್ಯಾಟಿಕ್ ಡಿಸ್ ಪ್ಲೇಯಲ್ಲಿ 36 ವಿಮಾನಗಳು ಪ್ರದರ್ಶನಗೊಳ್ಳಲಿವೆ. ಯುದ್ಧ ವಿಮಾನ, ಹೆಲಿಕಾಪ್ಟರ್ ಹಾಗೂ ತಂತ್ರಜ್ಞಾನಗಳ ಪ್ರದರ್ಶನಕ್ಕಾಗಿಯೇ ಪ್ರತ್ಯೇಕವಾಗಿ ಇಂಡಿಯನ್ ಪೆವಿಲಿಯನ್ ನಿರ್ಮಾಣ ಮಾಡಲಾಗಿದೆ.

ಏರೋ ಇಂಡಿಯಾ ನವ ಭಾರತದ ಶಕ್ತಿಯನ್ನು ಪ್ರದರ್ಶಿಸುತ್ತಿದೆ

ಬೆಂಗಳೂರು: ಏರೋ ಇಂಡಿಯಾ ಶೋ ನವ ಭಾರತದ ಶಕ್ತಿ ಪ್ರದರ್ಶಿಸುತ್ತಿದ್ದು, ಇದು ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸೋಮವಾರ ಹೇಳಿದ್ದಾರೆ.

ಬೆಂಗಳೂರು ಹೊರವಲಯದಲ್ಲಿರುವ ಯಲಹಂಕ ವಾಯುನೆಲೆಯಲ್ಲಿ ಏರೋ ಇಂಡಿಯಾ ವೈಮಾನಿಕ ಪ್ರದರ್ಶನದ 14ನೇ ಆವೃತ್ತಿಗೆ ಚಾಲನೆ ನೀಡಿದ ಬಳಿಕ ದೇಶದ ಜನತೆಯನ್ನುದ್ದೇಶಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾಷಣ ಮಾಡಿದರು. ನವಭಾರತದ ಸಾಮರ್ಥ್ಯಕ್ಕೆ ಬೆಂಗಳೂರಿನ ಆಗಸ ಸಾಕ್ಷಿಯಾಗುತ್ತಿದೆ. ಹೊಸ ಎತ್ತರವೇ ನವಭಾರತದ ಸತ್ಯ ಎಂಬುದಕ್ಕೆ ಬೆಂಗಳೂರಿನ ಆಕಾಶವೇ ಸಾಕ್ಷಿಯಾಗಿದೆ. ಇಂದು, ರಾಷ್ಟ್ರವು ಹೊಸ ಎತ್ತರವನ್ನು ತಲುಪುತ್ತಿದೆ ಎಂದು ಹೇಳಿದರು.

ಏರೋ ಇಂಡಿಯಾವನ್ನು ಒಂದು ಸಮಯದಲ್ಲಿ ಕೇವಲ ಪ್ರದರ್ಶನಕ್ಕೆ ಸೀಮಿತ ಎಂದು ಭಾವಿಸಲಾಗುತ್ತಿತ್ತು. ಕಳೆದ ಕೆಲ ವರ್ಷಗಳಿಂದ ದೃಷ್ಟಿಕೋನ ಬದಲಾಗಿದೆ. ನವಭಾರತದ ನವಮಾರ್ಗವನ್ನು ಏರೋ ಇಂಡಿಯಾ ಪ್ರತಿಫಲಿಸುತ್ತದೆ. ಇವತ್ತು ಇದು ಕೇವಲ ಶೋ ಮಾತ್ರವಲ್ಲ ಭಾರತದ ಶಕ್ತಿಯೂ ಆಗಿದೆ. ಭಾರತದ ರಕ್ಷಣಾ ಉದ್ಯಮದ ಬೆಳವಣಿಗೆ ಮತ್ತು ಆತ್ಮವಿಶ್ವಾಸಕ್ಕೆ ಪ್ರತೀಕವಾಗಿದೆ ಎಂದು ತಿಳಿಸಿದರು. 21ನೇ ಶತಮಾನದ ನವಭಾರತವು ಯಾವುದೇ ಅವಕಾಶ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಕಠಿಣ ಪರಿಶ್ರಮ ಹಾಕಲೂ ಹಿಂದೆಮುಂದೆ ನೋಡುವುದಿಲ್ಲ. ಭಾರತದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಕ್ರಾಂತಿ ತರುತ್ತಿದ್ದೇವೆ. ರಕ್ಷಣಾ ಕ್ಷೇತ್ರ ▶ 3ನೇ ಪುಟಕ್ಕೆ

ಕುಟ್ಟ ಬಳಿ ಭಾನುವಾರ ಬಾಲಕನ ಬಲಿ ಪಡೆದ ಹುಲಿ ಸೋಮವಾರ ಅವನ ತಾತನನ್ನೂ ಕೊಂದು ಹಾಕಿತು!

- ಈ ಎರಡೂ ಸಾವಿನ ಆಘಾತದಿಂದ ಅಜ್ಜಿಯೂ ಸಾವು
- ಅರಣ್ಯಾಧಿಕಾರಿಗಳ ವಿರುದ್ಧ ಭಾರೀ ಜನಾಕ್ರೋಶ
- 48 ಗಂಟೆಯಲ್ಲಿ ಹುಲಿ ಸೆರೆ ಹಿಡಿಯುವ ಭರವಸೆ



ಗೋಣಿಕೊಪ್ಪ, ಫೆ.13– ಪೊನ್ನಂಪೇಟೆ ತಾಲೂಕು ಕುಟ್ಟಾ ಸಮೀಪದ ಪಲ್ಲೇರಿ ಬಳಿ ತೋಟದಲ್ಲಿ ಭಾನುವಾರ ಸಂಜೆ ಬಾಲಕನನ್ನು ಬಲಿ ಪಡೆದಿದ್ದ ಹುಲಿ, ಇಂದು ಬೆಳಗ್ಗೆ ಆತನ ತಾತನನ್ನೂ ಬಲಿ ಪಡೆದಿದೆ. ತಮ್ಮ ಕುಟುಂಬದ ಇಬ್ಬರ ಸಾವಿನಿಂದ ಆಘಾತಕ್ಕೊಳಗಾದ ಬಾಲಕನ ಅಜ್ಜಿಯೂ ಸಾವಿಗೀಡಾಗಿದ್ದಾರೆ.

ಭಾನುವಾರ ಸಂಜೆ 4 ಗಂಟೆ ಸುಮಾರಿನಲ್ಲಿ ಚೂರಿಕಾಡು ಗ್ರಾಮದ ನೆಲ್ಲೀರ ಪೂಣಚ್ಚ ಎಂಬುವರ ತೋಟದಲ್ಲಿ ಆಡವಾಡುತ್ತಿದ್ದ ಬಾಲಕ ಚೇತನ್ (18) ಮೇಲೆ ದಾಳಿ ಮಾಡಿದ ಹುಲಿ, ದೇಹ ಕಚ್ಚಿಕೊಂಡು ಹೋಗಿ ಒಂದು ಭಾಗವನ್ನು ತಿಂದು ಹಾಕಿತ್ತು. ಅರಣ್ಯ ಅಧಿಕಾರಿಗಳು ಶೋಧನಾ ಕಾರ್ಯ ನಡೆಸಿದಾಗ ಕಾಡಂಚಿನ ಆನೆ ಕಂದಕದಲ್ಲಿ ಬಾಲಕನ ಅರೆಬರೆ ದೇಹ ಪತ್ತೆಯಾಗಿತ್ತು.

ತನ್ನ ಮಗಳು ವೀಣಾಕುಮಾರಿ ಪುತ್ರ ಹುಲಿ ದಾಳಿಗೆ ಬಲಿಯಾದ ವಿಚಾರ ತಿಳಿದು ಚೂರಿಕಾಡು ತೋಟಕ್ಕೆ ಆಗಮಿಸಿದ್ದ ಆತನ ತಾತ ರಾಜು (60) ಇಂದು ಬೆಳಗ್ಗೆ 7 ಗಂಟೆ ಸುಮಾರಿನಲ್ಲಿ ಬಹಿರ್ದೆಸೆಗೆಂದು ಲೈನ್‌ಮನೆಯಿಂದ ಹೊರಬಂದಾಗ ಹಠಾತ್ತನೇ ದಾಳಿ ನಡೆಸಿದ ಹುಲಿ, ಆತನನ್ನು ಎಳೆದೊಯ್ಯಲು ಆರಂಭಿಸಿದೆ. ಅಕ್ಕಪಕ್ಕದಲ್ಲಿದ್ದವರು ಕೂಗಿಕೊಂಡಾಗ ಅಲ್ಲಿಂದ ಓಡಿ ಹೋಗಿದೆ. ▶ 2ನೇ ಪುಟಕ್ಕೆ


ಶಾಲೆಗಳಲ್ಲಿ ಮೊಟ್ಟೆ ಕೊಡುವುದ ನಿಲ್ಲಿಸಲ್ಲ



ಬೆಂಗಳೂರು: ಶಾಲೆಗಳಲ್ಲಿ ಮೊಟ್ಟೆ ಕೊಡುವುದನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್‌ನ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ತಿಪ್ಪೇಸ್ವಾಮಿ ಪ್ರಶ್ನೆ ಕೇಳಿದರು. ಶಾಲಾ ಮಕ್ಕಳಿಗೆ ಸರಿಯಾಗಿ ಮೊಟ್ಟೆ ವಿತರಣೆ ಆಗುತ್ತಿಲ್ಲ. ಬೆಲೆ ಜಾಸ್ತಿ ಆಯ್ತು ಅಂತ ಅಕ್ಟೋಬರ್, ನವೆಂಬರ್, ಡಿಸೆಂಬರ್‌ನಲ್ಲಿ ಮೊಟ್ಟೆ ವಿತರಣೆ ಆಗಿಲ್ಲ. ಸರ್ಕಾರ ಸಮರ್ಪಕವಾಗಿ ಮೊಟ್ಟೆ ವಿತರಣೆ ಮಾಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ವಿಪಕ್ಷ ನಾಯಕ ಹರಿಪ್ರಸಾದ್ ಧ್ವನಿಗೂಡಿಸಿ, ಕೆಲ ಶಾಲೆಗಳಲ್ಲಿ ▶ 8ನೇ ಪುಟಕ್ಕೆ

ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ವಿದ್ಯುತ್ ಪೂರೈಕೆ



ಬೆಂಗಳೂರು: ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಬೇಸಿಗೆಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ. ಬೇಸಿಗೆ ವಿದ್ಯುತ್ ಬೇಡಿಕೆ ಪೂರೈಕೆಗೆ ಸರ್ಕಾರ ಸಿದ್ಧವಿದೆ ಎಂದು ಇಂಧನ ಸಚಿವ ಸುನಿಲ್ ಕುಮಾರ್ ತಿಳಿಸಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದದಲ್ಲಿ ಬಿಜೆಪಿ ಸದಸ್ಯ ರುದ್ರೇಗೌಡ ಪ್ರಶ್ನೆಗೆ ▶ 8ನೇ ಪುಟಕ್ಕೆ

ಉದ್ಯಮಿ, ಆತನ ಪುತ್ರನ ಅಪಹರಣ; ಒತ್ತೆ ಹಣ ವಸೂಲಿ ಪ್ರಕರಣ ಬಯಲು

10 ಮಂದಿ ಕುಖ್ಯಾತ ಕ್ರಿಮಿನಲ್‌ಗಳ ಬಂಧನ

- ಮಂಡ್ಯದ ಚಂದಗಾಲುವಿನ ಬಸವಣ್ಣ ಅಲಿಯಾಸ್ ಖಾರದಪುಡಿ ಬಸವ ಪ್ರಮುಖ ಆರೋಪಿ * ಈ ಹತ್ತೂ ಮಂದಿ ವೃತ್ತಿನಿರತ ಅಪರಾಧಿಗಳು; ಎಲ್ಲರ ವಿರುದ್ಧ ವಿವಿಧ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ
- ಒಂದು ವರ್ಷದ ಹಿಂದೆ ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದ, ಜಾಡು ಹಿಡಿದು ಪ್ರಕರಣ ಭೇದಿಸಿದ ಪೊಲೀಸರು
- ಕೋಟಿ ರೂ.ಗೆ ಬೇಡಿಕೆ; ಕೊನೆ 35 ಲಕ್ಷಕ್ಕೆ ಸೆಟ್ಲ್‌ಮೆಂಟ್





ಅಪಹರಣಕಾರರ ಸೆರೆ ಹಿಡಿದ ವಿಶೇಷ ತಂಡದೊಂದಿಗೆ ಮೈಸೂರು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಇತರ ಅಧಿಕಾರಿಗಳು

ಮೈಸೂರು, ಫೆ. 13(ಎಂಟಿವೈ)–ಹಾಡಹಗಲೇ ನಂಜನಗೂಡು ತಾಲೂಕು ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಉದ್ಯಮಿ ಹಾಗೂ ಅವರ ಪುತ್ರನನ್ನು ಅಪಹರಿಸಿ, ಒತ್ತೆ ಹಣ ಪಡೆದು ಬಿಡುಗಡೆ ಮಾಡಿದ್ದ ಪ್ರಕರಣವನ್ನು ಬೇಧಿಸಿರುವ ನಂಜನಗೂಡು ಉಪವಿಭಾಗದ ಪೊಲೀಸರು, 10 ಮಂದಿ ನಟೋರಿಯಸ್ ಕ್ರಿಮಿನಲ್‌ಗಳನ್ನು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ಚಂದಗಾಲುವಿನ ಬಸವಣ್ಣ ಅಲಿಯಾಸ್ ಖಾರದಪುಡಿ ಬಸವ ಈ ಪ್ರಕರಣದ ಪ್ರಮುಖ ಆರೋಪಿಯಾಗಿದ್ದು, ಈತನ ಜೊತೆ ಕುಣಿಗಲ್‌ನ ಅಭಿ, ಪ್ರಮೋದ್ ಅಲಿಯಾಸ್ ಕಾಡ, ಶಶಿಧರ್ ಅಲಿಯಾಸ್ ಬಾತು, ರಾಹುಲ್ ಅಲಿಯಾಸ್ ಬಬ್ಲು, ಚಂದ್ರು, ಶ್ರೀಧರ್, ಮಧು, ಸಂಜಯ್ ಮತ್ತು ಉದ್ಯಮಿಯ ಕಾರ್ಖಾನೆಯ ಮಾಜಿ ನೌಕರ ಅಜಯ್ ಬಂಧಿತರಾಗಿದ್ದು, ಇವರಿಂದ 21.10 ಲಕ್ಷ ರೂ. ನಗದು, ಕೃತ್ಯಕ್ಕೆ ಬಳಸಿದ್ದ ಮಾರುತಿ ಸುಜುಕಿ ರ್ಝುನ್ ಕಾರು (ಕೆಎ 03–ಝುಡ್ 2313), ▶ 8ನೇ ಪುಟಕ್ಕೆ

ಒತ್ತೆ ಹಣದಲ್ಲಿ ದೇವರಿಗೂ ಪಾಲು!

ಪ್ರಮುಖ ಆರೋಪಿ ಚಂದಗಾಲು ಖಾರದಪುಡಿ ಬಸವ ದೈವಭಕ್ತನಾಗಿದ್ದ. ದೀಪಕ್ ಬಿಡುಗಡೆಗೆ ಪಡೆದ ಒತ್ತೆ ಹಣದಲ್ಲಿ ದೇವಾಲಯ ಹುಂಡಿಗಳಿಗೆ 2–3 ಲಕ್ಷ ರೂ.ಗಳನ್ನು ಕಾಣಿಕೆ ರೂಪದಲ್ಲಿ ಹಾಕಿದ್ದ ಎಂಬ ಸ್ವಾರಸ್ಯಕರ ಸಂಗತಿ ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ತಾನು ದುಷ್ಕೃತ್ಯ ಎಸಗಿದ ಬಳಿಕ ಕದ್ದ ಹಣದಲ್ಲಿ ಇಂತಿಷ್ಟು ಹಣವನ್ನು ದೇವರ ಹುಂಡಿ ಹಾಕುತ್ತಿದ್ದ ಈತ ದೀಪಕ್ ಅಪಹರಣದ ನಂತರ ಪಡೆದ ಒತ್ತೆ ಹಣದಲ್ಲಿ 55 ಸಾವಿರ ರೂ.ಗಳನ್ನು ಮೂಗೂರಿನ ದೇವಾಲಯದ ಹುಂಡಿಗೆ ಹಾಕಿದ್ದಾನೆ. ಅಲ್ಲದೇ ವಿವಿಧ ದೇವಾಲಯಗಳ ಹುಂಡಿಗೆ ಕಾಣಿಕೆ ಹಾಕಿ, 'ದೇವರೆ, ನನ್ನನ್ನು ಕಾಪಾಡು' ಎಂದು ಪ್ರಾರ್ಥಿಸುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

ಮಾಜಿ ನೌಕರನ ಪ್ಲಾನ್

ಉದ್ಯಮಿ ದೀಪಕ್ ಅಪಹರಣ ಪ್ರಕರಣದಲ್ಲಿ ಅವರ ಕಾರ್ಖಾನೆಯಲ್ಲಿ ಈ ಹಿಂದೆ ಟ್ಯಾಂಕರ್ ಚಾಲಕನಾಗಿದ್ದ ಅಜಯ್‌ಗೆ ದೀಪಕ್ ಅವರ ಚಲನವಲನದ ಸಂಪೂರ್ಣ ಮಾಹಿತಿ ಇತ್ತು. ಕಾನೂನು ಬಾಹಿರವಾಗಿ ಹಣ ಸಂಪಾದಿಸುತ್ತಿರುವುದಾಗಿ ಬೆದರಿಕೆ ಹಾಕಿ ದೀಪಕ್ ಅವರಿಂದ ಹಣ ವಸೂಲಿ ಮಾಡಬಹುದು ಎಂದು ಅಜಯ್ ಲೆಕ್ಕಾಚಾರ ಮಾಡಿದ್ದ.

ಕೆಲ ತಿಂಗಳ ಹಿಂದಷ್ಟೇ ದೀಪಕ್ ಅವರಿಂದ ಕೆಲಸ ತೊರೆದಿದ್ದ. ಆದರೆ ತನಗೆ ಪರಿಚಯವಿದ್ದ ಚಂದಗಾಲು ಖಾರದಪುಡಿ ಬಸವನೊಂದಿಗೆ ಉದ್ಯಮಿ ದೀಪಕ್ ಅವರನ್ನು ಅಪಹರಿಸಿ ಹಣ ವಸೂಲಿ ಮಾಡಬಹುದು. ಎಂದು ಹೇಳಿದ್ದ. ಇದನ್ನೇ ಮುಂದಿಟ್ಟುಕೊಂಡು ಫೆ.6ರಂದು ದೀಪಕ್ ಹಾಗು ಅವರ ಪುತ್ರನನ್ನು ಅಪಹರಿಸಿ ಒತ್ತೆ ಹಣ ಪಡೆಯಲಾಗಿತ್ತು.

ಮಾ.15ರೊಳಗೆ ಮೈಸೂರು–ಕುಶಾಲನಗರ ಹೆದ್ದಾರಿ

ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಿ

ಅಧಿಕಾರಿಗಳಿಗೆ ಸಂಸದ ಪ್ರತಾಪ್‌ಸಿಂಹ ಸೂಚನೆ




ಮೈಸೂರು, ಫೆ.13(ಆರ್‌ಕೆ)– ಮೈಸೂರು ಮತ್ತು ಕುಶಾಲನಗರ ನಡುವೆ 3,529.76 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಮಾರ್ಚ್ 15ರೊಳಗಾಗಿ ಚಾಲನೆ ನೀಡಲು ಚಿಂತನೆ ನಡೆಸಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಡಿಸಿ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪೂರ್ವ ಸಿದ್ಧತಾ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಐದು ಪ್ಯಾಕೇಜ್‌ಗಳಲ್ಲಿ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಹೆಚ್‌ಎಐ)ವು ಮೈಸೂರು–ಕುಶಾಲನಗರ ಹೆದ್ದಾರಿ (92 ಕಿ.ಮೀ.) ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, ಮಾರ್ಚ್ 5 ರೊಳಗೆ ಭೂಸ್ವಾಧೀನ ಪ್ರಕ್ರಿಯೆ ಅಡಚಣೆಗಳನ್ನು ನಿವಾರಿಸಿ ಎಂದು ತಿಳಿಸಿದರು. ಯೋಜನೆಗೆ 664.897 ಎಕರೆ ಭೂಮಿ ಅಗತ್ಯವಿದ್ದು, ಭೂಸ್ವಾಧೀನ ಪರಿಹಾರಕ್ಕೆ 1,113.18 ಕೋಟಿ ರೂ. ಹಾಗೂ ಚತುಷ್ಪಥ ಹೆದ್ದಾರಿ ನಿರ್ಮಿಸಲು 2,416.578 ಕೋಟಿ ರೂ. ಒಟ್ಟು 3,529.76 ಕೋಟಿ ರೂ. ಅನುದಾನ ಬೇಕಾಗುತ್ತದೆ. ಕೇಂದ್ರ ಸರ್ಕಾರವು ರಸ್ತೆ ನಿರ್ಮಾಣ ವೆಚ್ಚವನ್ನು ಭರಿಸಿ, ಯೋಜನೆ ಅನುಷ್ಠಾನ ಮಾಡಲಿದೆ ಎಂದು ಪ್ರತಾಪ್ ಸಿಂಹ ನುಡಿದರು.

ಅಗತ್ಯವಿರುವ ಭೂಮಿ ಸ್ವಾಧೀನಪಡಿಸಿ, ಮಾಲೀಕರಿಗೆ ಪರಿಹಾರ ನೀಡಲು ಇರುವ ಅಡೆತಡೆಗಳನ್ನು ನಿವಾರಿಸಬೇಕು. ಭೂಮಿಯ ನಿಜವಾದ ಭೂ ಮಾಲೀಕರನ್ನು ಗುರುತಿಸಿ ಪರಿಹಾರ ಕಲ್ಪಿಸಲು ಅನುವು ಮಾಡಿಕೊಡಬೇಕು. ಈ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಮುಗಿಸದಿದ್ದರೆ, ಯೋಜನೆ ಆರಂಭಿಸಲು ವಿಳಂಬವಾಗುತ್ತದೆ ಎಂದು ನುಡಿದರು. ಮೈಸೂರು, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳಲ್ಲಿ ಹೆದ್ದಾರಿ ಹಾದು ಹೋಗುವ ಮಾರ್ಗದ ಖಾಸಗಿ ಜಮೀನು ಸ್ವಾಧೀನಪಡಿಸಲು ಆರ್‌ಟಿಸಿ ತಿದ್ದುಪಡಿ, ದುರಸ್ತಿ ಮಾಡಬೇಕು. ಹಂಗಾಮಿ ಸಾಗುವಳಿ ಪತ್ರ ಪಡೆದು ಸ್ವಾಧೀನಾನುಭವದಲ್ಲಿರುವ ರೈತರ ಹೆಸರಿಗೆ ದಾಖಲೆಗಳನ್ನು ಪರಿಶೀಲಿಸಿ ಖಾಯಂ ಸಾಗುವಳಿ ಚೀಟಿ ನೀಡಿ ಪರಿಹಾರ ಮಂಜೂರು ಮಾಡಲು ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಎಂದು ಪ್ರತಾಪ್ ಸಿಂಹ ತಿಳಿಸಿದರು. ಹೆದ್ದಾರಿ ಹಾದು ▶ 2ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮಾರ್ಚ್ ಎರಡನೇ ವಾರ ಉದ್ಘಾಟನೆ

ಎರಡೂ ಕಡೆ ಸೇರಿ 250 ರೂ. ಟೋಲ್ ನಿಗದಿ ಸಾಧ್ಯತೆ



ಮೈಸೂರು, ಫೆ.13(ಆರ್‌ಕೆ)– ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯನ್ನು ಮಾರ್ಚ್ ಎರಡನೇ ವಾರ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಎಕ್ಸ್‌ಪ್ರೆಸ್‌ವೇಯನ್ನು ಉದ್ಘಾಟಿಸಲಿದ್ದಾರೆ. ಈ ರಸ್ತೆಯಲ್ಲಿ ಕೇವಲ ಒಂದೂವರೆ ಗಂಟೆಯಲ್ಲಿ ಪ್ರಯಾಣಿಸಬಹುದಾಗಿದ್ದು, ಮಾರ್ಗ ಮಧ್ಯೆ ಚನ್ನಪಟ್ಟಣ ಸಮೀಪ ತಂಗುದಾಣ ನಿರ್ಮಿಸಿ ಅಲ್ಲಿ ಪ್ರಯಾಣಿಕರಿಗೆ ವಿಶ್ರಾಂತಿ ಕೊಠಡಿಗಳು, ಶೌಚಾಲಯ, ಹೋಟೆಲ್, ಶಾಪಿಂಗ್ ಕಾಂಪ್ಲೆಕ್ಸ್ ಸೇರಿದಂತೆ ಹಲವು ಸೌಲಭ್ಯವನ್ನು ಒದಗಿಸಲಾಗುವುದು ಎಂದರು. ಪೆಟ್ರೋಲ್ ಬಂಕ್, ಎಲೆಕ್ಟ್ರಿಕ್ ವಾಹನಗಳಿಗೆ ಚಾರ್ಜಿಂಗ್ ಘಟಕ ಸ್ಥಾಪಿಸಲು ತಯಾರಿ ನಡೆಯುತ್ತಿದೆ. ಅದೇ ರೀತಿ ಟೋಲ್ ಪ್ಲಾಜಾದಲ್ಲಿ ವಾಹನಗಳಿಂದ ಟೋಲ್ ಫೀಯನ್ನು ಸಂಗ್ರಹಿಸಲಾಗುತ್ತದೆ. ಫ್ಲೈ ಓವರ್‌ಗಳು, ಕೆಳ ಸೇತುವೆ, ಬೈಪಾಸ್‌ಗಳಿರುವುದರಿಂದ ಕಿಮೀಗೆ ಇಂತಿಷ್ಟೆಂದು ಹೆದ್ದಾರಿ ನಿಯಮಗಳಿಗನುಸಾರ ಟೋಲ್ ದರ ನಿಗದಿಗೊಳಿಸಲಾಗುತ್ತದೆ. ಅಂದಾಜಿನ ಪ್ರಕಾರ ಎರಡೂ ಕಡೆಯ ಪ್ರಯಾಣಕ್ಕೆ ಕನಿಷ್ಠ 250 ರೂ. ದರ ನಿಗದಿಯಾಗಬಹುದು ಎಂದು ಅವರು ತಿಳಿಸಿದರು. ಈ ದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಗೆ ಯಾವುದೇ ವ್ಯಕ್ತಿಯ ಹೆಸರಿಟ್ಟಿರುವ ಉದಾಹರಣೆ ಇಲ್ಲ. ಅದಕ್ಕಾಗಿಯೇ ▶ 2ನೇ ಪುಟಕ್ಕೆ

ಇಂದು ಪುಲ್ವಾಮಾ ದಾಳಿ ಕರಾಳ ದಿನಾಚರಣೆ; ಯೋಧರ ಸ್ಮರಣೆ

ಮೈಸೂರು, ಫೆ. 13–ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರನ್ನು ಸ್ಮರಿಸುವ ದಿನವನ್ನು ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ (ಮೆಟ್ರೋ ಪೋಲ್ ವೃತ್ತ) ಯುವ ಭಾರತ್ ಸಂಘಟನೆ ವತಿಯಿಂದ ನಾಳೆ (ಫೆ.14) ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ ಎಂದು ಯುವ ಭಾರತ್ ಸಂಘಟನೆಯ ಸಂಚಾಲಕರಾದ ಶರತ್ ಭಂಡಾರಿ ಹೇಳಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಮೈಸೂರು ನಗರ ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾದ ಅಧ್ಯಕ್ಷ ಜೋಗಿ ಮಂಜು, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ ಇನ್ನಿತರರು ಭಾಗವಹಿಸಲಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು, ಫೆ.13– ಡಾ. ಜೆ. ಮಹದೇವ್ ಅವರ ಮಾರ್ಗದರ್ಶನದಲ್ಲಿ ಬಿ.ಎನ್. ಅನಂತಕುಮಾರ್ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ರೋಟರಿ ಮೈಸೂರು ಉತ್ತರ ಮೀಡಿಯಾ ಹೌಸ್ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಪೋರೇಟ್ ವಲಯ ರೋಟರಿ ಇಮೇಜಿನ್ ಕ್ರಿಕೆಟ್ ಕಪ್ ಪಂದ್ಯಾವಳಿಯ ಫೈನಲ್‌ನಲ್ಲಿ ಜಯ ಗಳಿಸಿದ ಪೊಲೀಸ್ 'ಎ' ತಂಡಕ್ಕೆ ಕಪ್ ನೀಡಲಾಯಿತು. ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ವಲಯ ಸೇನಾನಿ ರಾಜಶೇಖರ ಕದಂಬ, ಅಧ್ಯಕ್ಷ ಎಸ್.ಹೆಚ್.ಜಗದೀಶ್, ಕಾರ್ಯದರ್ಶಿ ಲೋಕನಾಥ್, ನಂಜುಂಡಸ್ವಾಮಿ, ಉದಯ್ ಎಸ್.ಕುಮಾರ್, ರತ್ನರಾಜ್, ಉಮೇಶ್ ಇದ್ದಾರೆ.

ನಿಧನ



ಮಹದೇವ ರಾವ್

ಮೈಸೂರು, ಫೆ. 13– ಚಾಮರಾಜನಗರ ನಿವೃತ್ತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಮೈಸೂರಿನ ರಾಮಕೃಷ್ಣನಗರದ ನಿವಾಸಿ ಮಹದೇವರಾವ್(75) ಭಾನುವಾರ ಬೆಂಗಳೂರಿನಲ್ಲಿ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಂಗಳೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ತಾತನನ್ನೂ ಕೊಂದು ಹಾಕಿತು!

ಹುಲಿ ದಾಳಿಯಿಂದ ತೀವ್ರ ಗಾಯಗೊಂಡು ಸ್ಥಳದಲ್ಲೇ ರಾಜು ಸಾವನ್ನಪ್ಪಿದ್ದರು. ತಮ್ಮ ಕುಟುಂಬದ ದುರಂತದಿಂದ ಅಘಾತಕ್ಕೊಳಗಾದ ಬಾಲಕನ ಅಜ್ಜಿ ಜಯಮ್ಮ (55) ಕುಸಿದುಬಿದ್ದು, ಸಾವನ್ನಪ್ಪಿದ್ದಾರೆ.

ಅಧಿಕಾರಿಗಳಿಗೆ ಘೇರಾವ್: ಘಟನಾ ಸ್ಥಳಕ್ಕೆ ಹಿರಿಯ ಅರಣ್ಯ ಇಲಾಖೆ ಅಧಿಕಾರಿಗಳು ಆಗಮಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದೆ ಹೋದಲ್ಲಿ ದೇಹವನ್ನು ಕೊಂಡೊಯ್ಯಲು ಬಿಡುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟುಹಿಡಿದರು. ಬಳಿಕ ಸ್ಥಳಕ್ಕೆ ಡಿಎಫ್‌ಓ ಎ.ಟಿ. ಪೂವಯ್ಯ, ಸಿಸಿಎಫ್ ನಿರಂಜನ್ ಮೂರ್ತಿ, ನಾಗರಹೊಳೆ ಅಭಯಾರಣ್ಯದ ಆರ್‌ಎಫ್‌ಓ ಮೊಹಮದ್ ಜಶಾನ್, ಇತರ ಅರಣ್ಯ ಇಲಾಖೆ ಅಧಿಕಾರಿಗಳು, ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಅಡಿಷನಲ್ ಎಸ್.ಪಿ. ಸುಂದರ್ ರಾಜ್ ಅವರುಗಳು ತೆರಳಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಅರಣ್ಯ ಅಧಿಕಾರಿಗಳನ್ನು ಸುತ್ತುವರೆದ ಪ್ರತಿಭಟನಾಕಾರರು, ಧಿಕ್ಕಾರದ ಘೋಷಣೆಗಳನ್ನು ಕೂಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಭಾನುವಾರ ದಿನ ಮಾನವ ಜೀವ ಬಲಿ ನಡೆದ ಸಂದರ್ಭವೇ ಹುಲಿ ಸೆರೆಗೆ ಕಾರ್ಯಾಚರಣೆ ಏಕೆ ನಡೆಸಲಿಲ್ಲ, ಸ್ಥಳದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳನ್ನು ನಿಯೋಜಿಸಲು ವಿಫಲವಾಗಿದ್ದೇ ಮತ್ತೊಂದು ಜೀವ ಬಲಿಗೆ ಕಾರಣವಾಗಿದೆ. ಈ ಘಟನೆಗಳಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳೇ ನೇರ ಕಾರಣ. ಎಸಿಎಫ್ ಹಾಗೂ ಆರ್‌ಎಫ್‌ಓ ವಿರುದ್ಧ ಎಫ್‌ಐಆರ್ ದಾಖಲಿಸಿ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕು. ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು, ತಕ್ಷಣವೇ ಜಾರಿಯಾಗುವಂತೆ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಪ್ರತಿಭಟನಾಕಾರರು ಆಕ್ರೋಶ ಹೊರಗೆಡವಿದರು.

25 ಹುಲಿ ಸೆರೆಗೆ ಕ್ರಮ: ನಾಗರಹೊಳೆ ವ್ಯಾಪ್ತಿಯಲ್ಲಿ ಹುಲಿಗಳ ಸಂಖ್ಯೆ ಮಿತಿ ಮೀರಿದೆ. 2 ಕಿ.ಮೀ.ಗೆ 1 ರಂತೆ ಹುಲಿಗಳ ಸಂಖ್ಯೆ ಏರಿಕೆಯಾಗಿರುವುದೇ ಸಮಸ್ಯೆಗೆ ಮೂಲ ಕಾರಣವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಒಂದು ಹುಲಿ ಸೆರೆಯಿಂದ ಮೂಲ ಸಮಸ್ಯೆ ಪರಿಹಾರವಾಗಲ್ಲ. ಮುಂದಿನ ದಿನಗಳಲ್ಲಿ ಮತ್ತಷ್ಟು ಜೀವ ಬಲಿ ನಡೆಯುವ ಎಲ್ಲಾ ಸಾಧ್ಯತೆಗಳಿವೆ ಎಂದು ಪ್ರತಿಭಟನಾಕಾರರು ಆತಂಕ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಸಿಎಫ್ ನಿರಂಜನ್ ಮೂರ್ತಿ, ನಾಗರಹೊಳೆ ವ್ಯಾಪ್ತಿಯಲ್ಲಿ ಒಟ್ಟು 25 ಹುಲಿಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮೊದಲ ಹಂತವಾಗಿ ಈಗಾಗಲೇ 6 ಹುಲಿಗಳನ್ನು ಗುರುತಿಸಲಾಗಿದೆ. ಮುಂದಿನ 5 ತಿಂಗಳ ಒಳಗೆ ಎಲ್ಲಾ ಹುಲಿಗಳನ್ನು ಗುರುತಿಸಿ ಸೆರೆ ಹಿಡಿದು ಸ್ಥಳಾಂತರ ಮಾಡಲಾಗುತ್ತದೆ. ಈ ಹುಲಿಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗುತ್ತದೆ. ಒಂದು ತಿಂಗಳ ಒಳಗೆ ರೇಡಿಯೊ ಕಾಲರ್ ಕೂಡ ವಿತರಣೆಯಾಗಲಿದೆ ಎಂದು ಮಾಹಿತಿ ನೀಡಿದರು. ಹಿರಿಯ ಅರಣ್ಯಾಧಿಕಾರಿಯ ಸಮಜಾಯಿಷಿಕೆಗಳಿಗೂ ಬಗ್ಗದ ಪ್ರತಿಭಟನಾಕಾರರು ತಮ್ಮ ಅಸಮಾಧಾನ ಹೊರಹಾಕಿದರು.

> **“ ಹುಲಿ ದಾಳಿಯಿಂದ ಒಂದೇ ಕುಟುಂಬದ ಇಬ್ಬರು ಮೃತಪಟ್ಟಿದ್ದು, ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. 48 ಗಂಟೆಯ ಒಳಗೆ ಹುಲಿಯನ್ನು ಸೆರೆ ಹಿಡಿಯಲಾಗುತ್ತದೆ. ಮೃತರ ಕುಟುಂಬಕ್ಕೆ ಮೊದಲ ಹಂತವಾಗಿ 5 ಲಕ್ಷ ರೂ.ಗಳ ಪರಿಹಾರ ವಿತರಿಸಲಾಗಿದೆ. ಹುಲಿ ಸೆರೆಗೆ 100 ಮಂದಿಯ ತಂಡ ರಚಿಸಲಾಗಿದ್ದು, ಎಲ್ಲಾ ಸಿದ್ಧತೆಗಳನ್ನು ಈಗಾಗಲೇ ಮಾಡಿಕೊಳ್ಳಲಾಗಿದೆ.**
>
> **–ನಿರಂಜನ್ ಮೂರ್ತಿ, ಸಿಸಿಎಫ್ ಕೊಡಗು ವೃತ್ತ**

ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಿ

ಹೋಗುವ ಜಮೀನು ಗಳಲ್ಲಿ ಬೆಳೆದಿರುವ ಮರ, ತೋಟಗಾರಿಕೆ ಬೆಳೆ, ನಿರ್ಮಿಸಿರುವ ಕಟ್ಟಡಗಳಿಗೆ ಬೆಲೆ ನಿಗದಿಗೊಳಿಸಬೇಕು. ಅರಣ್ಯ ಪ್ರದೇಶ, ನದಿ, ಕಾಲುವೆ, ಕೆರೆಗಳಿದ್ದರೆ, ವಿದ್ಯುತ್ ಉಪ ಕೇಂದ್ರಗಳು, ಟ್ರಾನ್ಸ್‌ಫಾರ್ಮರ್, ಕಂಬಗಳ ಸ್ಥಳಾಂತರ ಸೇರಿದಂತೆ ಇನ್ನಿತರ ಯಾವುದೇ ತೊಂದರೆಗಳನ್ನು ನಿವಾರಿಸು ವಂತೆಯೂ ಅವರು ತಿಳಿಸಿದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯನ್ನು ಲೋಕಾರ್ಪಣೆ ಮಾಡುವ ದಿನವೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಲು ಉದ್ದೇಶಿಸಿರುವುದರಿಂದ ಮೂರೂ ತಾಲೂಕುಗಳ ತಹ ಸೀಲ್ದಾರರು, ಗ್ರಾಮ ಲೆಕ್ಕಿಗರು, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ಉಪವಿಭಾಗಾಧಿಕಾರಿ ಗಳು, ಭೂ ದಾಖಲೆಗಳ ಉಪನಿರ್ದೇಶಕರು, ಚೆಸ್ಕಾಂ, ಅರಣ್ಯ ಇಲಾಖೆ, ನೀರಾವರಿ, ತೋಟಗಾರಿಕೆ,

ಭೂ ಸ್ವಾಧೀನಾಧಿಕಾರಿಗಳು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಸಮನ್ವಯ ಸಾಧಿಸಿ ಭೂ ಸ್ವಾಧೀನಕ್ಕೆ ಪ್ರಕ್ರಿಯೆ ಚುರುಕುಗೊಳಿಸಬೇಕೆಂದು ಸಂಸದರು ಇದೇ ಸಂದರ್ಭ ಸೂಚನೆ ನೀಡಿದರು. ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಬಿ.ಟಿ. ಶ್ರೀಧರ್, ಭೂ ಸ್ವಾಧೀನಾಧಿಕಾರಿ ಹರ್ಷವರ್ಧನ್, ಉಪವಿಭಾಗಾಧಿಕಾರಿ ಕೆ.ಆರ್. ರಕ್ಷಿತ್ ಹಾಗೂ ಇತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಮಾರ್ಚ್ ಎರಡನೇ ವಾರ ಉದ್ಘಾಟನೆ

ನಾನು ಮೂರು ಜಿಲ್ಲೆಗಳನ್ನು ಸಂಪರ್ಕಿಸುವ ಕಾವೇರಿ ನದಿಯ ಹೆಸರನ್ನು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಗೆ ನಾಮಕರಣ ಮಾಡುವಂತೆ ಸಲಹೆ ನೀಡಿದ್ದೇನೆ. ಆದರೆ ಕೆಲವರು ರಾಜ ಮನೆತನದವರ ಹೆಸರಿಡುವಂತೆ ಹೇಳಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದ ಪ್ರತಾಪ್ ಸಿಂಹ, ಈಗಾಗಲೇ ರಾಜಮನೆತನಕ್ಕೆ ನಾವು ಅಪಾರ ಮನ್ನಣೆ, ಗೌರವ ನೀಡಿದ್ದೇವೆ. ಅವರನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದರು.

ಸಮೃದ್ಧ ಜೀವನಕ್ಕಾಗಿ ಕಾಂಗ್ರೆಸ್ ಬೆಂಬಲಿಸಿ

ಬೂತ್ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಕೆ.ಮರೀಗೌಡ ಮನವಿ



ಮೈಸೂರು, ಫೆ.13(ಎಸ್‌ಬಿಡಿ)– ಸಮೃದ್ಧ ಜೀವನಕ್ಕಾಗಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವಂತೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮೈಸೂರಿನ ರಾಮಕೃಷ್ಣನಗರ 58ನೇ ವಾರ್ಡ್‌ನಲ್ಲಿ ನಡೆದ ಬೂತ್ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬರುವುದು ಖಚಿತ. ನಂತರ ಬಡವರಿಗೆ ತಲಾ 10 ಕೆಜಿ ಅಕ್ಕಿ, ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಮನೆಯ ಮುಖ್ಯಸ್ಥೆಗೆ 2 ಸಾವಿರ ನೆರವು ಸೇರಿದಂತೆ ಹತ್ತಾರು ಜನಪರ ಕಾರ್ಯಗಳ ಅನುಷ್ಠಾನವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೇಶದಲ್ಲಿ ಎಲ್ಲಾ ವರ್ಗ ಹಾಗೂ ಧರ್ಮದವರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ಏಕೈಕ ಪಕ್ಷ ಕಾಂಗ್ರೆಸ್. ಕೇಂದ್ರದಲ್ಲಿ ಬಿಜೆಪಿ ಕಳೆದ 8 ವರ್ಷಗಳಲ್ಲಿ ದೇಶವನ್ನೇ ಲೂಟಿ ಮಾಡಿದೆ. ಡೀಸೆಲ್, ಪೆಟ್ರೋಲ್, ಗ್ಯಾಸ್ ಬೆಲೆ ಏರಿಸಿ ಸಾಮಾನ್ಯರ ಬದುಕನ್ನು ದುಸ್ತರ ಮಾಡಿದೆ. ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಕಾಮಗಾರಿ ಗುತ್ತಿಗೆಯಲ್ಲಿ 40 ಪರ್ಸೆಂಟ್ ಕಮಿಷನ್, ಪಿಎಸ್‌ಐ ಹಗರಣ, ಕೊರೊನಾ ನಿರ್ವಹಣೆಯಲ್ಲಿನ ಹಗರಣ ಮೂಲಕ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಆರೋಪಿಸಿದರು. ಬೂತ್ ಮಟ್ಟದ ಕಾರ್ಯಕರ್ತರು ಬಿಜೆಪಿ ಸರ್ಕಾರದ ಹಗರಣ ಹಾಗೂ ವೈಫಲ್ಯಗಳನ್ನು ಜನರಿಗೆ ತಿಳಿಸಿ ಅವರಲ್ಲಿ ಜಾಗೃತಿ ಮೂಡಿಸಬೇಕು. ಸಮೃದ್ಧ ಜೀವನಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವಂತೆ ಮನವಿ ಮಾಡಬೇಕು. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ 1,500 ಕೋಟಿ ನೀಡಿದ್ದಾರೆ. ಅನ್ನಭಾಗ್ಯ, ಕ್ಷೀರಭಾಗ್ಯ, ಮೈತ್ರಿ, ಮನಸ್ವಿನಿ, ಕೃಷಿಭಾಗ್ಯ, ರೈತರ ಸಾಲಮನ್ನಾ, ಪರಿಶಿಷ್ಟ ಜಾತಿ, ಪಂಗಡದವರ ಸಾಲಮನ್ನಾ, ಬಡ್ತಿ ಮೀಸಲಾತಿ ಹೀಗೆ ಹತ್ತಾರು ಜನಪರ ಕಾರ್ಯಕ್ರಮಗಳ ಮೂಲಕ ನುಡಿದಂತೆ ನಡೆದಿದ್ದಾರೆ. ಈ ಎಲ್ಲಾ ವಿಷಯಗಳನ್ನು ಮನವರಿಕೆ ಮಾಡಿಕೊಡಬೇಕು ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂಬ ಸಂಕಲ್ಪದೊಂದಿಗೆ ಶ್ರಮಿಸುತ್ತಿದ್ದಾರೆ. ಹಾಗೆಯೇ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವ ಆಕಾಂಕ್ಷೆಯೊಂದಿಗೆ ಅರ್ಜಿ ಸಲ್ಲಿಸಿರುವ 6 ಮಂದಿಯಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವುದಾಗಿ ಇದೇ ವೇಳೆ ತಿಳಿಸಿದರು. ಸಭೆಯಲ್ಲಿ ಜಿಪಂ ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಮಾದೇಗೌಡ, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಮೆಲ್ಲಹಳ್ಳಿ ಮಹದೇವಸ್ವಾಮಿ, ಜೆ.ಜೆ.ಆನಂದ, ಮಾರ್ಬಳ್ಳಿ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಸತೀಶ್‌ಕುಮಾರ್, ಜಗದೀಶ್, ಚಂದ್ರು, ರಾಜೇಶ್, ಬಿಎಸ್‌ಎನ್‌ಎಲ್ ಮಾದೇಗೌಡ, ಆರೀಫ್ ಹುಸೇನ್, ಸೋಮಣ್ಣ, ರವಿ, ಶಿವಕುಮಾರ್, ರಾಜೇಂದ್ರ ಶಿವರಾಜ್ ಶೆಟ್ಟಿಹಳ್ಳಿ, ಚೂಡಾಮಣಿ, ಮಲ್ಲಿಕಾ, ಮಲ್ಲೇಶ್, ಸಂದೀಪ್ ಸಿದ್ದೇಗೌಡ, ಶಂಕರ, ನಾಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಇಂದು ಪಿಯುಸಿ ಪಠ್ಯಾಧಾರಿತ ರಂಗಪ್ರದರ್ಶನ

ಮೈಸೂರು, ಫೆ.13–ಅದಮ್ಯ ರಂಗ ಶಾಲೆ, ದಕ್ಷ ಪಿಯು ಕಾಲೇಜು ಹಾಗೂ ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ಫೆ. 14ರಂದು ಸಂಜೆ 5.30 ಗಂಟೆಗೆ ನಗರದ ಹೂಟಗಳ್ಳಿಯ ದಕ್ಷ ಪಿ.ಯು. ಕಾಲೇಜಿನಲ್ಲಿ ಪಿಯುಸಿ ಪಠ್ಯಾಧಾರಿತ ನಾಟಕ ಪ್ರದರ್ಶನ ನಡೆಯಲಿದೆ ಎಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ರಂಗ ಪ್ರದರ್ಶನಕ್ಕೆ ಮೈಸೂರು ಕಂದಾಯ ವಿಭಾಗದ ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಪಿ.ಶಿವರಾಜು ಚಾಲನೆ ನೀಡಲಿದ್ದು, ದಕ್ಷ ಪಿ.ಯು. ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರರಾಜು ಅಧ್ಯಕ್ಷತೆ ವಹಿಸುವರು. ಸ್ಪಂದನಾ' ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು.

ವಿಜಯನಗರ ಪೊಲೀಸ್ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಜಿ.ಎಸ್. ಗಜೇಂದ್ರ ಪ್ರಸಾದ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ. ಗೋವಿಂದರಾಜು, ದಕ್ಷ ಪಿಯು ಕಾಲೇಜಿನ ಪ್ರಾಂಶುಪಾಲ ಎಂ. ಅಭಿಷೇಕ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಪಠ್ಯವಾಗಿರುವ ಡಾ. ಬೆಸಗರಹಳ್ಳಿ ರಾಮಣ್ಣ, ಪಿ. ಲಂಕೇಶ್, ಡಾ. ವೀಣಾ ಶಾಂತೇಶ್ವರ ಹಾಗೂ ಡಾ. ಎಚ್. ನಾಗವೇಣಿ ಅವರ ನಾಲ್ಕು ಕತೆಗಳ ರಂಗರೂಪ ಪ್ರದರ್ಶನ ನಡೆಯಲಿದೆ.

ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಆರೋಪ

ಮುರುಘಾ ಶ್ರೀ ಪ್ರಕರಣ: 761 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಕೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಎರಡನೇ ಪ್ರಕರಣದ ತನಿಖೆ ನಡೆಸಿದ ಪೊಲೀಸರು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ 761 ಪುಟಗಳ ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ. ತನಿಖಾಧಿಕಾರಿ ಜ.10ರಂದು ಸಲ್ಲಿಸಿದ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯ ಫೆ.10ರಂದು ಸ್ವೀಕರಿಸಿದೆ. 'ಎ' ಮತ್ತು 'ಬಿ' ಎಂಬ ಎರಡು ದೋಷಾರೋಪ ಪಟ್ಟಿಯನ್ನು ತನಿಖಾಧಿಕಾರಿ ನೀಡಿದ್ದಾರೆ. 'ಎ' 366 ಹಾಗೂ 'ಬಿ' 395 ಪುಟಗಳ ದೋಷಾರೋಪಪಟ್ಟಿ ಇದೆ. 73 ಸಾಕ್ಷ್ಯಗಳನ್ನು ಪೊಲೀಸರು ಉಲ್ಲೇಖಿಸಿದ್ದಾರೆ. ನಾಲ್ವರು ಸಂತ್ರಸ್ತ ವಿದ್ಯಾರ್ಥಿನಿಯರ ಪೈಕಿ ಇಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂದು ಹೇಳಿದ್ದಾರೆ.

ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಪೋಕ್ಸೊ ಕಾಯ್ದೆಯಡಿ ಅ.13ರಂದು ಪ್ರಕರಣ ದಾಖಲಾಗಿತ್ತು. ಮುರುಘಾಮಠದ ಶಿವಮೂರ್ತಿ ಶರಣರು, ಹಾಸ್ಟೆಲ್ ವಾರ್ಡನ್, ಮಠದ ಉತ್ತರಾಧಿಕಾರಿ ಬಾಲಕ, ಮಾಜಿ ವ್ಯವಸ್ಥಾಪಕ ಪರಮಶಿವಯ್ಯ, ವಕೀಲ ಗಂಗಾಧರ, ಶರಣರ ಸಹಾಯಕ ಮಹಾಲಿಂಗ, ಅಡುಗೆಭಟ್ಟ ಕರಿಬಸಪ್ಪ ವಿರುದ್ಧ ದೂರು ದಾಖಲಾಗಿತ್ತು. ಶಿವಮೂರ್ತಿ ಶರಣರು ಹಾಗೂ ಹಾಸ್ಟೆಲ್ ವಾರ್ಡನ್ ಹೊರತುಪಡಿಸಿ ಉಳಿದವರ ಮೇಲೆ ಆರೋಪ ಸಾಬೀತುಪಡಿಸುವ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂದು ತನಿಖಾಧಿಕಾರಿ ಅಭಿಪ್ರಾಯಪಟ್ಟಿದ್ದಾರೆ.

ವಿಶ್ರಾಂತ ಅಂಚೆ ಅಧಿಕಾರಿಗಳ ಸಮ್ಮಿಲನ

ಅಂಚೆ ಇಲಾಖೆ ಇತಿಹಾಸದಲ್ಲಿ ಮೊದಲ ಪ್ರಯತ್ನ



ಮೈಸೂರು, ಫೆ. 13– ವಿಶ್ರಾಂತ ಅಂಚೆ ಅಧಿಕಾರಿಗಳ (ವೃಂದ ಎ ಮತ್ತು ಬಿ) ಸಮ್ಮಿಲನ ಕಾರ್ಯಕ್ರಮವು ನಗರದ ನಾರಾಯಣಶಾಸ್ತ್ರಿ ರಸ್ತೆಯ ಹೊಯ್ಸಳ ಕರ್ನಾಟಕ ಬ್ರಾಹ್ಮಣ ಸಂಘದ ಸಭಾಂಗಣದಲ್ಲಿ ಶನಿವಾರ ನೆರವೇರಿತು.

ನಗರದಲ್ಲಿ ವಾಸಿಸುತ್ತಿರುವ ಭಾರತೀಯ ಅಂಚೆ ಅಧಿಕಾರಿಗಳನ್ನು ಒಂದೆಡೆ ಸೇರಿಸಿ ಅವರ ನಡುವೆ ಸಂಪರ್ಕ ಬೆಸೆಯುವ ಪ್ರಯತ್ನದೊಡನೆ, ನಿವೃತ್ತಿಯ ನಂತರ ಇದೇ ಮೊದಲ ಬಾರಿಗೆ ಅಧಿಕಾರಿಗಳು ಮುಖಾಮುಖಿಯಾದ ಸಂತೋಷದ ಗಳಿಗೆಗೆ ಈ ಕಾರ್ಯಕ್ರಮ ಸಾಕ್ಷಿಯಾಯಿತು. ಅಂಚೆ ಇಲಾಖೆ ಇತಿಹಾಸದಲ್ಲಿಯೇ ಇದು ಪ್ರಥಮ ಸಮ್ಮಿಲನ ಎನಿಸಿತು.

ಬೆಂಗಳೂರಿನ ಚೀಫ್ ಪೋಸ್ಟ್ ಮಾಸ್ಟರ್ ಆಗಿ ನಿವೃತ್ತರಾದ ಎಸ್. ಬಾಲಸುಬ್ರಹ್ಮಣಿಯನ್ ಅಧ್ಯಕ್ಷತೆ ವಹಿಸಿದ್ದರು. ಅಂಚೆ ಇಲಾಖೆಯ ನಿವೃತ್ತ ಅಧಿಕಾರಿಗಳಲ್ಲೇ ಅತ್ಯಂತ ಹಿರಿಯರಾದ ಬಾಲಸುಬ್ರಹ್ಮಣಿಯನ್ ಅವರು 93 ವರ್ಷದ ಇಳಿ ವಯಸ್ಸಿನಲ್ಲೂ ಬಹಳ ಲವಲವಿಕೆಯಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಆಧ್ಯಾತ್ಮ ಸೇರಿದಂತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಉಪಯುಕ್ತ ಮೌಲ್ಯಗಳ ಕುರಿತು ಉಪನ್ಯಾಸ ನೀಡಿದರು. ನಿವೃತ್ತ ಅಧಿಕಾರಿಗಳಾದ ಎನ್.ನಾಗಲಕ್ಷ್ಮೀ ಮತ್ತು ಮೈಸೂರು ಎಸ್‌ಎಸ್‌ಪಿ ಎ.ಕೊರಗಪ್ಪ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಮೋಹನ್ ರಾಮ್ ಅವರು ಶಾಸ್ತ್ರೀಯ ಮತ್ತು ಚಲನಚಿತ್ರಗೀತೆಗಳನ್ನು ಪ್ರಸ್ತುತಪಡಿಸಿದರು. ಡಿ.ಶಿವಯ್ಯ ಪ್ರಾಸ್ತಾವಿಕ ಭಾಷಣ ಮಾಡಿದರು. ಎಸ್.ರಾಜಶೇಖರ ನಿರೂಪಿಸಿದರು. ಎನ್.ಪ್ರಕಾಶ್ ಸ್ವಾಗತಿಸಿದರು, ಎಸ್.ಲಿಂಗಶೆಟ್ಟಿ ವಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.2.2023 ಮಂಗಳವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ –ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಕೆ.ಪಿ. ರೇವತಿ, ಜಯಂತಿ ವಿ. ಭಟ್, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 8.30 ನಂದಿಸದಿರಿ ನಂದಾದೀಪ– ಪ್ರಾಯೋಜಿತ ಕಾರ್ಯಕ್ರಮ, 8.45 ಕರೆಗೊಂದು ಗೀತೆ, 10.00 ಅವಧರಿಸು ಬಾ ಅಮರನಾರೇಯಣ– ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು

ಮಧ್ಯಾಹ್ನ: 12.30ದೇವರನಾಮ, 1.20 ಭಾವಗೀತೆಗಳು–ಎಂ.ಎಸ್. ಲಕ್ಷ್ಮೀಶ, 3.00 ಹೆಚ್.ಕೆ. ನರಸಿಂಹಮೂರ್ತಿ ಮತ್ತು ಹೆಚ್.ಎನ್.ಭಾಸ್ಕರ್–ಯುಗಳ ವಯೋಲಿನ್ ವಾದನ, 4.00 ಕಥಾ ಕಾಲಕ್ಷೇಪ "ವಾಲಿ ಮೋಕ್ಷ", ಪ್ರಸ್ತುತಿ– ಸಂತ ಕೇಶವದಾಸ್, 6.50 ಕೃಷಿರಂಗ–ಕಿಸಾನ್‌ವಾಣಿ, 9.15 ಯಕ್ಷಗಾನದ ಹಾಡುಗಳು–ಅತಿಕಾಯ ಕಾಳಗ ಪ್ರಸಂಗದ ಹಾಡು ಸಿ.ಹೆಚ್. ಶಂಕರ್ ಕಾಮತ್ ಮತ್ತು ಬಳಗದವರಿಂದ, 9.30 ಎಸ್. ಸಂಗೀತಾ– ಹಾಡುಗಾರಿಕೆ, 10.00 ಗಮಕ ವಾಚನ, ವಾಚನ– ವಸಂತಾ ವೆಂಕಟೇಶ್, ವ್ಯಾಖ್ಯಾನ– ಡಾ.ಎನ್.ಕೆ. ರಾಮಶೇಷನ್

■ **ಸಮಾಜವಾದಿ ವೇದಿಕೆ, ಬೆಂಗಳೂರು, ಜನತಾಂತ್ರಿಕ ಸಮಾಜವಾದ ಸಂಘಟನೆ, ನವದೆಹಲಿ, ಡಾ. ರಾಮ ಮನೋಹರ ಲೋಹಿಯಾ ಟ್ರಸ್ಟ್, ಮೈಸೂರು :** ಪ್ರೊ. ಮಧು ದಂಡವತೆ ಜನ್ಮ ಶತಮಾನೋತ್ಸವ ಹಿನ್ನೆಲೆಯಲ್ಲಿ 'ಮುಕ್ತ ಮತದಾನ–ಸಮರ್ಥ ಸರ್ಕಾರ' ಜನತಂತ್ರದ 'ನೈಜ ಹಕ್ಕುದಾರ'ರ ಧ್ವನಿ ಹಿಡಿದಿರುವ 'ಡಯಾಗ್ನೋಸ್ಟಿಕ್' ವರದಿ ಬಿಡುಗಡೆ ಮತ್ತು ಚರ್ಚೆ, ವರದಿ ಬಿಡುಗಡೆ : ಹಿರಿಯ ಸಾಹಿತಿ ದೇವನೂರ ಮಹಾದೇವ, ದಿಕ್ಸೂಚಿ ಭಾಷಣ : ರಾಜಕೀಯ ವಿಮರ್ಶಕ ಸುಧೀಂದ್ರ ಕುಲಕರ್ಣಿ, ಮಧು ದಂಡವತೆ ನೆನಪು : ನವದೆಹಲಿ ಜಾಮಿಯಾ ಮಿಲಿಯಾ ವಿಶ್ವವಿದ್ಯಾನಿಲಯದ ಪ್ರೊ. ಡಿ.ಕೆ. ಗಿರಿ, ಅಧ್ಯಕ್ಷತೆ : ಸಮಾಜವಾದಿ ಬಿ.ಆರ್. ಪಾಟೀಲ್, ಮುಖ್ಯ ಅತಿಥಿಗಳು: ರಂಗಕರ್ಮಿ ಪ್ರಸನ್ನ, ವಿಶ್ರಾಂತ ಕುಲಪತಿ ಡಾ. ಸಬಿಹಾ ಭೂಮಿಗೌಡ, ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ರೈತ ಮುಖಂಡ ಬಡಗಲಪುರ ನಾಗೇಂದ್ರ, ಸಾಮಾಜಿಕ ಕಾರ್ಯಕರ್ತ ಅನೀಸ್ ಪಾಷ, ಸ್ಥಳ: ಕುಮಾರ್ಸ್ ದಿ ವೈಟ್ ಹೌಸ್ ಹೋಟೆಲ್, ಬನ್ನಿಮಂಟಪ, ಬೆಳಗ್ಗೆ 10ಕ್ಕೆ.

■ **ಪ್ರಾಂತೀಯ ನಿರ್ದೇಶನಾಲಯ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಮೈಸೂರು ಕೈಗಾರಿಕೆಗಳ ಸಂಘ, ಎಂಎಸ್‌ಎಂಇ, ಕರಾಮುವಿವಿ :** ಅಪ್ರೆಂಟಿಸ್‌ಶಿಪ್ (ಶಿಶಿಕ್ಷು) ತರಬೇತಿ ಜಾಗೃತಿ ಕಾರ್ಯಾಗಾರ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನ, ಕೃಷ್ಣಮೂರ್ತಿಪುರಂ :** ಕಾಳಿದಾಸಕೃತಿ ಸಮೀಕ್ಷಾ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸೋಸಲೆ ಶ್ರೀ ವ್ಯಾಸರಾಜ ಮಠದ ಪೀಠಾಧಿಪತಿ 1008 ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮಿಗಳು, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಉಪಸ್ಥಿತರು : ಪದ್ಮಶ್ರೀ ಪುರಸ್ಕೃತರಾದ ಎಸ್. ಸುಬ್ಬರಾಮನ್, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ. ಡಿ.ಪಿ. ಮಧುಸೂಧನಾಚಾರ್ಯ, ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಪ್ರೊ. ಸಿ.ಹೆಚ್. ಶ್ರೀನಿವಾಸಮೂರ್ತಿ, ವಿಷಯ ಮಂಡನೆ : ಡಾ. ಜಿ. ಕೃಷ್ಣಪ್ರಸಾದ್, ಡಾ. ಶರತ್‌ಚಂದ್ರ ಸ್ವಾಮಿ, ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ಪ್ರೊ. ತಿರುಮಲಾಚಾರ್ಯ ಕುಲಕರ್ಣಿ, ಪ್ರೊ. ಸಿ.ಹೆಚ್. ಶ್ರೀನಿವಾಸಮೂರ್ತಿ, ಡಾ. ಉಮಾಕಾಂತ ಭಟ್ ಕೆರೆಕೈ, ಡಾ. ಹೆಚ್.ವಿ. ನಾಗರಾಜರಾವ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ಯುವ ಭಾರತ್ ಸಂಘಟನೆ:** ಪುಲ್ವಾಮ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರ ಸ್ಮರಿಸುತ್ತಾ, ಕರಾಳ ದಿನ ಆಚರಣೆ, ಮುಖ್ಯ ಅತಿಥಿಗಳು : ಶಾಸಕ ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ ನಾರಾಯಣ ಗೌಡ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮ ನಂದೀಶ್, ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಮೈಸೂರು ನಗರ ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾದ ಅಧ್ಯಕ್ಷ ಜೋಗಿ ಮಂಜು, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ವೃತದಲ್ಲಿ (ಮೆಟ್ರೋಪೋಲ್ ವೃತ್ತ), ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಮೈಸೂರು ದಿಗಂತ ಪತ್ರಿಕೆ ಸಂಪಾದಕ ಮಳಲಿ ನಟರಾಜ್‌ಕುಮಾರ್, ಇಂಡಿಯನ್ ಎಕ್ಸ್‌ಪ್ರೆಸ್ ಹಿರಿಯ ವರದಿಗಾರ ಕೆ.ಶಿವಕುಮಾರ್, ಆಂದೋಲನ ಪತ್ರಿಕೆ ಸಂಪಾದಕ ರವಿ ಕೋಟಿ, ಮಾಧ್ಯಮ ಅಕಾಡೆಮಿ ಸದಸ್ಯರಾದ ಸಿ.ಕೆ. ಮಹೇಂದ್ರ, ಕೂಡ್ಲಿ ಗುರುರಾಜ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 11ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಾಂಸ್ಕೃತಿಕ ಸಮಿತಿ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಪ್ರಾಂಶುಪಾಲ ರಘುನಂದನ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಮುಖ್ಯ ಅತಿಥಿಗಳು : ಆಕಾಶವಾಣಿ ನಿವೃತ್ತ ಸಹಾಯಕ ನಿರ್ದೇಶಕರಾದ ರಾಜಲಕ್ಷ್ಮಿ ಜಿ. ಶ್ರೀಧರ್, ಶೈಕ್ಷಣಿಕ ಸಂಯೋಜಕ ಪ್ರೊ. ಎಂ.ಆರ್. ಜಯಪ್ರಕಾಶ್, ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ನಟರಾಜ ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಇಂಪ್ರೆಸನ್ :** ಗೋಲ್ಡ್‌ಕಾರಟ್ಸ್ ಜ್ಯೂವೆಲ್ಲರಿ ಪ್ರದರ್ಶನ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 11 ರಿಂದ.

■ **ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ :** ನೂತನ ಸಾವಯವ ಹಾಗೂ ಸಿರಿಧಾನ್ಯದ ಮಾರಾಟ ಮಳಿಗೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯ ಗೋಪಿ, ತೋಟಗಾರಿಕೆ ಜಂಟಿ ನಿರ್ದೇಶಕ ನಾಗರಾಜು, ಉಪ ನಿರ್ದೇಶಕ ಕೆ. ರುದ್ರೇಶ್, ಸ್ಥಳ: ಟಿ.ಕೆ. ಬಡಾವಣೆ ಪಾರ್ಕ್ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ :** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30 ರಿಂದ.

■ **ಕರ್ನಾಟಕ ಸೇನಾ ಪಡೆ :** ವಿಧಾನಸೌಧದ ಶಿಲ್ಪಿ ದಿವಂಗತ ಕೆಂಗಲ್ ಹನುಮಂತಯ್ಯನವರ ಜಯಂತಿ, ಸಾನ್ನಿಧ್ಯ: ಪ್ರೊ. ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಗಂಗಾಧರ್, ಉಪಸ್ಥಿತರು: ಮೇಯರ್ ಶಿವಕುಮಾರ್, ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ. ಎಸ್.ಪಿ. ಯೋಗಣ್ಣ, ಕವೀಶ್‌ಗೌಡ, ನಟರಾಜ್ ಜೋಯಿಸ್, ಡಾ.ರಘುರಾಂ ವಾಜಪೇಯಿ, ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಲಯನ್ಸ್ ಕ್ಲಬ್ ಗೋಲ್ಡನ್ ಸಿಟಿ ಅಧ್ಯಕ್ಷ ಸುರೇಶ್ ಟಿ. ಗೋಲ್ಡ್, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

■ **ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ:** ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಮತ್ತು ನಿತ್ಯೋತ್ಸವ ಕವಿ ನಿಸಾರ್‌ಅಹಮದ್ ಸ್ಮರಣೆ, ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಶ್ರೀಮತಿ ಕೆ.ಎಲ್.ಕಾಂಚನಮಾಲಾ, ಕವಿಗಳ ಕುರಿತು:ಸಾಹಿತಿ ಬನ್ನೂರು ಕೆ.ರಾಜು, ಪ್ರಶಸ್ತಿ ಪುರಸ್ಕೃತರು: ಎಂ.ಎನ್.ಸುರೇಶ್, ಫಾತಿಮಾ, ಜಮುನಾರಾಣಿ ಮಿರ್ಲೆ, ವಿಜಯಾಶಂಕರ, ಉಪಸ್ಥಿತರು: ಎನ್.ಕೆ. ಕಾವೇರಿಯಮ್ಮ, ಎ.ಸಂಗಪ್ಪ, ಸ್ಥಳ: ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಎನ್.ಆರ್. ಮೊಹಲ್ಲಾ, ಮಧ್ಯಾಹ್ನ 2ಕ್ಕೆ.

■ **ಸಾರಿಗೆ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ಗೌರವ ಸಮರ್ಪಣೆ, ವೇದಿಕೆ ಕಾರ್ಯಕ್ರಮ, ಅಧ್ಯಕ್ಷತೆ : ಎಂ. ಮಲ್ಲಯ್ಯ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎನ್. ಮಹೇಶ್, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಬಿಜೆಪಿ ಯುವ ಮುಖಂಡ ಕವೀಶ್‌ಗೌಡ, ಕೆ. ಸತ್ಯನಾರಾಯಣ, ಡಾ. ನೀಲಕಂಠಸ್ವಾಮಿ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಾಲಯ, ಕೆಎಸ್‌ಆರ್‌ಟಿಸಿ ಲೇಔಟ್, ನಾಡನಹಳ್ಳಿ, ಸಂಜೆ 4ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಪ್ರಜ್ಞಾ ಮಹಿಳಾ ಸಮಾಜ :** ಜೆಎಸ್‌ಎಸ್ ವಿದ್ಯಾರ್ಥಿ ನಿಲಯದ ಮಕ್ಕಳಿಂದ ಆಶುಭಾಷಣ ಸ್ಪರ್ಧೆ, ಉದ್ಘಾಟನೆ : ವಕೀಲ ಬಿ.ಆರ್. ಚಂದ್ರಮೌಳಿ, ಅಧ್ಯಾಪಕರಾದ ಶ್ರೀಮತಿ ವಿದ್ಯಾಪಣಿ ಅವರಿಂದ ವಚನ ಸಾಹಿತ್ಯದ ಪ್ರಸ್ತುತ ಮೌಲ್ಯಗಳು ಕುರಿತು ಉಪನ್ಯಾಸ, ಬಹುಮಾನ ವಿತರಣೆ: ಪ್ರಜ್ಞಾ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಶೈಲಾ ನಾಗರಾಜಮೂರ್ತಿ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ನಿಲಯ ಪಾಲಕರಾದ ಶ್ರೀಮತಿ ಮಮತಾ ಸುರೇಶ್, ಸ್ಥಳ: ಜೆಎಸ್‌ಎಸ್ ಪ್ರಶಿಕ್ಷಣ ಪ್ರಾಥಮಿಕ ಶಾಲಾ ಸಭಾಂಗಣ, ಸರಸ್ವತಿಪುರಂ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿಗಳ ಮಠ :** ಪಂಡಿತ್ ಶ್ರೀ ಪ್ರವೀಣಾಚಾರ್ ಹುನುಗುಂದ ಅವರಿಂದ ಭಗವದ್ಗೀತೆಯ 4 ಮತ್ತು 5ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಅದಮ್ಯ ರಂಗಶಾಲೆ, ದಕ್ಷ ಪಿ.ಯು. ಕಾಲೇಜು, ಸ್ಪಂದನಾ ಸಾಂಸ್ಕೃತಿಕ ಪರಿಷತ್ :** 'ಪಿಯುಸಿ ಪಠ್ಯಾಧಾರಿತ ನಾಟಕ ಪ್ರದರ್ಶನ', ಚಾಲನೆ : ಮೈಸೂರು ಕಂದಾಯ ವಿಭಾಗದ ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಪಿ. ಶಿವರಾಜು, ಅಧ್ಯಕ್ಷತೆ : ದಕ್ಷ ಪಿ.ಯು. ಕಾಲೇಜಿನ ಅಧ್ಯಕ್ಷ ಡಾ. ಪಿ. ಜಯಚಂದ್ರರಾಜು, ಆಶಯ ನುಡಿ : ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು : ವಿಜಯನಗರ ಪೊಲೀಸ್ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಜಿ.ಎಸ್. ಗಜೇಂದ್ರ ಪ್ರಸಾದ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ. ಗೋವಿಂದರಾಜು, ದಕ್ಷ ಪಿಯು ಕಾಲೇಜಿನ ಪ್ರಾಂಶುಪಾಲ ಎಂ. ಅಭಿಷೇಕ್, ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಪಠ್ಯವಾಗಿರುವ ಡಾ. ಬೆಸಗರಹಳ್ಳಿ ರಾಮಣ್ಣ, ಪಿ. ಲಂಕೇಶ್, ಡಾ. ವೀಣಾ ಶಾಂತೇಶ್ವರ ಹಾಗೂ ಡಾ. ಎಚ್. ನಾಗವೇಣಿ ಅವರ ನಾಲ್ಕು ಕತೆಗಳ ರಂಗರೂಪ ಪ್ರದರ್ಶನ, ಸ್ಥಳ: ದಕ್ಷ ಪಿಯು ಕಾಲೇಜು, ಹೂಟಗಳ್ಳಿ, ಸಂಜೆ 5.30ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಮೈಸೂರು ಪಾರಂಪರಿಕ ಕಟ್ಟಡಗಳು ಮತ್ತು ಅದರ ಸಂರಕ್ಷಣೆ ಕುರಿತು ಡಾ. ಎನ್.ಎಸ್. ರಂಗರಾಜು ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.





ಏರೋ ಇಂಡಿಯಾ ನವ ಭಾರತದ ಶಕ್ತಿಯನ್ನು ಪ್ರದರ್ಶಿಸುತ್ತಿದೆ: ಪ್ರಧಾನಿ

ಒಂದನೇ ಪುಟದಿಂದ

ಇಂದು ಅತ್ಯಂತ ಪ್ರಬಲ ವಲಯವಾಗಿ ಬೆಳೆದಿದೆ ಎಂದು ಅವರು ಹೇಳಿದರು.

ಭಾರತವು ಈಗ ಆಮದು ಮಾಡುವುದಿಲ್ಲ. ಈಗ ರಫ್ತು ಮಾಡುತ್ತಿದೆ. ನಾವು ಸಾಕಷ್ಟು ಯಶಸ್ಸು ಸಾಧಿಸುತ್ತಿದ್ದೇವೆ. ರಕ್ಷಣಾ ಕ್ಷೇತ್ರದಲ್ಲಿ ತಂತ್ರಜ್ಞಾನ ಯಾರ ಬಳಿ ಇದೆಯೋ ಅವರದ್ದೇ ಮೇಲುಗೈ ಇರುತ್ತದೆ. ಭಾರತದಲ್ಲಿ 8–9 ವರ್ಷದಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಭಾರತವು 2025ರ ಹೊತ್ತಿಗೆ ರಫ್ತು ಪ್ರಮಾಣವನ್ನು 5 ಬಿಲಿಯನ್ ಡಾಲರ್‌ಗೆ ತೆಗೆದುಕೊಂಡು ಹೋಗಲಿದೆ. ಭಾರತವು ಲಾಂಚ್ ಪ್ಯಾಡ್ ತರಹ ಕೆಲಸ ಮಾಡಲಿದೆ. ಭಾರತವು ಡಿಫೆನ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಪಡೆದುಕೊಳ್ಳಲಿದೆ. ಖಾಸಗಿ ಕಂಪನಿಗಳು ಭಾರತೀಯ ರಕ್ಷಣಾ ಕ್ಷೇತ್ರದಲ್ಲಿ ಹೂಡಿಕೆ ಮಾಡಬೇಕು. ಆ ಮೂಲಕ ಭಾರತವನ್ನು ರಕ್ಷಣಾ ಕ್ಷೇತ್ರದಲ್ಲಿ ಜಗತ್ತಿನ ಬಲಾಢ್ಯ ರಾಷ್ಟ್ರವಾಗಿ ರೂಪಿಸ ಬೇಕು ಎಂದರು. ಅಮೃತ್ ಕಾಲದಲ್ಲಿ ಭಾರತವು ಪೈಲಟ್ ತರಹ ಮುಂದೆ ಹೋಗುತ್ತಿದೆ. ಇಂದಿನ ಭಾರತವು ವೇಗವಾಗಿ, ದೂರದ ಬಗ್ಗೆ ಯೋಚಿಸುತ್ತದೆ, ತ್ವರಿತವಾಗಿ ನಿರ್ಧರಿಸುತ್ತದೆ. ಭಾರತದ ವೇಗ ಎಷ್ಟೇ ವೇಗವಾಗಿರಲಿ, ಎಷ್ಟೇ ಎತ್ತರಕ್ಕೆ ಏರಲಿ. ಯಾವಾಗಲೂ ತನ್ನ ಬೇರುಗಳಿಗೆ ಅಂಟಿಕೊಂಡಿರುತ್ತದೆ. ಇದನ್ನೇ ನಮ್ಮ ಪೈಲಟ್ ಕೂಡ ಮಾಡುತ್ತಾರೆ. ಭಾರತದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಹೂಡಿಕೆಯಾಗುತ್ತಿದೆ. ಎಲ್ಲದಕ್ಕೂ ಬೆಂಬಲ ನೀಡುತ್ತದೆ. ಭಾರತದಲ್ಲಾಗುತ್ತಿರುವ ಸುಧಾರಣೆಗಳು ಇಡೀ ಜಗತ್ತಿನ ಮೇಲೆ ಪರಿಣಾಮ ಬೀರುತ್ತಿದೆ.

ಭಾರತದ ರಕ್ಷಣಾ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆಗಿರುವ ನಿಯಮಗಳನ್ನು ಸರಳಗೊಳಿಸಲಾಗಿದೆ. ಉದ್ಯೋಗ ಪ್ರಕ್ರಿಯೆಯ ವ್ಯಾಲಿಡಿಟಿ ಹೆಚ್ಚಿಸಲಾಗಿದೆ. ಬಜೆಟ್‌ನಲ್ಲಿ ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಭಾರತದಲ್ಲಿ ರಕ್ಷಣಾ ಸೆಕ್ಟರ್ ಬಲಗೊಳಿಸುವ ಪ್ರಯತ್ನ ಮುಂದೆಯು ನಡೆಯಲಿದೆ. ನಾವೆಲ್ಲ ಜತೆಗೂಡಿ ಮುಂದೆ ಹೋಗಬೇಕಾಗಿದೆ. ಮುಂದೆಯೂ ಭವ್ಯ ಏರೋ ಇಂಡಿಯಾ ಆಯೋಜಿಸುವ ಆಶಾ ಭಾವನೆಯನ್ನು ವ್ಯಕ್ತಪಡಿಸುತ್ತೇನೆ ಎಂದು ತಿಳಿಸಿದರು.







ಸಮಾಜದ ಗಣ್ಯರೊಂದಿಗೆ ಪ್ರಧಾನಿ ಮೋದಿ ವಿಚಾರ ವಿನಿಮಯ; ರಾಜ್ಯದ ಅಗತ್ಯಗಳ ಜೊತೆಗೆ ರಾಜಕೀಯ ವಿದ್ಯಮಾನ ಮನವರಿಕೆ

ಏರ್‌ಶೋಗೆ ಚಾಲನೆ ನೀಡುವ ಸಂಬಂಧ ಒಂದು ದಿನ ಮೊದಲೇ ರಾಜ್ಯಕ್ಕೆ ಆಗಮಿಸಿ, ರಾಜಭವನದಲ್ಲಿ 'ಔತಣಕೂಟ' ನೆಪದಲ್ಲಿ ರಾಜಕೀಯ ಪರಿಸ್ಥಿತಿ ಬಗ್ಗೆ ಮಾಹಿತಿ


ಬೆಂಗಳೂರು, 13(ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಸಾಧನೆ, ಬೆಂಗಳೂರು ಸೇರಿದಂತೆ ರಾಜ್ಯಕ್ಕೆ ಮೂಲಸೌಕರ್ಯಗಳ ಅಗತ್ಯತೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸಮಾಜದ ವಿವಿಧ ಗಣ್ಯರಿಂದ ಮಾಹಿತಿ ಪಡೆದಿದ್ದಾರೆ. ಏರ್ ಷೋ ಉದ್ಘಾಟನೆಗಾಗಿ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದ ಪ್ರಧಾನಿ ಅವರು ನಿನ್ನೆ ರಾತ್ರಿ ರಾಜಭವನದಲ್ಲಿ ಏರ್ಪಡಿಸಿದ್ದ ಔತಣಕೂಟಕ್ಕೆ ಆಗಮಿಸಿದ್ದ ಗಣ್ಯರೊಂದಿಗೆ ಲೋಕಾರೂಢಿಯಾಗಿ ಮಾತನಾಡುತ್ತಾ ರಾಜ್ಯದ ರಾಜಕೀಯ ಪರಿಸ್ಥಿತಿ, ಆಡಳಿತದ ವೈಖರಿ ಹಾಗೂ ಅಭಿವೃದ್ಧಿಯ ಅಗತ್ಯತೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಪದೇ ಪದೆ ಭೇಟಿ ನೀಡುತ್ತಿರುವ ಪ್ರಧಾನಿ ಅವರು, ಏರ್ ಷೋ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಂದು ನಗರಕ್ಕೆ ಬರಬೇಕಾದವರು ನಿನ್ನೆಯೇ ಆಗಮಿಸಿ ಯಾವುದೇ ಗೊಂದಲ, ಒತ್ತಡವಿಲ್ಲದೆ, ನಿರಾಳತೆಯಿಂದ ಗಣ್ಯರೊಂದಿಗೆ ಮಾತುಕತೆ ನಡೆಸಿದ್ದಾರೆ. ಗಣ್ಯರೊಂದಿಗಿನ ಮಾತುಕತೆ ಬಳಿಕ ಅಲ್ಲೇ ಇದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದು, ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ರಾಜ್ಯ ಮತದಾರರ ನಾಡಿ ಮಿಡಿತವನ್ನು ಯಾವ ಪಕ್ಷದ ನಾಯಕರು ಪೂರ್ಣವಾಗಿ ಹಿಡಿಯಲು ಸಾಧ್ಯವಾಗಿಲ್ಲ. ಯಾವುದೇ ರಾಜಕೀಯ ಪಕ್ಷಕ್ಕೂ ನಾವು ಬಹುಮತದಿಂದ ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂಬ ಬಲವಾದ ಖಾತ್ರಿ ಇಲ್ಲ. ಆದರೂ ಸಾರ್ವಜನಿಕವಾಗಿ ನಮ್ಮದೇ ಮುಂದಿನ ಸರ್ಕಾರವೆಂದು ಹೇಳಿಕೊಂಡು ತಿರುಗುತ್ತಿವೆ. ಕೇಂದ್ರಕ್ಕೂ ರಾಜ್ಯದ ಬಗ್ಗೆ ಸ್ಪಷ್ಟ ಚಿತ್ರಣ ಲಭ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪ್ರಧಾನಿ ಅವರು ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಯಾವುದೇ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಳ್ಳದ ಗಣ್ಯರಿಂದ ವಾಸ್ತವ ಪರಿಸ್ಥಿತಿ ಅರಿಯುವ ಪ್ರಯತ್ನ ಮಾಡಿದರು. ಆಡಳಿತಾರೂಢ ಬಿಜೆಪಿ, ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಮತದಾರರ ನಾಡಿ ಮಿಡಿತ ಅರಿಯಲು ಸುಮಾರು 20ಕ್ಕೂ ಹೆಚ್ಚು ಚುನಾವಣಾ ಪೂರ್ವ ಸಮೀಕ್ಷೆಗಳು ನಡೆದಿವೆ. ಇದುವರೆಗಿನ ಯಾವುದೇ ಸಮೀಕ್ಷೆಗಳಲ್ಲೂ ಇಂತಹುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಹೇಳುವ ಧೈರ್ಯ ತೋರಿಲ್ಲ.

ಆದರೆ, ಅಧಿಕಾರಕ್ಕೆ ಬರಲು ಏನೆಲ್ಲಾ ಸಾಹಸ ಮಾಡಬೇಕು ಎಂಬ ಬಗ್ಗೆ ಮೂರು ರಾಜಕೀಯ ಪಕ್ಷಗಳಿಗೆ ಕೆಲವು ಸಂಘಟನೆಗಳು ಸಲಹೆ ನೀಡಿವೆ.

ಕರ್ನಾಟಕ ವಿಧಾನಸಭೆ ಚುನಾವಣೆಯನ್ನು ಬಿಜೆಪಿಯ ದೆಹಲಿ ವರಿಷ್ಠರು, ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಮಾಡು ಇಲ್ಲವೆ ಮಡಿ ಎಂಬಂತೆ ಮತ್ತೆ ಅಧಿಕಾರಕ್ಕೆ ಬರಲೇಬೇಕು ಎಂದು ಆ ಪಕ್ಷದ ಮುಖಂಡರು ರಾಜ್ಯದ ನಾಯಕರನ್ನು ಬದಿಗಿರಿಸಿ, ಪ್ರಧಾನಿ ಅವರ ವರ್ಚಸ್ಸಿನ ಮೇಲೆ ಹೋರಾಟ ನಡೆಸಲು ಮುಂದಾಗಿದೆ. ಅದಕ್ಕೆ ಪೂರಕವಾಗಿ ಪ್ರಧಾನಿ ಅವರು ಕೂಡ ಆಗೊಮ್ಮೆ–ಈಗೊಮ್ಮೆ ಬರುತ್ತಿದ್ದವರು, ವಿವಿಧ ಕಾರ್ಯಕ್ರಮಗಳ ನೆಪದಲ್ಲಿ ವಾರಕ್ಕೊಮ್ಮೆ ಇಲ್ಲವೇ ಎರಡು ಬಾರಿ ಕರ್ನಾಟಕಕ್ಕೆ ಭೇಟಿ ನೀಡಿ, ಸಾರ್ವಜನಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಭಾರತ ಜಾಗತಿಕ ನಾಯಕನಾಗಲು ಕರ್ನಾಟಕದ ಅತೀ ದೊಡ್ಡ ಕೊಡುಗೆ



ಬೆಂಗಳೂರು, ಫೆ.13(ಕೆಎಂಶಿ)– ಭಾರತವನ್ನು ಜಾಗತಿಕ ನಾಯಕನಾಗಿಸಲು ಕರ್ನಾಟಕ ಅತ್ಯಂತ ದೊಡ್ಡ ಕೊಡುಗೆ ನೀಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಚಾಲನೆಗೊಂಡ ಏರೋ ಇಂಡಿಯಾ ಶೋ 2023 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಕಾರ್ಯಸಾಧನೆಗೆ ಪ್ರಧಾನಿಗಳ ಆಶಯದಂತೆ ಕರ್ನಾಟಕ ಆರ್ಥಿಕತೆ, ಸಾಮಾಜಿಕ ವ್ಯವಸ್ಥೆ ಹಾಗೂ ರಕ್ಷಣಾ ವಲಯದಲ್ಲಿ ಕೊಡುಗೆ ನೀಡಲಿದೆ. ಏರೋ ಇಂಡಿಯಾ ಶೋ 14ನೇ ಆವೃತ್ತಿಯು ಗಾತ್ರ, ಪ್ರದರ್ಶನ ಮತ್ತು ಕಾರ್ಯವೈಖರಿಯ ದೃಷ್ಟಿಯಿಂದ ಅತ್ಯಂತ ವಿಶೇಷ ಆವೃತ್ತಿಯಾಗಿದ್ದು, ಅಂತರರಾಷ್ಟ್ರೀಯ ಮಟ್ಟದ ಅತೀ ದೊಡ್ಡ ಏರ್ ಶೋ ಆಗಿದೆ.

ರಕ್ಷಣಾ ವಲಯ ಹಾಗೂ ಏರ್ ಶೋ ಪ್ರದರ್ಶನದಲ್ಲಿ ಭಾರತ ತನ್ನ ಸಾಮರ್ಥ್ಯವನ್ನು ನಿರೂಪಿಸಿದೆ. ಕೋವಿಡ್ ಸಂದರ್ಭದಲ್ಲಿ ಪ್ಯಾರಿಸ್ ಏರ್ ಶೋ ನಡೆಯದಿದ್ದಾಗ, ನಮ್ಮ ಏರ್ ಶೋ ಯಶಸ್ವಿಯಾಗಿ ಜರುಗಿತು. ಈ ಬಾರಿ ವಸ್ತು ಪ್ರದರ್ಶನದ ವಿಸ್ತೀರ್ಣ, ಪ್ರದರ್ಶಕರ ಸಂಖ್ಯೆಯೂ ಹೆಚ್ಚಾಗಿದೆ ಎಂದರು. ಕರ್ನಾಟಕದಲ್ಲಿ 1940 ರಲ್ಲಿ ಹೆಚ್.ಎ.ಎಲ್, 1950 ರಲ್ಲಿ ಬಿ.ಹೆಚ್.ಇ.ಎಲ್, ಬಿ.ಇ.ಎಲ್, ಡಿ.ಆರ್.ಡಿ.ಓ ಸ್ಥಾಪನೆಗೊಂಡವು. 1960ರಲ್ಲಿ ಇಸ್ರೋ ಕಾರ್ಯಾರಂಭ ಮಾಡಿದರೆ, 1970ರಲ್ಲಿ ಮೊದಲ ಸ್ಯಾಟಲೈಟ್ ಆರ್ಯಭಟ ಉಪಗ್ರಹವನ್ನು ಬೆಂಗಳೂರಿನಲ್ಲಿ ತಯಾರಿಸಲಾಯಿತು ಎಂದರು.

ಕನ್ನಡ ನಾಡಿನ ಸಂಸ್ಕೃತಿಗೆ ಮಾರು ಹೋದ ಪ್ರಧಾನಿ ಮೋದಿ

ಅಶ್ವಿನಿ ಪುನೀತ್ ರಾಜ್‌ಕುಮಾರ್, ಯಶ್, ರಿಷಬ್ ಪ್ರಧಾನಿ ಭೇಟಿ

ಬೆಂಗಳೂರು: ಏರೋ ಇಂಡಿಯಾ–2023ರ ಉದ್ಘಾಟನೆ ಗಾಗಿ ಭಾನುವಾರ ರಾತ್ರಿ ಬೆಂಗಳೂರಿಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ರಾಜಭವನದಲ್ಲಿ ನಟರಾದ ಯಶ್‌ಹಾಗೂ ರಿಷಬ್‌ಶೆಟ್ಟಿ ಅವರನ್ನು ಭೇಟಿಯಾಗಿದ್ದರು. ಈ ಭೇಟಿ ಬಳಿಕ ಇಬ್ಬರೂ ನಟರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

10–12 ನಿಮಿಷಗಳ ಕಾಲ ರಿಷಬ್, ಯಶ್, ನಟಿ ಶ್ರದ್ಧಾ ಜೈನ್, ನಿರ್ಮಾಪಕ ವಿಜಯ್ ಕಿರಗಂದೂರು, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರೊಂದಿಗೆ ಮೋದಿ ಮಾತುಕತೆ ನಡೆಸಿದ್ದರು. ಇದಾದ ಬಳಿಕ ಅವರು ಹಂಚಿಕೊಂಡ ಅನುಭವವನ್ನು ಮೋದಿ ಅವರ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಹಂಚಿಕೊಳ್ಳಲಾಗಿದೆ. ಇಂದು ನನ್ನ ಕನಸು ನನಸಾದ ಕ್ಷಣ. ಪ್ರಧಾನಮಂತ್ರಿ ಮೋದಿಯವರನ್ನು ನಾನು ಮಹಾನ್ ನಾಯಕರಾಗಿ ಕಾಣುತ್ತೇನೆ. ಅವರನ್ನು ಭೇಟಿಯಾಗಿ ಖುಷಿಯಾಗಿದೆ. ಕನ್ನಡ ಚಿತ್ರರಂಗ ಹಾಗೂ ಭಾರತೀಯ ಚಿತ್ರರಂಗದಲ್ಲಿ ಏನಾಗುತ್ತಿದೆ, ಬೇಕಾದ ಸೌಲಭ್ಯಗಳ ಬಗ್ಗೆ ಮಾತುಕತೆ ವೇಳೆ



ಚರ್ಚೆಯಾಗಿದೆ. ಮುಂದಿನ ದಿನಗಳಲ್ಲಿ ಇವುಗಳನ್ನು ಈಡೇರಿಸುವ ಬಗ್ಗೆ ಭರವಸೆಯನ್ನೂ ಅವರು ನೀಡಿದ್ದಾರೆ. 'ಕಾಂತಾರ' ಸಿನಿಮಾದ ಬಗ್ಗೆಯೂ ಮೋದಿ ಅವರು ಚರ್ಚೆ ನಡೆಸಿದರು. ಮಣ್ಣಿನ ಕಥೆ, ಭಾರತೀಯ ಸಂಸ್ಕೃತಿಯ ಬಗ್ಗೆ ಸಿನಿಮಾ ಮಾಡಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಹಲವು ಬಾರಿ 'ಕಾಂತಾರ' ಎನ್ನುವ ಪದ ಅವರ ಬಾಯಿಂದ ಬಂದಿದ್ದನ್ನು ಕೇಳಿ ಖುಷಿಪಟ್ಟೆ ಎಂದಿದ್ದಾರೆ ರಿಷಬ್.

ನಮ್ಮೆಲ್ಲರ ಮಾತುಗಳೆಲ್ಲವನ್ನೂ ಬಹಳ ಸೂಕ್ಷ್ಮವಾಗಿ ಮೋದಿ ಅವರು ಕೇಳಿದರು. ನಂತರದಲ್ಲಿ ತಮ್ಮ ಮನಸ್ಸಿನಲ್ಲಿ ಇರುವ ವಿಷಯವನ್ನೂ, ಕನ್ನಡ ಚಿತ್ರರಂಗದ ಬಗ್ಗೆ ತಮಗಿದ್ದ ಮಾಹಿತಿ ಹಾಗೂ ಕಲ್ಪನೆ, ದೂರದೃಷ್ಟಿಯನ್ನು ಹಂಚಿಕೊಂಡರು. ಕನ್ನಡ ಚಿತ್ರರಂಗಕ್ಕೆ ಬೇಕಿರುವ ಸೌಲಭ್ಯಗಳ ಬಗ್ಗೆಯೂ ಕೇಳಿ, ಸರ್ಕಾರದಿಂದ ಏನಾಗಬೇಕು ಎಂದೂ ಮಾಹಿತಿ ಪಡೆದುಕೊಂಡರು. ಚಿತ್ರರಂಗವು ದೇಶಕ್ಕಾಗಿ ಏನು ಮಾಡಬಹುದು ಎನ್ನುವ ಬಗ್ಗೆಯೂ ಚರ್ಚೆ ಮಾಡುವ ಅವಕಾಶ ಸಿಕ್ಕಿತು. ಚಿತ್ರರಂಗದ ಬಗ್ಗೆ ಮೋದಿ ಅವರಿಗೆ ತಿಳಿದಿದ್ದ ಸೂಕ್ಷ್ಮ ವಿಷಯಗಳನ್ನು ಕಂಡು ಆಶ್ಚರ್ಯಪಟ್ಟೆ, ನಮ್ಮ ಕೆಲಸವನ್ನು ಅವರು ಶ್ಲಾಘಿಸಿದರು. ಎಂದಿನಂತೆ ಪ್ರಧಾನಿ ಅವರು ಬಹಳ ಸ್ಫೂರ್ತಿಯಾಗಿದ್ದರು ಎಂದು ಯಶ್ ಹೇಳಿದರು.

ನಕ್ಕರೆ ಅದೇ ಸ್ವರ್ಗ

ಆತ : ಅದೃಷ್ಟವಂತ ಗಂಡ ಅಂದರೆ ಹೇಗಿರ್ತಾನೆ?
ಈತ : ಎಣಿಸಲಾಗದಷ್ಟು ಹಣಾನ ಮನೆಗೆ ತಂದು ಹಾಕ್ತಿರ್ತಾನೆ
ಈತ : ಅದೃಷ್ಟವಂತ ಹೆಂಡತಿ ಅಂದರೆ?
ಆತ : ಅಂಥ ಗಂಡನ ಕೈ ಹಿಡಿದು ಅಷ್ಟು ಹಣಾನ ಖರ್ಚು ಮಾಡಿಸುವವಳು!


ಮೈಸೂರು ಮಿತ್ರ
ಮಂಗಳವಾರ, 14 ಫೆಬ್ರವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........
ಇಡೀ ಮಾನವಕೋಟಿಗೆ ಪ್ರೀತಿ ಅನುರೂಪ ತೋರಿಸುವುದೇ ನಿಜವಾದ ಧರ್ಮ – ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂತಿರೋದಕ್ಕಿಂತ ಕೂಲಿ ಮಾಡುವುದೇ ಲೇಸು

ನಿಮ್ಮ ಪತ್ರಗಳು

ನಿರ್ವಹಣೆ ಇಲ್ಲದೆ ತ್ಯಾಜ್ಯದ ಗೂಡಾದ ಸ್ವಾತಂತ್ರ್ಯ ಯೋಧರ ಉದ್ಯಾನವನ


ಮಾನ್ಯರೆ,
ಈಗ ಅಭಿವೃದ್ಧಿ ಹೊಂದಿದಂತೆ ಮೇಲ್ನೋಟಕ್ಕೆ ಕಾಣುವ ಪ್ರತಿಷ್ಠಿತ ಫ್ರೀಡಂ ಫೈಟರ್ಸ್ ಪಾರ್ಕ್ ವಾಸ್ತವಿಕವಾಗಿ ದಕ್ಷ ನಿರ್ವಹಣೆ, ಉಸ್ತುವಾರಿ ಇಲ್ಲದೇ ಎಲ್ಲಾ ಕಡೆ ಹರಡುತ್ತಿರುವ ಪಾರ್ಥೇನಿಯಂ ಗಿಡಗಂಟಿಗಳು, ಪಾರ್ಕಿನ ಅವರಣದ ಸುತ್ತಲೂ ಒಳಗೆ ಎಲ್ಲಾ ತರದ ತ್ಯಾಜ್ಯ, ಗಂಟು ಮೂಟೆಗಳು, ಪ್ಲಾಸ್ಟಿಕ್ ತ್ಯಾಜ್ಯಗಳು, ಕೊಳಕಾದ ನಿಂತ ನೀರಿಂದ, ತ್ಯಾಜ್ಯಗಳಿಂದ ತುಂಬಿರುವ ಫೌಂಟನ್‌ಗಳ ವೈಭವವನ್ನು ವಾಯುವಿಹಾರಿಗಳಿಗೆ ದರ್ಶನ ಮಾಡಿಸುತ್ತಿದೆ.

ಕೊಳಚೆ ನೀರಿಂದ ತುಂಬಿರುವ ಫೌಂಟನ್‌ಗಳು ಎಲ್ಲಾ ತರದ ಸೊಳ್ಳೆಗಳ ಉತ್ಪಾದನಾ ಫ್ಯಾಕ್ಟರಿಗಳಾಗಿವೆ. ಈ ಫ್ರೀಡಂ ಫೈಟರ್ಸ್ ಪಾರ್ಕ್ ನಿರ್ವಹಣೆಯ ಜವಾಬ್ದಾರಿ ಯಾರದ್ದು? ಮೈಸೂರು ನಗರ ಪಾಲಿಕೆಯದ್ದೇ ಅಥವಾ ಅವರು ನಿರ್ವಹಣೆ ಗುತ್ತಿಗೆ ನೀಡಿರುವ ಗುತ್ತಿಗೆದಾರರದ್ದೇ? ಯಾಕೆಂದರೆ ಇವರ‍್ಯಾರೂ ಪಾರ್ಕ್ ಅನ್ನು ನಿರ್ವಹಣೆ ಮಾಡುತ್ತಾ ಇರುವ ಲಕ್ಷಣಗಳೇ ಕಾಣುತ್ತಿಲ್ಲ. ಹಾಗಾದರೆ ನಮ್ಮ ವಾರ್ಡ್ 23 ರ ಜನಪ್ರತಿನಿಧಿಗಳು ಹಾಗೂ ನಮ್ಮ ಚಾಮರಾಜ ಕ್ಷೇತ್ರದ ಶಾಸಕರು, ಕೇವಲ ಪಾರ್ಕ್ ಅಭಿವೃದ್ಧಿಗಾಗಿ ಕೋಟ್ಯಾಂತರ ರೂ. ಸಾರ್ವಜನಿಕ ತೆರಿಗೆ ಹಣ ಖರ್ಚು ಮಾಡಿ, ಆಮೇಲೆ ಅದರ ದಕ್ಷ ನಿರ್ವಹಣೆ ಆಗುತ್ತೋ ಬಿಡುತ್ತೋ ಅದಕ್ಕೂ ನಮಗೂ ಸಂಬಂಧ ಇಲ್ಲಾ ಅನ್ನೋ ಧೋರಣೆ ತಾಳುವುದು ಎಷ್ಟು ಸರಿ? ವಾರ್ಡ್ 23ರ ಹಿರಿಯ ನಾಗರಿಕರು ಸಾಕ್ಷಿ ಪುರಾವೆಗಳ ಸಮೇತ, ಜನಪ್ರತಿನಿಧಿಗಳ ಗಮನಕ್ಕೆ ತಂದು ದೂರು ಕೊಟ್ಟರೂ, ನಿರ್ವಹಣೆ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುವುದು ಜನಸೇವಕರ, ಪ್ರಜಾಪ್ರಭುತ್ವದ ಲಕ್ಷಣವೇ? ನಗರ ಪಾಲಿಕೆ ಅಧಿಕಾರಿಗಳು ಅಥವಾ ನಿರ್ವಹಣೆ ಮಾಡುವ ಗುತ್ತಿಗೆದಾರರಿಂದ ಸರಿಯಾಗಿ ರೆಗ್ಯುಲರ್ ಆಗಿ ನಿರ್ವಹಣೆ ಮಾಡಿಸಬೇಕಾದ ಜವಾಬ್ದಾರಿ ನಮ್ಮ ಜನಪ್ರತಿನಿಧಿಗಳ ಮೇಲೆ ಇಲ್ಲವೇ? ಈ ವಾರ್ಡ್ 23ರ ನಿವಾಸಿಗಳು ಪ್ರಾಪರ್ಟಿ ಟ್ಯಾಕ್ಸ್ ಜೊತೆಗೆ 500 ರೂ ಗಾರ್ಡನ್ ಸೆಸ್ ಅಂತ ಈ ಪಾರ್ಕ್ ಬಳಕೆಗೆ ನಗರ ಪಾಲಿಕೆಗೆ ಕಟ್ಟುತ್ತಿರೋದು ಯಾತಕ್ಕಾಗಿ? ಶಿವಕುಮಾರ್ ಅವರು ಹೊಸದಾಗಿ ಮೇಯರ್ ಆದಮೇಲೆ ನಗರ ಪಾಲಿಕೆ ಆಡಳಿತ ಸುಧಾರಣೆಗಾಗಿ ಪಾಲಿಕೆ ಅದಾಲತ್‌ಗಳನ್ನು ನಡೆಸುತ್ತಾ ಇರೋದು ಮೆಚ್ಚುವ ವಿಷಯ. ಹಾಗೆಯೇ ಮೇಯರ್ ಅವರು ಈ ಫ್ರೀಡಂ ಫೈಟರ್ಸ್ ಪಾರ್ಕ್‌ನಲ್ಲಿ ಪಾಲಿಕೆ ಅಧಿಕಾರಿಗಳು, ಆಯುಕ್ತರು, ಪಾರ್ಕಿನ ನಿರ್ವಹಣೆ ಗುತ್ತಿಗೆದಾರರು ಎಲ್ಲರನ್ನೂ ಕರೆದುಕೊಂಡು ಬಂದು ಈ ಫ್ರೀಡಂ ಫೈಟರ್ಸ್ ಪಾರ್ಕ್ ಎಲ್ಲಾ ಕಡೆ ಪರಿಶೀಲನೆ ಮಾಡಿ, ಈ ಪಾರ್ಕನಲ್ಲೇ ಸ್ವಚ್ಛತಾ ಅದಾಲತ್, ದಕ್ಷ ನಿರ್ವಹಣಾ ಅದಾಲತ್ ಆದಷ್ಟು ಶೀಘ್ರ ಮಾಡಿ, ಈ ಪಾರ್ಕನಲ್ಲಿರುವ Freedom Fighters ಅವರ ಆತ್ಮಗಳಿಗೆ ಮತ್ತು ವಾಯುವಿಹಾರಿಗಳಿಗೆ ಸ್ವಚ್ಛ ಪರಿಸರ, ಶುದ್ಧ ಗಾಳಿ ಹಾಗೂ ವಾತಾವರಣ, ದಕ್ಷ ನಿರ್ವಹಣೆ ಇತ್ಯಾದಿಗಳನ್ನು ಅನುಗ್ರಹಿಸಿ, ಪ್ರಧಾನಿ ನರೇಂದ್ರ ಮೋದಿಯವರ ಸ್ವಚ್ಛ ಭಾರತ್ ಅಭಿಯಾನ್ ಈ ಪಾರ್ಕ್‌ನಲ್ಲಿ ವಿಫಲವಾಗುತ್ತಿರುವುದನ್ನು ತಪ್ಪಿಸಬೇಕೆಂದು ಕಳಕಳಿಯ ಮನವಿ.

–ಪ್ರೊ. ಎಂ.ಎಸ್‌ಎಸ್. ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಬೇಡದ ರಸ್ತೆ ವಿಸ್ತರಣೆ

ಮಾನ್ಯರೆ,



ವಿಜಯನಗರ ರೈಲ್ವೆ ಬಡಾವಣೆಯ ಕೆಲವು ಮುಖ್ಯ ರಸ್ತೆಗಳ ಅಗಲೀಕರಣ ಕಾಮಗಾರಿ ನಡೆಯುತ್ತಿದೆ. ಆಗಬೇಕಾಗಿದ್ದೆ. ಆದರೆ, ಮುಖ್ಯ ರಸ್ತೆಗಳ ಎರಡೂ ಬದಿಗಳ ಅಗಲೀಕರಣದ ನಂತರ ಜಲ್ಲಿ ಮುಚ್ಚಿದ ನಂತರ ತ್ವರಿತ ರಸ್ತೆಯಾಗಬೇಕಿದೆ. ಇದರ ಜೊತೆಗೆ ಬೇಡದ ಸುಂದರ ರಸ್ತೆಗಳ ಅಗಲೀಕರಣವೂ ಆಗುತ್ತಿದೆ ಈ ರಸ್ತೆಗಳ ಇಕ್ಕೆಲಗಳಲ್ಲಿ ಹಸಿರು ಹುಲ್ಲು, ಸಿಮೆಂಟ್ ಹಾಕಿರುವ ನಿವಾಸಿಗಳು ಸುಂದರವಾಗಿ ನಿರ್ವಹಣೆ ಮಾಡಿದ್ದರೂ, ಪಾಲಿಕೆ ಇಂತಹ ರಸ್ತೆಯ ಎರಡೂ ಬದಿಗಳಲ್ಲಿಯೂ ಮತ್ತೆ ಅಗೆದಿದೆ ಮತ್ತು ಕುರೂಪಗೊಳಿಸಿದೆ. ಸ್ವಂತ ಖರ್ಚಿನಲ್ಲಿಯೇ ರಸ್ತೆ ಸುಂದರ ವಾಗಿ ಕಾಣುವಂತೆ ಮಾಡಿಕೊಂಡ ಅಲ್ಲಿನ ನಿವಾಸಿಗಳು ಬೇಸರಿಸಿಕೊಂಡಿರುವುದಂತೂ ನಿಜ.

ವಿಜಯನಗರ ವಾಟರ್ ಟ್ಯಾಂಕ್‌ನಿಂದ ತ್ರಿನೇತ್ರ ವೃತ್ತದವರೆಗಿನ ರಸ್ತೆಯ ಪುನರ್ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗುತ್ತಿದೆ. ಇದರ ಬಗ್ಗೆ ಆಕ್ಷೇಪಗಳೂ ವ್ಯಕ್ತವಾಗಿವೆ. ತ್ವರಿತವಾಗಿ ನಡೆಯಬೇಕಿದ್ದ ಕೆಲಸಗಳನ್ನು ಬೇಗ ಮುಗಿಸದೆ ಅನಾವಶ್ಯಕ ಬೇಡದ ರಸ್ತೆ ಅಗಲೀಕರಣ ಸರಿಯೇ ಎನ್ನುವುದರ ಬಗ್ಗೆ ಪಾಲಿಕೆ ತಿಳಿಸಬೇಕಷ್ಟೆ.

–ವಿಜಯ್ ಹೆಮ್ಮಿಗೆ, ಮೈಸೂರು

ಸುಪ್ರೀಂಕೋರ್ಟ್‌ನ ಎಲ್ಲಾ ನ್ಯಾಯಮೂರ್ತಿಗಳ ಹುದ್ದೆಗಳು ಭರ್ತಿ ಶ್ಲಾಘನೀಯ

ಮಾನ್ಯರೆ,
ಬಹಳ ವರ್ಷಗಳ ನಂತರ ಸುಪ್ರೀಂಕೋರ್ಟಿಗೆ ಮಂಜೂರಾಗಿರುವ ಎಲ್ಲಾ 34 ನ್ಯಾಯಮೂರ್ತಿಗಳ ಹುದ್ದೆಗಳನ್ನು ಕೇಂದ್ರ ಸರ್ಕಾರ ಭರ್ತಿ ಮಾಡಿರುವುದು ಶ್ಲಾಘನೀಯ. ತುಂಬಾ ವರ್ಷಗಳಿಂದ ಸುಪ್ರೀಂಕೋರ್ಟಿನಲ್ಲಿರುವ ಪ್ರಕರಣಗಳು ನ್ಯಾಯಮೂರ್ತಿಗಳ ಹುದ್ದೆಗಳ ಕೊರತೆಗಳಿಂದಾಗಿ ಇತ್ಯರ್ಥವಾಗದೆ ಮುಂದೂಡುತ್ತಾ ಬಂದು ಕೋರ್ಟ್‌ನಲ್ಲಿರುವ ಪ್ರಕರಣಗಳು ವಿಳಂಬವಾಗಿ ಕಕ್ಷಿದಾರರಿಗೆ ತುಂಬಾ ತೊಂದರೆಯಾಗುತ್ತಿತ್ತು. ಇನ್ನು ಮುಂದಾದರು ಕೋರ್ಟಿನಲ್ಲಿರುವ ಪ್ರಕರಣಗಳು ತ್ವರಿತವಾಗಿ ಇತ್ಯರ್ಥವಾಗಿ ಕಕ್ಷಿದಾರರಿಗೆ ಆದಷ್ಟು ಬೇಗ ನ್ಯಾಯ ದೊರಕಲಿ.

– ಬೆಸಗರಹಳ್ಳಿ ರವಿ ಪ್ರಸಾದ್, ಕೆಸಿ ನಗರ, ಮೈಸೂರು.

ಭಾರತವನ್ನು ಒಗ್ಗೂಡಿಸುವ ಮಹತ್ತರ ಪ್ರಯತ್ನ

ಭಾರತ್ ಜೋಡೋ ಯಾತ್ರೆ



ಡಾ.ಶುಶ್ರುತ ಹೆಡ್ನಾ ವಿಷ್ಣುಮೂರ್ತಿ

● ಸಂದರ್ಶನ: ಕೆನ್ನೆತ್ ಶಿಶಿರ್

“ಅಖಿಲ ಭಾರತ ಕಾಂಗ್ರೆಸ್ ಪಕ್ಷದ ನಾಯಕರಾದ ರಾಹುಲ್ ಗಾಂಧಿಯವರು 3,750 ಕಿ.ಮೀ. ಉದ್ದದ ಭಾರತ್ ಜೋಡೋ ಯಾತ್ರೆಯನ್ನು ಸೆಪ್ಟೆಂಬರ್ 07, 2022ರಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಕೈಗೊಂಡಿದ್ದರು. ಈ 150 ದಿನಗಳ ಸುದೀರ್ಘ ಯಾತ್ರೆಯಲ್ಲಿ ಅವರೊಂದಿಗೆ 117 ಪ್ರಮುಖರು ಹೆಜ್ಜೆ ಹಾಕಿದರು. ಇವರೆಲ್ಲರೂ ಆರಂಭದಿಂದ ಕೊನೆಯವರೆಗೂ ರಾಹುಲ್ ಗಾಂಧಿಯವರ ಜೊತೆಗಿದ್ದರು. ಮೈಸೂರಿನವರಾದ, ನಜರ್‌ಬಾದಿನಲ್ಲಿರುವ ನ್ಯೂರೋಜೋನ್ ಆಸ್ಪತ್ರೆಯ (ನರರೋಗ ವಿಶೇಷ ಆಸ್ಪತ್ರೆ) ವ್ಯವಸ್ಥಾಪಕ ನಿರ್ದೇಶಕರಾದ ಡಾ.ಶುಶ್ರುತ ಹೆಡ್ನಾ ವಿಷ್ಣುಮೂರ್ತಿ ಅವರಲ್ಲಿ ಒಬ್ಬರಾಗಿದ್ದಾರೆ. ಅವರು ಭಾರತ್ ಜೋಡೋ ಯಾತ್ರೆ, ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ ಜನವರಿ 30, 2023 ರಂದು ಸಮಾಪ್ತಗೊಂಡ ನಂತರ, ಕಳೆದ ಫೆಬ್ರವರಿ 1 ರಂದು ಮೈಸೂರಿಗೆ ಹಿಂದಿರುಗಿದರು. ಈ ವೇಳೆ ‘ಮೈಸೂರು ಮಿತ್ರ’ನೊಂದಿಗೆ ಅವರು ತಮ್ಮ ಯಾತ್ರೆಯ ಅನುಭವವನ್ನು ಹಂಚಿಕೊಂಡಿದ್ದಾರೆ.”



ಭಾರತ್ ಜೋಡೋ ಯಾತ್ರೆಯಲ್ಲಿ ರಾಹುಲ್ ಗಾಂಧಿಯವರೊಂದಿಗೆ ಡಾ.ಶುಶ್ರುತ ಹೆಡ್ನಾ ವಿಷ್ಣುಮೂರ್ತಿ

ಮೈಸೂರು ಮಿತ್ರ : ಭಾರತ್ ಜೋಡೋ ಯಾತ್ರೆ, ನಿಜವಾಗಿಯೂ ನಿರೀಕ್ಷಿತ ಮಟ್ಟದಲ್ಲಿ ಸಂಚಲನ ಉಂಟು ಮಾಡಿತೆ?

ಡಾ.ಶುಶ್ರುತ ಹೆಡ್ನಾ: ಹೌದು, ಅದರ ಬಗ್ಗೆ ಯಾವುದೇ ಸಂದೇಹವಿಲ್ಲ. ಏಕೆಂದರೆ ಯಾತ್ರೆಯನ್ನು ನಾವು ಪ್ರಾರಂಭಿಸಿದಾಗ, ಅಷ್ಟೊಂದು ಜನ ಬೆಂಬಲವನ್ನು ನಿರೀಕ್ಷಿಸಿರಲಿಲ್ಲ. ಕನ್ಯಾಕುಮಾರಿಯಲ್ಲಿ 20,000 ಕ್ಕೂ ಹೆಚ್ಚು ಜನರು ನಮ್ಮನ್ನು ಸೇರಿಕೊಂಡರು. ಇದೊಂದು ದೊಡ್ಡಮಟ್ಟದ ಸಂಚಲನ ಉಂಟುಮಾಡಿತು. ಕೇರಳವನ್ನು ನಾವು ಪ್ರವೇಶಿಸಿದಾಗ, ಪ್ರತಿಸ್ಪಂದನೆ ಹೆಚ್ಚಿನ ಮಟ್ಟದ್ದಾಗಿತ್ತು. ಏಕೆಂದರೆ ಅಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರ ನೆಲೆಯಿದೆ. ಅಲ್ಲಿಯ ಜನರು ತುಂಬಾ ಆಸಕ್ತರಾಗಿದ್ದು ಉತ್ಸಾಹಶಾಲಿಗಳಾಗಿ ಅಪಾರ ಸಂಖ್ಯೆಯಲ್ಲಿ ನಮ್ಮ ಜೊತೆ ಹೆಜ್ಜೆ ಹಾಕಿದರು.

ನಮ್ಮ ರಾಜ್ಯದಲ್ಲಿ ಯಾತ್ರೆಗೆ ದೊರೆತ ಪ್ರತಿಕ್ರಿಯೆಯು ತುಂಬಾ ದೊಡ್ಡಮಟ್ಟದಲ್ಲಿತ್ತು. ಏಕೆಂದರೆ ಜನರು ಪ್ರಸ್ತುತ ಬಿಜೆಪಿ ಸರ್ಕಾರಗಳ ಆಡಳಿತದಿಂದ ಬೇಸತ್ತಿದ್ದಾರೆ. ನಮಗೆ ಸಿಕ್ಕ ಅಭೂತಪೂರ್ವ ಪ್ರತಿಕ್ರಿಯೆ ಜಮ್ಮು–ಕಾಶ್ಮೀರದವರೆಗೆ ಹಾಗೆಯೇ ಮುಂದುವರೆಯಿತು. ಜನರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಯಾತ್ರೆಯಲ್ಲಿ ಸಾಗುತ್ತಿದ್ದ ಕಾಂಗ್ರೆಸ್ ನಾಯಕ, ದೇಶದ ಜನತೆಯ ಬಗ್ಗೆ ಅಪಾರ ಕಾಳಜಿಯುಳ್ಳ ರಾಹುಲ್ ಗಾಂಧಿಯವರನ್ನು ನೋಡಲು ಬರುತ್ತಿದ್ದರು.

ಖಂಡಿತವಾಗಿ, ಈ ಯಾತ್ರೆಯು ಪರಿಣಾಮಕಾರಿ ಯಾತ್ರೆಯಾಗಿದೆ. ಏಕೆಂದರೆ, ಚಿತ್ರ ರಂಗದ ಪ್ರಮುಖರು, ಖ್ಯಾತ ವಿಜ್ಞಾನಿಗಳು ಹಾಗೂ ಸಮಾಜದ ಎಲ್ಲಾ ರಂಗದ ಹೆಸರಾಂತ ವ್ಯಕ್ತಿಗಳು, ಅನಿವಾಸಿ ಭಾರತೀಯರು ಸಹ, ಯಾತ್ರೆಯಲ್ಲಿ ಭಾಗವಹಿಸುವ ಮೂಲಕ ನಮಗೆ ಬೆಂಬಲ ನೀಡಿದರು.

ಮಿತ್ರ : ರಾಹುಲ್ ಗಾಂಧಿಯವರಿಗೆ ಈ ಸುದೀರ್ಘ ಯಾತ್ರೆಯು ಜೀವಮಾನದ ಒಂದು ಅಪೂರ್ವ ಅನುಭವವಾಗಿದೆ. ನಿಮಗೂ ಅದೇ ರೀತಿಯ ಅನುಭವವಾಗಿರಬಹುದೇ?

ಡಾ.ಶುಶ್ರುತ : ಯಾವುದೇ ರಾಜಕೀಯ ಪಕ್ಷದ ಇಲ್ಲವೇ ಸಂಘಟನೆಯ ಸದಸ್ಯನಾಗದೇ, ಓರ್ವ ವೈದ್ಯನಾಗಿ, ದೇಶದ ಜವಾಬ್ದಾರಿಯುತ ನಾಗರಿಕನಾಗಿ ನಾನು ಯಾತ್ರೆಯಲ್ಲಿ ಪಾಲ್ಗೊಂಡೆ. ಭಾರತದಲ್ಲಿನ ಪ್ರಸ್ತುತ ಪರಿಸ್ಥಿತಿಗೆ ನನ್ನ ವಿರೋಧವನ್ನು ವ್ಯಕ್ತಪಡಿಸಲು ಬಯಸಿದೆ. ಅದು, ಜಾತಿಗಳ ಹೆಸರಿನಲ್ಲಿ ಜನರನ್ನು ವಿಭಜಿಸುವ ಕಾರ್ಯಸೂಚಿಯಾಗಿರಬಹುದು, ನಿರುದ್ಯೋಗ, ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ, ಮಹಿಳಾ ಸಬಲೀಕರಣದ ಸಮಸ್ಯೆಗಳು, ಪತ್ರಕರ್ತರನ್ನು ಜೈಲಿಗೆ ತಳ್ಳಿರುವಂತಹ ವಿಷಯ ಹೀಗೆ ನಾನಾ ಜನವಿರೋಧಿ ನೀತಿಗಳನ್ನು ಸಹಿಸಲಾಗದು.

ಮಿತ್ರ : ಇದರಿಂದ ನಿಮಗೆ ಯಾವ ರೀತಿಯ ಲಾಭವಾಯಿತು?

ಡಾ. ಶುಶ್ರುತ: ಮೊದಲನೆಯದಾಗಿ, ನನ್ನ ಆರೋಗ್ಯವು ಗಮನಾರ್ಹವಾಗಿ ಸುಧಾರಿಸಿತು. ಎರಡನೆಯದಾಗಿ ನನ್ನ ಬಗ್ಗೆ ನಾನೇ ಆತ್ಮಾವಲೋಕನ ಮಾಡಿಕೊಂಡು ಜೀವನದಲ್ಲಿ ಇನ್ನೂ ಯಾವ ರೀತಿ ಒಳ್ಳೆಯ ಕಾರ್ಯಗಳನ್ನು ಮಾಡಬಹುದು ಹಾಗೂ ನನ್ನದೇ ಆದ ಮಾರ್ಗದಲ್ಲಿ ಸಮಾಜಕ್ಕೆ ಯಾವ ರೀತಿಯ ಸೇವೆಯನ್ನು ಸಲ್ಲಿಸಬಹುದು ಎಂಬ ಅರಿವಿನ ಜೊತೆಗೆ ನನ್ನ ಆಧ್ಯಾತ್ಮಿಕ ಆಳವನ್ನು ಹೆಚ್ಚಿಸಿತು.

ಮೂರನೆಯದಾಗಿ, ಹೆಚ್ಚಾಗಿ ಇದೊಂದು ರೀತಿಯ ಧಾರ್ಮಿಕ ಯಾತ್ರೆಯ ಸ್ವರೂಪ ಹೊಂದಿತ್ತು ಏಕೆಂದರೆ ನಾವು ಬೇರೆ ಬೇರೆ ಪಂಥದ ಅನುಯಾಯಿಗಳು ಇಲ್ಲವೇ ಸಿದ್ಧಾಂತಗಳನ್ನು ಹೊಂದಿರುವ ಹಲವಾರು ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿದ್ದೆವು. ನಾಲ್ಕನೆಯದಾಗಿ, ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಮಧ್ಯೆ ಅತೀ ಹೆಚ್ಚು ಆರೋಗ್ಯ ಸಂಬಂಧಿತ ವ್ಯತ್ಯಾಸಗಳು ಅಥವಾ ಲೋಪಗಳು ಕಂಡು ಬಂದವು. ವ್ಯತ್ಯಾಸಗಳ ಬಗ್ಗೆ ನೋಡಿದಾಗ ಇದೊಂದು ರೀತಿಯ ಸಂಶೋಧನಾ ಯಾತ್ರೆಯಾಗಿ ಕಂಡು ಬಂದಿತು. ನಾನು ಟೆಲಿಪತಿ (ಮನೋಪ್ರೇರಣೆಯ) ಮೂಲಕ ಗ್ರಾಮಾಂತರ ವಲಯದಲ್ಲಿ ಆರೋಗ್ಯ ವಿಷಯಗಳ ಬಗ್ಗೆ ವೈದ್ಯಕೀಯ ಸಲಹೆಗಳನ್ನು ನೀಡುತ್ತಿದ್ದರಿಂದ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಮೈಸೂರಿನ ಸುತ್ತ ಮುತ್ತ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸುತ್ತಿದ್ದರಿಂದ, ದೇಶಾದ್ಯಂತ ಇದೊಂದು ದೊಡ್ಡ ಹಾಗೂ ವಿಶಿಷ್ಟವಾದ ಅನುಭವವಾಗಿತ್ತು.

ಕಡೆಯದಾಗಿ ನಾನೂ ಸಹ ಸಮಗ್ರ ಭಾರತವನ್ನು ಅರಿತುಕೊಳ್ಳಲು ಬಯಸಿದ್ದೆ. ನಾನು ಶೈಕ್ಷಣಿಕ ಅರ್ಹತೆಗಳನ್ನು ಪಡೆದುಕೊಂಡಿದ್ದರೂ, ದೇಶವನ್ನು ಸಂಪೂರ್ಣವಾಗಿ ನೋಡಿರಲಿಲ್ಲ, ಅರಿತಿರಲಿಲ್ಲ. ಆದ್ದರಿಂದ ನನ್ನದೇ ಆದ ಮಾರ್ಗದಲ್ಲಿ ದೇಶವನ್ನು ನೋಡಲು ಇದೊಂದು ರೀತಿಯ ಮಹತ್ವದ ಅವಕಾಶವಾಗಿತ್ತು. ಹಾಗೂ ನನ್ನದೇ ಆದ ಕಾರ್ಯಸೂಚಿಗೆ ಅನುಗುಣವಾಗಿ, ಈ ಯಾತ್ರೆಯಲ್ಲಿ ಯಾವುದೇ ಸ್ವಾರ್ಥವಿಲ್ಲದೆ ನನ್ನನ್ನು ನಾನು ತೊಡಗಿಸಿಕೊಂಡೆ.

ಮಿತ್ರ: ಎಲ್ಲರ ದೃಷ್ಟಿಯು, ರಾಹುಲ್‌ಗಾಂಧಿ ಅವರ ಮೇಲೆ, ಅದರಲ್ಲೂ ಗಡ್ಡದ ಮೇಲೆ. ಅವರ ದುಬಾರಿ ಬೆಲೆಯ ಟೀ ಷರ್ಟುಗಳು ಹಾಗೂ ವಿರಮಿಸಿಕೊಳ್ಳುವಾಗ ಬಳಸುತ್ತಿದ್ದ ಅತ್ಯಾಧುನಿಕ ಅದ್ದೂರಿ ಕ್ಯಾರವಾನ್ (ಚಲಿಸುವ ಮನೆ, ಟೆಂಟು)ಗಳ ಮೇಲೆಯೇ ಕೇಂದ್ರೀಕೃತವಾಗಿತ್ತು. (ಬೇರೆಯವರು ಸಾಮಾನ್ಯ ಕಂಟೈನರ್‌ಗಳಲ್ಲಿ ನಿದ್ರಿಸುತ್ತಿದ್ದರು). ಹೀಗಿರುವಾಗ ಪಾದಯಾತ್ರೆಯಲ್ಲಿ ಭಾಗವಹಿಸಿದ ಇತರರು ಯಾವ ರೀತಿಯಲ್ಲಿ ಜನರ ಗಣನೆಗೆ ಬರುತ್ತಾರೆ ?

ಡಾ.ಶುಶ್ರುತ : ಇದು ತಪ್ಪು ಕಲ್ಪನೆಯಾಗಿದೆ. ರಾಹುಲ್ ಗಾಂಧಿಯವರು ನಾವು ನಿದ್ರಿಸುತ್ತಿದ್ದ ಸಾಮಾನ್ಯ ಕಂಟೈನರ್‌ಗಳಲ್ಲೇ ಮಲಗುತಿದ್ದರು. ಕೆಲವು ಪಟ್ಟಭದ್ರ ಹಿತಾಸಕ್ತಿಗಳು, ರಾಹುಲ್ ಗಾಂಧಿಯವರು ದುಬಾರಿಯಾದ ಕಂಟೈನರ್ ಹೊಂದಿದ್ದರು ಎಂಬ ಸುಳ್ಳು ಸುದ್ದಿಯನ್ನು ಹಬ್ಬಿಸಿದ್ದರು. ಭದ್ರತಾ ದೃಷ್ಟಿಯಿಂದಾಗಿ, ಅವರು ಪ್ರತ್ಯೇಕ ಕಂಟೈನರ್‌ನಲ್ಲಿದ್ದರು. ನಾವೆಲ್ಲಾ 12 ಜನರು ವಿಶ್ರಮಿಸಲು ಸಾಧ್ಯವಿರುವಂತಹ ಒಂದು ಕಂಟೈನರ್ ಅನ್ನು ಹಂಚಿ ಕೊಂಡಿದ್ದೆವು. ಜೊತೆಗೆ ನಾವೆಲ್ಲಾ ಸೇವಿಸುವ ಆಹಾರ ಕೂಡ ಒಂದೇ ಆಗಿತ್ತು.

ಮಿತ್ರ : ಕೇಂದ್ರ ಸರ್ಕಾರದ ಹಲವಾರು ರಂಗಗಳಲ್ಲಿನ ವೈಫಲ್ಯಗಳನ್ನು ಜನರಿಗೆ ಮನದಟ್ಟು ಮಾಡಿಕೊಡುವಲ್ಲಿ ಕಾಂಗ್ರೆಸ್ ಸಫಲವಾಗಿದೆಯೇ ?

ಡಾ. ಶುಶ್ರುತ : ಹೌದು, ಖಂಡಿತವಾಗಿ. ನಿಮ್ಮೊಂದಿಗೆ ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಓರ್ವ ವ್ಯಕ್ತಿಯು ಈ ಪ್ರಶ್ನೆಗೆ ಉತ್ತರ ನೀಡಬೇಕು. ಏಕೆಂದರೆ, ನಾನು ಈಗಾಗಲೇ ಹೇಳಿರುವಂತೆ, ಕಾಂಗ್ರೆಸ್ ಅಥವಾ ಬೇರೆ ಯಾವುದೇ ರಾಜಕೀಯ ಪಕ್ಷಗಳ ಜೊತೆ ನಾನು ಗುರುತಿಸಿಕೊಂಡಿಲ್ಲ. ಆದರೆ ನನ್ನ ಅನಿಸಿಕೆಯ ಪ್ರಕಾರ ಜನರು ಭ್ರಮನಿರಸನಗೊಂಡಿದ್ದಾರೆ. ಇಲ್ಲವಾಗಿದ್ದಲ್ಲಿ ಲಕ್ಷೋಪಲಕ್ಷ ಜನರು ಯಾತ್ರೆಯನ್ನು ಏಕೆ ಸೇರಿಕೊಂಡರು. ಅವರೆಲ್ಲಾ ದೇಶದ ಸದ್ಯದ ಪರಿಸ್ಥಿತಿಯ ಬಗ್ಗೆ ಅಸಂತೃಪ್ತರಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಇದು ಕಾಂಗ್ರೆಸ್ ಪಕ್ಷ ತನ್ನ ಎದೆಗುಂದಿರುವ ಬೇರು ಮಟ್ಟದ ಕಾರ್ಯಕರ್ತರ ಪಡೆಯನ್ನು ಪುನಶ್ಚೇತನಗೊಳಿಸುವಲ್ಲಿ ಸಹಕಾರಿಯಾಗಿದ್ದು, ಜನತೆಯಲ್ಲಿ ಹೊಸ ವಿಶ್ವಾಸ ಮೂಡಿಸುವಲ್ಲಿ ಸಫಲವಾಗಿದೆ.

ಮಿತ್ರ: ಭಾರತ್ ಜೋಡೋ ಯಾತ್ರೆಯು ಕಾಂಗ್ರೆಸ್ ಪಕ್ಷದ ಮತ ಬ್ಯಾಂಕ್ ಆಗಿ ಪರಿಣಮಿಸುವುದೇ?

ಡಾ.ಶುಶ್ರುತ : ಇದಕ್ಕೆ ಉತ್ತರಿಸಲು ನಾನು ರಾಜಕೀಯ ವ್ಯಕ್ತಿಯಲ್ಲ. ಆದರೆ ನೆರೆದ ಜನ ಸಮೂಹದ ಪ್ರತಿಕ್ರಿಯೆ ಹಾಗೂ ನನಗಿರುವ ಅಲ್ಪ ರಾಜಕೀಯ ಜ್ಞಾನದ ಪ್ರಕಾರ ಈ ಯಾತ್ರೆಯಿಂದ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡಮಟ್ಟದ ಲಾಭವಾಗಲಿದೆ. ಆದರೆ ಕಾಲವೇ ಇದನ್ನು ಹೇಳಬೇಕಷ್ಟೇ.

ಮಿತ್ರ: ಈ ಪಾದಯಾತ್ರೆಯಿಂದಾಗಿ ರಾಹುಲ್ ಗಾಂಧಿಯವರು ತಮ್ಮ ಹಿಂದಿನ ವ್ಯಕ್ತಿತ್ವವನ್ನು ಕಳಚಿ, ಹೊಸ ವರ್ಚಸ್ಸನ್ನು ಪಡೆದಿದ್ದಾರೆಯೇ. ಇಲ್ಲ, ಜನರ ನಂಬಿಕೆ ಹಾಗೂ ವಿಶ್ವಾಸ ಗಳಿಸಲು ಇನ್ನೂ ಹೆಚ್ಚಿನದನ್ನು ಸಾಧಿಸಬೇಕಾಗಿದೆಯೇ?

ಡಾ. ಸುಶ್ರುತ: ರಾಹುಲ್ ಗಾಂಧಿಯವರೊಡನೆ ನಾನು ನಡೆಸಿದ ಸಂವಹನದ ಪ್ರಕಾರ ಹೇಳುವುದಾದನೆ, ರಾಹುಲ್ ಗಾಂಧಿಯವರು ಯಾತ್ರೆಯುದ್ದಕ್ಕೂ ಕಂಡಂತಹ ಸಾಮಾಜಿಕ, ಆರ್ಥಿಕ, ಗ್ರಾಮೀಣ ಆರೋಗ್ಯ ಪರಿಸ್ಥಿತಿಗಳ ಮನಗಂಡು ಜನಸಾಮಾನ್ಯರ ಜೀವನ ಸುಧಾರಿಸುವುದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಅವರು ಪ್ರತಿಯೊಂದು ವಲಯವನ್ನು ಉತ್ತಮ ಪಡಿಸುವ ಇರಾದೆ ಹೊಂದಿದ್ದಾರೆ. ಆದ್ದರಿಂದ ಅವರ ವಿರುದ್ದ ಮಾಡಲಾದ ಆರೋಪಗಳು ಖಂಡಿತವಾಗಿ ಸುಳ್ಳು ಕಳೆದ ಹಲವು ದಶಕಗಳ ಕಾಲದಿಂದ ಯಾವುದೇ ನಾಯಕ ಅವರ ರೀತಿಯಲ್ಲಿ ಜನರನ್ನು ಸಂದಿಸುವ ಧೈರ್ಯ ತೋರಿಲ್ಲ. ರಾಹುಲ್ ಗಾಂಧಿಯವರು ಪ್ರಶ್ನೆಗಳನ್ನು ಕೇಳುತ್ತಾ ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹಾಗೂ ಸಂವಾದದಲ್ಲಿ ಜನರನ್ನು ಭಾಗಿಗಳಾಗಿಸುತ್ತಾ ಹಲವಾರು ಮಾಧ್ಯಮ ಸಂವಹನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ರಾಹುಲ್ ಗಾಂಧಿಯವರು ಈ ವಿಚಾರದಲ್ಲಿ ತುಂಬಾ ಜನಪರ ಚಿಂತಕರು. ಅವರು ಸುಲಭವಾಗಿ ಜನರೊಂದಿಗೆ, ಮಾಧ್ಯಮಗಳೊಂದಿಗೆ ಸಂಪರ್ಕ ಸಾಧಿಸಬಲ್ಲರು. ಈ ಪ್ರಶ್ನೆಗೆ ಮಾಧ್ಯಮಗಳೇ ಉತ್ತರಿಸಬೇಕು.

ಮಿತ್ರ : ಸುದೀರ್ಘ ಯಾತ್ರೆಯಲ್ಲಿ ತಾವು ಕಲಿತಿದ್ದೇನು? ರಾಹುಲ್ ಗಾಂಧಿಯವರಿಂದಒಗ್ಗೂಡಲು ಭಾರತ ನಿಜವಾಗಿ ಅದು ವಿಭಜನೆಗೊಂಡಿದೆಯೇ?

ಡಾ. ಶುಶ್ರುತ : ಅಮೇರಿಕಾದಿಂದ ನಾನು ಭಾರತಕ್ಕೆ ವಾಪಸ್ ಬಂದ ಮೇಲೆ ಖಂಡಿತಾ ಆ ರೀತಿ ಭಾವಿಸಿದೆ. ಭಾರತ ಯಾವ ರೀತಿ ಬದಲಾಗಿದೆಯೆಂಬುದನ್ನು ತಿಳಿದು ನನಗೆ ಆಘಾತವಾಯಿತು. ಸಾಮಾನ್ಯವಾಗಿ ನಾನು 10 ರಿಂದ 15 ದಿನಗಳವರೆಗೆ ಭಾರತಕ್ಕೆ ಬಂದು ಹೋಗುತ್ತಿದ್ದೆ. ಆದರೆ ನಾನು ಇಲ್ಲಿಯೇ ನೆಲೆ ನಿಲ್ಲಲು ಪ್ರಾರಂಭಿಸಿದ ಮೇಲೆ ದೇಶ ವಿಭಜನೆಗೊಂಡಿದೆ ಎಂಬ ಅರಿವು ನನಗುಂಟಾಯಿತು.

ಪ್ರತಿ ದಿನ ನಾವು ಕೊಲೆ, ಅತ್ಯಾಚಾರ, ಮಹಿಳಾ ಭದ್ರತೆಯ ಸಮಸ್ಯೆಗಳು, ಅಸ್ತವ್ಯಸ್ತಗೊಂಡ ಆರ್ಥಿಕತೆ ಹಾಗೂ ರೈತರ ಸಮಸ್ಯೆಗಳ ಬಗ್ಗೆ ದೃಶ್ಯ ಮಾಧ್ಯಮಗಳಲ್ಲಿ ನೋಡುತ್ತೇವೆ ಹಾಗೂ ಕೇಳುತ್ತೇವೆ ಮತ್ತು ಪತ್ರಿಕೆಗಳಲ್ಲಿ ಓದುತ್ತೇವೆ ಜನರು ಧರ್ಮ ಹಾಗೂ ಮೂಲ ಸೌಕರ್ಯಗಳ ಕೊರತೆ ಹಾಗೂ ಭ್ರಷ್ಟಾಚಾರದ ವಿಚಾರಗಳಲ್ಲಿ ಸಹ ವಿಭಜಿತರಾಗಿದ್ದಾರೆ.

ಮಿತ್ರ : ಓರ್ವ ವೈದ್ಯರಾಗಿ, ಮೈಸೂರಿನಲ್ಲಿರುವ ನಿಮ್ಮ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾ, ಅದೇ ವೇಳೆ ಯಾತ್ರೆಯ ಒಂದು ಭಾಗವಾಗಿ ಹೇಗೆ ಕಾರ್ಯ ನಿರ್ವಹಿಸಿದ್ದೀರಿ?

ಡಾ. ಶುಶ್ರುತ : ಓರ್ವ ಟೆಲಿಪತಿ ವೈದ್ಯನಾಗಿ, ನಾನು THAR ಯೋಜನೆಯಲ್ಲಿ (Telehealth Advisory for Rural) ತೊಡಗಿಸಿಕೊಂಡಿದ್ದೇನೆ. ಇದರ ಮೂಲಕ ಉಚಿತ ಟೆಲಿಹೆಲ್ತ್ ಹಾಗೂ ಆರೋಗ್ಯ ಶಿಬಿರಗಳನ್ನು ಮೈಸೂರು ಮತ್ತು ಕೊಡಗಿನ ಸುತ್ತ ಮುತ್ತ ಹಮ್ಮಿಕೊಳ್ಳುತ್ತೇನೆ. ಟೆಲಿ ಮೆಡಿಸಿನ್ ಮೂಲಕ ಅಮೇರಿಕಾದ ಹಲವಾರು ಆಸ್ಪತ್ರೆಗಳಲ್ಲಿ ವೈದ್ಯಕೀಯ ಸಲಹೆ ನೀಡುತ್ತೇನೆ. ಇಲ್ಲಿಯೂ ನಾನು ಇದೇ ತಂತ್ರಜ್ಞಾನವನ್ನು ಬಳಸುತ್ತೇನೆ. ನನ್ನನ್ನು ವೈಯಕ್ತಿಕವಾಗಿ ಭೇಟಿ ಮಾಡಲು ಅಪೇಕ್ಷಿಸುವ ರೋಗಿಗಳ ಜೊತೆಯಲ್ಲಿ ವಾಟ್ಸ್ ಆಪ್ ಮೂಲಕ ಸಂಪರ್ಕ ಸಾಧಿಸಿ, ನನ್ನ ದೂರವಾಣಿ ಮತ್ತು ಲ್ಯಾಪ್‌ಟಾಪ್ ಮೂಲಕ ಟೆಲಿ ಮೆಡಿಸಿನ್ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತೇನೆ.

ಮಿತ್ರ : ಯಾತ್ರೆಯ ಸಂದರ್ಭದಲ್ಲಿ ನಿಮ್ಮ ನೆನಪಿನಲ್ಲಿ ಉಳಿಯುವ ಕ್ಷಣಗಳು ಯಾವುವು ಇರಬಹುದು?

ಡಾ.ಶುಶ್ರುತ : ನಾವು ಪಾದಯಾತ್ರೆ ಸಂದರ್ಭದಲ್ಲಿ ನಮ್ಮ ಜೊತೆ 80 ವರ್ಷ ವಯಸ್ಸಿನ ವೃದ್ಧರಿದ್ದರು. ಅವರು ನಮ್ಮ ಕಣ್ಣೆದುರೇ ಕುಸಿದು ಬಿದ್ದು ಅಸುನೀಗಿದರು. ಪಂಜಾಬಿನ ಸಂಸದರೊಬ್ಬರು ಹೃದಯಾಘಾತಕ್ಕೆ ಒಳಗಾಗಿ ಮರಣ ಹೊಂದಿದರು. ಓರ್ವ ವ್ಯಕ್ತಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದು, ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು.

ಸಂತೋಷದಾಯಕ ಸಂಗತಿಗಳೆಂದರೆ; ನಮ್ಮ ಯಾತ್ರೆಯ ಕಡೆಯ ಸುತ್ತಿನಲ್ಲಿ ಜಮ್ಮು–ಕಾಶ್ಮೀರದಲ್ಲಿ ಹೆಂಗಸರು, ಮಕ್ಕಳು ಸೇರಿದಂತೆ ಜನರು ಭದ್ರತಾ ಸಿಬ್ಬಂದಿಗಳು ಹಿಡಿದಿದ್ದ ಬಂದೂಕುಗಳನ್ನು ಲೆಕ್ಕಿಸದೇ ಯಾತ್ರೆಯಲ್ಲಿ ಪಾಲ್ಗೊಳ್ಳಲು ಓಡೋಡಿ ಬರುತ್ತಿದ್ದರು. ಇದು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಒಟ್ಟಾರೆ ಜನರ ಸಂಭ್ರಮ, ಉತ್ಸಾಹ, ಸಡಗರ ಹಾಗೂ ಅವರು ರಾಹುಲ್ ಗಾಂಧಿಯವರಲ್ಲಿ ಅಪಾರ ವಿಶ್ವಾಸ ಹೊಂದಿರುವುದು ನಮಗೆ ಮನವರಿಕೆ ಆಯಿತು.

ಮಿತ್ರ : ನೀವು ಅತ್ಯಂತ ಉಷ್ಣ ವಲಯದಿಂದ ಅತ್ಯಂತ ಶೀತ ಪ್ರದೇಶಗಳಲ್ಲಿ ಸಂಚರಿಸಿದ್ದೀರಾ. ಹವಾಮಾನ ಬದಲಾವಣೆಯನ್ನು ಹೇಗೆ ಹೊಂದಾಣಿಕೆ ಮಾಡಿಕೊಂಡಿರಿ?

ಡಾ.ಶುಶ್ರುತ : ಹರಿಯಾಣವನ್ನು ನಾವು ತಲಪುವವರೆಗೆ ನಮಗೆ ಹವಾಮಾನದ ಯಾವ ಸಮಸ್ಯೆಯೂ ಉಂಟಾಗಲಿಲ್ಲ. ಆದರೆ ಕರ್ನಾಟಕ ಮತ್ತು ಕೇರಳದಲ್ಲಿ ತುಂಬಾ ಬಿಸಿಯಾದ ತಾಪಮಾನವಿತ್ತು. ಆದರೆ ನಾವು ಅಲ್ಲಿಂದ ತೆಲ್ಲಂಗಾಣ ಮತ್ತು ಮಹಾರಾಷ್ಟ್ರಕ್ಕೆ ಸಾಗುತ್ತಿದ್ದ ಹಾಗೆ ನಮಗೆ ತುಂಬಾ ಆಹ್ಲಾದಕರವಾದ ಹವಾಮಾನ ದೊರಕಿತು. ನಾವು ಹರಿಯಾಣ ತಲುಪುತಿದ್ದಂತೆಯೇ ತಾಪಮಾನ ದಿಢೀರ್ ಕುಸಿಯಿತು. ಎಂಟು ಮತ್ತು ಒಂಬತ್ತನೆಯ ಹಂತಗಳನ್ನು ದಾಟಿದ ಮೇಲೆ ನಮಗೆ ಚಳಿಯ ಅನುಭವ ಉಂಟಾಯಿತು. ನಾವು ಹೆಚ್ಚು ತಾಪಮಾನದ ಜೊತೆಗೆ ಹೊಂದಿಕೊಳ್ಳಲು ಸಜ್ಜಾಗಿದ್ದೆವು. ಆದರೆ ಶೀತ ಹವಾಮಾನಕ್ಕೆ ಹೊಂದಿಕೊಳ್ಳಲು ಸಜ್ಜಾಗಿರಲಿಲ್ಲ. ಪ್ರಾರಂಭದಲ್ಲಿ, ತುಂಬಾ ತುಂಬಾ ಆಯಾಸ, ತ್ರಾಸದಾಯಕವಾಯಿತು. ಆದರೂ ನಾವು ಶೀಘ್ರ ಹೊಂದಿಕೊಂಡೆವು. ಯಾತ್ರೆಯ ಕಡೆಯ 10 ದಿನಗಳಲ್ಲಿ ಅತ್ಯಂತ ಭೀಕರ ಚಳಿಯನ್ನು ಎದುರಿಸಬೇಕಾಯಿತು. ಮುಂದೇನಾಗಬಹುದೆಂಬ ಭಯ ನಮ್ಮನ್ನು ಕಾಡಿತು. ಆದರೂ, ಹೇಗೋ, ನಮ್ಮ ತಂಡದ ಸ್ಫೂರ್ತಿಯಿಂದ ಹಾಗೂ ನೆರೆದಿದ್ದ ಅಪಾರ ಜನರ ಉತ್ಸಾಹದಿಂದ '–3' ಡಿಗ್ರಿ ಸೆಲ್ಸಿಯಸ್ ಚಳಿಯಲ್ಲೂ ನಡೆದು, ಸಾಗಿದೆವು.

ಮಿತ್ರ : ಈ ಯಾತ್ರೆಯಿಂದ ನೀವು ಹಾಗೂ ದೇಶ ಕೊಂಡೊಯ್ಯಬಹುದಾದ ಪ್ರಮುಖ ಸಂದೇಶಗಳೇನು?

ಡಾ. ಶುಶ್ರುತ : ಈ ನಿಟ್ಟಿನಲ್ಲಿ ನನಗೆ ತುಂಬಾ ಸ್ಪಷ್ಟವಾಗಿದೆ. ಮೊದಲನೆಯದಾಗಿ, ಭಾರತವು ವಿಭಜನೆಗೊಂಡಿದ್ದು, ಭಾರತ್ ಜೋಡೋ ಯಾತ್ರೆಯು ಅತ್ಯಂತ ಪ್ರಸ್ತುತವಾಗಿದೆ. ಭಾರತ ದೇಶದ ಬಗ್ಗೆ ಹೇಳುವುದಾದರೆ, ಎಲ್ಲರೂ ಒಗ್ಗೂಡಿ ಹೋಗಬೇಕಿದೆ. ಈ ನಿಟ್ಟಿನಲ್ಲಿ ಇದು ನಾವು ಪ್ರಾರಂಭಿಸಿರುವ ಸಣ್ಣ ಧ್ವನಿಯಾಗಿದ್ದು, ಮುಂದೆ ಸಾಗಬೇಕಾದ ದಾರಿ ಬಹಳಷ್ಟಿದೆ. ನಾವೇ ಸ್ವಂತವಾಗಿ, ವೈಯಕ್ತಿಕವಾಗಿ ಇದನ್ನು ಮಾಡಲು ಸಾಧ್ಯವಿಲ್ಲವೆಂದು ನನಗೆ ಅನ್ನಿಸುತ್ತದೆ.

ಪ್ರತಿಯೊಂದು ಸಂಸ್ಥೆ ಅಥವಾ ಸಂಘಟನೆ, ಎಲ್ಲಾ ರಾಜಕೀಯ ಪಕ್ಷಗಳು, (ಆಳುವ ಅಥವಾ ವಿರೋಧ ಪಕ್ಷಗಳೋ ಎಂಬುದು ಮುಖ್ಯವಲ್ಲ), ದೇಶದ ಸಮಸ್ಯೆಗಳನ್ನು ಬಗೆಹರಿಸಲು ಒಗ್ಗೂಡಬೇಕು. ಪ್ರತಿಯೊಂದು ಪಕ್ಷವೂ ಇಂತಹ ಯಾತ್ರೆಯನ್ನು ಕೈಗೊಂಡು ದೇಶ ಎದುರಿಸುತ್ತಿರುವ ನೈಜ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. ರಾಜಕೀಯ ಪಕ್ಷಗಳು ಸ್ವಾರ್ಥ ಉದ್ದೇಶಗಳನ್ನು ಬಿಟ್ಟು ದೇಶವನ್ನು ಒಗ್ಗೂಡಿಸುವ ಜರೂರು, ಅನಿವಾರ್ಯತೆ ಇದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೂವರ ಬಂಧನ; ಒಂದೂವರೆ ಕೆಜಿ ಗಾಂಜಾ ವಶ

ಮೈಸೂರು, ಫೆ.13(ಎಸ್‌ಬಿಡಿ)– ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಪ್ರತ್ಯೇಕ ಪ್ರಕರಣಗಳಲ್ಲಿ ಬಂಧಿತರಿಂದ ಸುಮಾರು ಒಂದೂವರೆ ಕೆಜಿ ಗಾಂಜಾ, 17 ಸಾವಿರ ರೂ. ನಗದು, ಎರಡು ದ್ವಿಚಕ್ರ ವಾಹನಗಳು ಹಾಗೂ ಮೊಬೈಲ್ ವಶಪಡಿಸಿಕೊಳ್ಳಲಾಗಿದೆ.

ರಾಜೀವ್‌ನಗರ ಮೊದಲ ಹಂತದ ಟೀ ಅಂಗಡಿಯೊಂದರ ಮುಂಭಾಗ ಫುಟ್‌ಪಾತ್‌ನಲ್ಲಿ ನಿಂತಿದ್ದ ಇಬ್ಬರು, ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಇಬ್ಬರನ್ನು ಬಂಧಿಸಿ ಅವರ ಬಳಿಯಿದ್ದ 860 ಗ್ರಾಂ ಗಾಂಜಾ, 17 ಸಾವಿರ ರೂ. ನಗದು, ಮೊಬೈಲ್ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡಿ ಮೊಹಲ್ಲಾ ಸಾಡೇ ರಸ್ತೆ, ಮಿಷನ್ ಆಸ್ಪತ್ರೆ ಬಳಿ ಬೈಕ್ ಗ್ಯಾರೇಜ್ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಮತ್ತೋರ್ವನನ್ನು ಬಂಧಿಸಿ, ಆತನಿಂದ 620 ಗ್ರಾಂ ಗಾಂಜಾ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್‌ಸ್ಪೆಕ್ಟರ್ ಪಿ.ಅನೂಪ್ ಮಾದಪ್ಪ, ಸಬ್‌ಇನ್‌ಸ್ಪೆಕ್ಟರ್ ಪ್ರತಿಭಾ ಜಂಗವಾಡ, ಎಎಸ್‌ಐ ರಾಜು, ಸಿಬ್ಬಂದಿ ಜೋಸೆಫ್ ನೊರೊನ್ಹಾ, ಶ್ರೀನಿವಾಸಪ್ರಸಾದ್, ಬಿ.ರಾಧೇಶ್, ಮಂಜುನಾಥ್, ಅನಿಲ್, ಅರುಣ್ ಹಾಗೂ ಸುಬಾನಲ್ಲಾ ಬಾಲಾದಾರ್ ಪಾಲ್ಗೊಂಡಿದ್ದರು.

ಇಬ್ಬರು ಸರಗಳ್ಳರ ಬಂಧನ; 14 ಲಕ್ಷ ಮೌಲ್ಯದ ಸರ ವಶ



ಮೈಸೂರು, ಫೆ.13(ಎಸ್‌ಬಿಡಿ)– ಮೈಸೂರಿನ ಜಯಲಕ್ಷ್ಮಿಪುರಂ ಠಾಣೆ ಪೊಲೀಸರು, ಇಬ್ಬರು ಅಂತರ ಜಿಲ್ಲಾ ಕುಖ್ಯಾತ ಸರಗಳ್ಳರನ್ನು ಬಂಧಿಸಿ ಸುಮಾರು 14 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದು, ಮತ್ತೋರ್ವನಿಗೆ ಶೋಧ ಮುಂದುವರೆಸಿದ್ದಾರೆ.

ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಅವರು ಸರಗಳ್ಳರೆಂದು ತಿಳಿದಿದೆ. ಬಳಿಕ ಇಬ್ಬರನ್ನೂ ಫೆ.6ರಂದು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಯ ಹಲವೆಡೆ ಕಳ್ಳತನ ನಡೆಸಿದ್ದು, ತಮ್ಮೊಂದಿಗೆ ಮತ್ತೋರ್ವ ಸಹಚರನೂ ಭಾಗಿಯಾಗಿರುವುದಾಗಿ ಹೇಳಿಕೆ ನೀಡಿದ್ದಾರೆ. ಬಂಧಿತರಲ್ಲಿ ಓರ್ವ ಮೈಸೂರು ನಗರ ಹಾಗೂ ಮತ್ತೋರ್ವ ಚಾಮರಾಜನಗರದವನು.

ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಸುಮಾರು 14 ಲಕ್ಷ ರೂ. ಮೌಲ್ಯದ 230 ಗ್ರಾಂ ತೂಕದ 8 ಚಿನ್ನದ ಮಾಂಗಲ್ಯ ಸರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಮೂಲಕ ಜಯಲಕ್ಷ್ಮಿಪುರಂ ಠಾಣೆ, ಕುವೆಂಪುನಗರ, ಆಲನಹಳ್ಳಿ, ಉದಯಗಿರಿ ಠಾಣೆ, ನಂಜನಗೂಡು ಟೌನ್, ಕೆ.ಆರ್.ನಗರ, ತಿ.ನರಸೀಪುರ, ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಪಟ್ಟಣ ಠಾಣೆ ವ್ಯಾಪ್ತಿಯ ಒಟ್ಟು 8 ಸರಗಳ್ಳತನ ಪ್ರಕರಣಗಳು ಪತ್ತೆಯಾದಂತಾಗಿದೆ. ಆರೋಪಿಗಳು ದುಷ್ಕೃತ್ಯಕ್ಕೆ ಬಳಸಿದ್ದ ಪಲ್ಸರ್ ಬೈಕ್ ಅನ್ನೂ ವಶಪಡಿಸಿಕೊಳ್ಳಲಾಗಿದ್ದು, ತಲೆ ಮರೆಸಿಕೊಂಡಿರುವ ಮತ್ತೋರ್ವನ ಬಂಧನಕ್ಕೆ ಬಲೆ ಬೀಸಿದ್ದಾರೆ.

ಡಿಸಿಪಿ ಜಾಹ್ನವಿ ಮಾರ್ಗದರ್ಶನ, ನರಸಿಂಹರಾಜ(ಎನ್‌ಆರ್) ವಿಭಾಗದ ಎಸಿಪಿ ಅಶ್ವಥನಾರಾಯಣ ನೇತೃತ್ವದಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ ಜಯಲಕ್ಷ್ಮೀಪುರಂ ಠಾಣೆ ಇನ್‌ಸ್ಪೆಕ್ಟರ್ ಗೋವಿಂದರಾಜು, ಸಬ್‌ಇನ್‌ಸ್ಪೆಕ್ಟರ್‌ಗಳಾದ ಎನ್.ವಿ.ರಂಗಸ್ವಾಮಿ, ಆರ್.ಪ್ರಭುರಾಜ್, ಸಿಬ್ಬಂದಿ ಅಭಿಷೇಕ್ ಬೆಂಜಮಿನ್, ದೇವರಾಜು, ಅಮಸಿದ್ದ ಖೋತ, ಕಾಂತರಾಜು, ಮಾಯಪ್ಪ ಕರಂಗಾವಿ, ಮನೋಹರ, ಕುಮಾರ್, ಎನ್.ಆರ್. ವಿಭಾಗದ ಎಸಿಪಿ ಸ್ಕ್ವಾಡ್‌ನ ಎಎಸ್‌ಐ ಅನಿಲ್ ಶಂಕಪಾಲ್, ಸಿಬ್ಬಂದಿ ಲಿಂಗರಾಜಪ್ಪ, ಸುರೇಶ್, ರಮೇಶ್, ಜೀವನ್, ಹರೀಶ್, ಹನುಮಂತ ಕಲ್ಲೇದ್, ತಾಂತ್ರಿಕ ವಿಭಾಗದ ಕುಮಾರ್, ಗುರುದೇವರಾಧ್ಯ, ಮಂಜು ಹಾಗೂ ಶ್ಯಾಮ್ ಭಾಗವಹಿಸಿದ್ದರು.

ಸಂಚಾರ ನಿಯಮ ಉಲ್ಲಂಘನೆ ದಂಡದಲ್ಲಿ ಶೇ.50 ಆಫರ್

ಒಂಬತ್ತು ದಿನದಲ್ಲಿ ಮೈಸೂರಲ್ಲಿ 12.30 ಕೋಟಿ ದಂಡ ಸಂಗ್ರಹ

ಮತ್ತೆ ಕಾಲಾವಕಾಶ ಸಾಧ್ಯತೆ

ಮೈಸೂರು, ಫೆ.13(ಎಸ್‌ಬಿಡಿ)– ಮೈಸೂರು ನಗರ ವ್ಯಾಪ್ತಿಯಲ್ಲಿ ಶೇ.50ರ ರಿಯಾಯ್ತಿಯಡಿ ಒಟ್ಟು 12.30 ಕೋಟಿ ರೂ. ಟ್ರಾಫಿಕ್ ದಂಡ ಸಂಗ್ರಹವಾಗಿದೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಬಾಕಿ ದಂಡ ಪಾವತಿಗೆ ಫೆ.11ರವರೆಗೆ ಅನುಮಾನವಾಗುವಂತೆ ಶೇ.50ರಷ್ಟು ರಿಯಾಯ್ತಿ ಘೋಷಿಸಿ, ಸರ್ಕಾರ ಆದೇಶ ಹೊರಡಿಸಿತ್ತು. ಅದರಂತೆ ಫೆ.3ರಿಂದ ನಿನ್ನೆವರೆಗೆ ಸಂಚಾರ ಇ-ಚಲನ್ ಒಟ್ಟು 4,98,265 ಪ್ರಕರಣಗಳ ಇತ್ಯರ್ಥದೊಂದಿಗೆ ಒಟ್ಟು 12,30,58,650 ರೂ. ದಂಡ ಪಾವತಿಯಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಾಕಿ ದಂಡ ಅರ್ಧದಷ್ಟು ಪಾವತಿಸಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಂದ ಮುಕ್ತವಾಗುವ ಬಂಪರ್ ಅವಕಾಶ ನೀಡಿದ್ದರಿಂದ ಜನ ಠಾಣೆಗಳ ಮುಂದೆ ಸಾಲುಗಟ್ಟಿ ನಿಂತಿದ್ದರು. ಮತ್ತಷ್ಟು ಮಂದಿ ಕರ್ನಾಟಕ ಒನ್ ಹಾಗೂ ಆನ್‌ಲೈನ್ ಮೂಲಕ ದಂಡ ಪಾವತಿ ಮಾಡಿದರು. ಪರಿಣಾಮ ವರ್ಷದಲ್ಲಿ ಸಂಗ್ರಹವಾಗುತ್ತಿದ್ದ ದಂಡದ ಮೊತ್ತ ಕೇವಲ 9 ದಿನಗಳಲ್ಲಿ ಸಂಗ್ರಹವಾಗಿದೆ.

ಮತ್ತೆ ಅವಕಾಶ: ರಿಯಾಯ್ತಿಯಡಿ ದಂಡ ಸಂಗ್ರಹದ ಬಗ್ಗೆ ಮಾತನಾಡಿರುವ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪನವರು, ರಾಜ್ಯದಲ್ಲಿ ಒಟ್ಟು 52,11,424 ಪ್ರಕರಣಗಳಲ್ಲಿ 152 ಕೋಟಿ ರೂ. ಸಂಗ್ರಹವಾಗಿದ್ದು, ರಿಯಾಯ್ತಿ ಅವಧಿಯನ್ನು ವಿಸ್ತರಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದರಿಂದ ಸರ್ಕಾರ ಮತ್ತೆರಡು ವಾರ ಅವಕಾಶ ನೀಡುವ ಸಾಧ್ಯತೆ ಇದೆ. ಈ ಬಗ್ಗೆ ಅಧಿಕೃತ ಆದೇಶ ಪ್ರಕಟವಾಗಬೇಕಿದೆ ಎಂದಿದ್ದಾರೆ.

ಕಲ್ಯಾಣ ಮಂಟಪದಲ್ಲಿ ವರನ ಉಡುಗೊರೆ ಕಳವು

ಮೈಸೂರು, ಫೆ. 13– ಕಲ್ಯಾಣ ಮಂಟಪದಲ್ಲಿ ವರನಿಗೆ ಬಂದಿದ್ದ ಉಡುಗೊರೆಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಹುಣಸೂರು ತಾಲೂಕು ಕಿರಿಜಾಜಿ ಗ್ರಾಮದ ಹೆಚ್.ಸಿ. ಪ್ರಮೋದ್ ಎಂಬುವರ ವಿವಾಹ ಮೈಸೂರಿನ ಸಾರಾ ಕನ್ವೆನ್ಷನ್ ಹಾಲ್‌ನಲ್ಲಿ ಫೆಬ್ರವರಿ 11 ಮತ್ತು 12ರಂದು ನಡೆದಿತ್ತು. ಫೆಬ್ರವರಿ 11ರಂದು ರಾತ್ರಿ ಆರತಕ್ಷತೆ ವೇಳೆ ಅವರಿಗೆ ಬಂದಿದ್ದ ಚಿನ್ನಾಭರಣ ಹಾಗೂ ಹಣದ ಉಡುಗೊರೆಗಳನ್ನು ತುಂಬಿಟ್ಟಿದ್ದ ಬ್ಯಾಗ್ ಅನ್ನು ಖದೀಮರು ಆರತಕ್ಷತೆ ವೇದಿಕೆಯಿಂದಲೇ ಕಳವು ಮಾಡಿದ್ದಾರೆ ಎಂದು ವರನ ಸಹೋದರ ಹೆಚ್.ಸಿ. ಪ್ರದೀಪ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ವರನ ಉಡುಗೊರೆ ಕಳವು ಮಾಡಿದ ಖದೀಮರನ್ನು ಪತ್ತೆ ಮಾಡುವ ಸಲುವಾಗಿ ಕನ್ವೆನ್ಷನ್ ಹಾಲ್‌ನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸಿದಾಗ ಹಾಲ್ ಮ್ಯಾನೇಜರ್‌ರನ್ನು ಕೇಳಲಾಗಿ, ಸಿಸಿ ಕ್ಯಾಮರಾ ಕೆಟ್ಟುಹೋಗಿದೆ ಎಂದು ಅವರು ನಿರ್ಲಕ್ಷ್ಯತೆಯಿಂದ ಉತ್ತರಿಸಿದ್ದಾರೆ ಎಂದು ಪ್ರದೀಪ್ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಸಂಬಂಧ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕೇರಳದ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ ಹಣ, ಎಟಿಎಂ ಕಾರ್ಡ್ ಕಳವು

ಮೈಸೂರು, ಫೆ. 13– ಕೇರಳ ಮೂಲದ ವ್ಯಕ್ತಿಯೋರ್ವನ ಮೇಲೆ ಹಲ್ಲೆ ನಡೆಸಿ ಹಣ ಮತ್ತು ಎಟಿಎಂ ಕಾರ್ಡ್ ದೋಚಿರುವ ಘಟನೆ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್ ಬಳಿ ನಡೆದಿದೆ. ಕೇರಳದ ಕಣ್ಣೂರು ಜಿಲ್ಲೆ ವಾಯತ್ತೂರು ಗ್ರಾಮದ ಧನೇಶ್(41) ಹಣ ಹಾಗೂ ಎಟಿಎಂ ಕಾರ್ಡ್ ಕಳೆದುಕೊಂಡವರಾಗಿದ್ದು, ಇವರು ಫೆಬ್ರವರಿ 10ರಂದು ಬೆಂಗಳೂರಿನಿಂದ ಮೈಸೂರಿನ ಬಸ್ ನಿಲ್ದಾಣಕ್ಕೆ ರಾತ್ರಿ 1 ಗಂಟೆಗೆ ತಲುಪಿದ್ದು, ಕೇರಳ ಬಸ್ ಬರುವ ಮುನ್ನ ಸಿಗರೇಟ್ ಸೇದಲು ಬಸ್ ನಿಲ್ದಾಣದ ಹೊರಗೆ ಬಂದಿದ್ದಾರೆ. ಈ ವೇಳೆ ಆಟೋದಲ್ಲಿ ಬಂದ ದುಷ್ಕರ್ಮಿಗಳು ಇವರ ಮೇಲೆ ಮರದ ತುಂಡು ಹಾಗೂ ಕಲ್ಲಿನಿಂದ ಹಲ್ಲೆ ನಡೆಸಿ, ಅವರ ಬಳಿ ಇದ್ದ ಮೊಬೈಲ್, ಎಟಿಎಂ ಕಾರ್ಡ್, ವಾಚ್ ಹಾಗೂ 1600 ರೂ. ನಗದು ಕಿತ್ತುಕೊಂಡಿದ್ದಲ್ಲದೇ, ಎಟಿಎಂ ಕಾರ್ಡ್‌ನ ಪಿನ್ ನಂಬರ್ ಅನ್ನು ಸಹ ಪಡೆದು ಪರಾರಿಯಾಗಿದ್ದಾರೆ. ಗಾಯಗೊಂಡಿದ್ದ ಧನೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಲಕ್ಷ್ಮೀಪುರಂ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಡಾ. ಶ್ರೀ ಶಿವಕುಮಾರ ಸ್ವಾಮೀಜಿ, ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ನುಡಿನಮನ

ಜೀವನದುದ್ದಕ್ಕೂ ಸರಳ ಜೀವನ, ಪ್ರೀತಿಯನ್ನರಿಸಿದ ಮಹಾನ್ ದಾರ್ಶನಿಕರು; ಸಾಧು ಸಂತರಿಂದ ಗುಣಗಾನ

ಮೈಸೂರು, ಫೆ.13(ಎಂಕೆ)– ಮೈಸೂರಿನ ಹೊಸಮಠದ ನಟರಾಜ ಕಲಾಮಂಟಪದಲ್ಲಿ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿಯವರ 4ನೇ ವರ್ಷದ ಪುಣ್ಯಸ್ಮರಣೆಯೊಂದಿಗೆ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ನುಡಿನಮನ ಸಲ್ಲಿಸಲಾಯಿತು.

ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳವರ ಪುಣ್ಯಸ್ಮರಣೆ ಕಾರ್ಯಕ್ರಮ ಸಮಿತಿ ವತಿಯಿಂದ ಆಯೋಜಿಸಿದ್ದ ಪುಣ್ಯಸ್ಮರಣೆ ಹಾಗೂ ನುಡಿನಮನ ಕಾರ್ಯಕ್ರಮದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.



ಮೈಸೂರಿನ ಹೊಸಮಠದ ನಟರಾಜ ಕಲಾ ಮಂಟಪದಲ್ಲಿ ಡಾ.ಶ್ರೀ ಶಿವಕುಮಾರ ಸ್ವಾಮೀಜಿ 4ನೇ ವರ್ಷದ ಪುಣ್ಯಸ್ಮರಣೆ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ನುಡಿನಮನ ಸಲ್ಲಿಸಲಾಯಿತು.

ಬಳಿಕ ನುಡಿನಮನ ಸಲ್ಲಿಸಿದ ವಿಜಯಪುರ ತಾಳಿಕೋಟೆಯ ಖಾಸ್ಗತೇಶ್ವರ ಮಠದ ಶ್ರೀ ಸಿದ್ದಲಿಂಗ ದೇವರು, ಜಗತ್ತಿಗೆ ಪ್ರೀತಿ ಹಂಚಿದ ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ನಾಡು ಕಂಡ ಮಹಾನ್ ದಾರ್ಶನಿಕರಾಗಿದ್ದಾರೆ. ಜೀವನದುದ್ದಕ್ಕೂ ಸರಳ ಜೀವನ ಮಾಡಿ ನಮ್ಮೆಲ್ಲರಿಗೂ ಆದರ್ಶವಾಗಿದ್ದಾರೆ ಎಂದರು.

ಈ ಜಗತ್ತನ್ನು ಗೆಲ್ಲಬೇಕಾದರೆ ಮನುಷ್ಯ ಏನು ಮಾಡಬೇಕು ಎನ್ನುತ್ತಲೇ ಮಾತು ಆರಂಭಿಸಿದ ಅವರು, ಎಲ್ಲರಿಗೂ ಒಂದಲ್ಲಾ ಒಂದು ಆಸೆಗಳು ಇದ್ದೆ ಇರುತ್ತದೆ. ಚೆಂದದ ಮನೆ ಕಟ್ಟಬೇಕು. ಕಾರ್ ತಗೋಬೇಕು. ಊರಿನಲ್ಲಿ ಯಾರು ಮಾಡಿರದಂತೆ ಹೆಸರು ಮಾಡಬೇಕು ಎಂಬಿತ್ಯಾದಿ ಆಸೆಗಳು ಇರುತ್ತವೆ. ಆದರೆ ಇದರಿಂದ ಜಗತ್ತನ್ನು ಗೆಲ್ಲಲು ಸಾಧ್ಯವಿಲ್ಲ. ಒಬ್ಬ ರಾಜ ಇಡೀ ಜಗತ್ತನ್ನೇ ಗೆಲ್ಲಬೇಕೆಂದು ತನ್ನೆದುರಿಗೆ ಬಂದವರನ್ನು ಕೊಲ್ಲುತ್ತಾ ಹೋಗುವಾಗ ಒಂದು ದಿನ ಕಾಡಿನಲ್ಲಿ ಎದುರಾದ ಸಂತರೊಬ್ಬರ ಬಳಿ ತನ್ನ ಕನಸನ್ನು ಹೇಳಿಕೊಂಡ. ರಾಜನ ಆಸೆ ಕೇಳಿದ ಸಂತರು ಇಷ್ಟು ದಿನ ಏನು ಮಾಡಿದ್ದೀಯಾ ಎಂದ ಕೂಡಲೇ ರಾಜ ಏನು ಮಾಡಿದ್ದೀಯಾ ಎಂದು ಕೇಳುತ್ತಿರಲ್ಲಾ... ನನ್ನ ಅಕ್ಕ-ಪಕ್ಕದವರು ಹಾಗೂ ನನ್ನ ಎದುರು ಬಂದ ರಾಜರನ್ನೆಲ್ಲರನ್ನು ಮುಗಿಸಿದ್ದೇನೆ. ರಕ್ತದ ಹೊಳೆಯನ್ನೇ ಹರಿಸಿದ್ದೇನೆ ಎಂದ. ಅದಕ್ಕೆ ಸಂತರು ಅಯ್ಯೋ ಹುಚ್ಚ ನೀನು ಬರೀ ರಕ್ತ ಹರಿಸುತ್ತಾ ಬಂದಿದ್ದೀಯಾ... ರಕ್ತ ಹರಿಸಿದರೆ ಜಗತ್ತಿನಲ್ಲೇ ದೊಡ್ಡವರಾಗುತ್ತಾರೆ ಎಂದಿದ್ದರೆ ಗಲ್ಲಿ ಗಲ್ಲಿಯೊಳಗೂ ರಕ್ತವೇ ಕಾಣುತ್ತಿತ್ತು. ಈ ಜಗತ್ತನ್ನು ಗೆಲ್ಲಬೇಕಾದರೆ ರಕ್ತ ಹರಿಸಬ್ಯಾಡ... ನಿನ್ನ ಎದೆಯೊಳಗೆ, ಮನಸ್ಸಿನೊಳಗಿರೋ ಪ್ರೀತಿಯನ್ನರಿಸು ಸಾಕು. ನೀನು ಜಗತ್ತಿನಲ್ಲಿ ದೊಡ್ಡವನಾಗುತ್ತಿಯಾ ಎಂದರಂತೆ. ಅದೇ ರೀತಿ ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಜಗತ್ತಿಗೆ ಪ್ರೀತಿ ಹಂಚಿ ಜನಮಾನಸಗೊಂಡ ಆಧ್ಯಾತ್ಮಿಕ ಚಿಂತಕರಾಗಿದ್ದಾರೆ ಎಂದು ಹೇಳಿದರು.

ಜಗತ್ತಿನಲ್ಲಿ ಪ್ರೀತಿಯ ಕೊರತೆ: ಜಗತ್ತಿನಲ್ಲಿ ದೊಡ್ಡವನು ಅಥವಾ ಶ್ರೇಷ್ಠ ವ್ಯಕ್ತಿಯಾಗಬೇಕಾದರೆ ಸುಂದರವಾಗಿರಬೇಕು, ಜೇಬಿನ ತುಂಬ ಹಣ, ಆಸ್ತಿ-ಅಂತಸ್ತು ಇರಬೇಕು ಎಂದೇನಿಲ್ಲ. ಜಗತ್ತಿನಲ್ಲಿ ದೊಡ್ಡವನಾಗಬೇಕಾದರೆ ತಮ್ಮ ಬಳಿ ಯಾರೇ ಬಂದರೂ ಪ್ರೀತಿಯಿಂದ ಮಾತನಾಡಿಸಬೇಕು. ಜಗತ್ತಿನಲ್ಲಿ ದೇವರಾಣೆಗೂ ದುಡ್ಡಿನ ಕೊರತೆಯಿಲ್ಲ. ಆಸ್ತಿ-ಅಂತಸ್ತಿನ ಕೊರತೆ ಹಾಗೂ ನಾನು-ನನ್ನದು ಎಂಬ ಅಹಂಕಾರದ ಕೊರತೆಯೂ ಇಲ್ಲ. ಆದರೆ ಇರುವುದು ಪ್ರೀತಿಯ ಕೊರತೆ. ನಮ್ಮಲ್ಲಿ ದ್ವೇಷ, ಅಸೂಯೆ, ನನ್ನದು, ನಂದೇ ಎಂಬ ಅಹಂಕಾರದ ಮಾತುಗಳಿದ್ದಾಗ ಜಗತ್ತಿನಲ್ಲಿ ದೊಡ್ಡವರಾಗಲೂ ಹೇಗೆ ಸಾಧ್ಯ? ಜಗತ್ತಿಗೆ ನೀವು ಕಲ್ಲು ಎಸೆದರೆ ಜಗತ್ತು ಕೂಡ ನಿಮ್ಮ ಮೇಲೆ ಕಲ್ಲನ್ನೇ ಎಸೆಯುತ್ತದೆ. ಎಲ್ಲರೂ ಒಳ್ಳೆಯವರು, ನಾನು ಒಳ್ಳೆಯವನು ಎಂದು ಪ್ರೀತಿ ಹಂಚಿದರೆ ಜಗತ್ತು ಕೂಡ ನಿಮಗೆ ಪ್ರೀತಿ ನೀಡುತ್ತದೆ. ನಿಮ್ಮ ಮನಸ್ಸೇ ಜಗತ್ತು ಎನ್ನುವ ಮೂಲಕ ಪ್ರೀತಿ-ಸಹಬಾಳ್ವೆಯ ಬದುಕಿನ ಅರ್ಥವನ್ನು ತಿಳಿಸಿದರು.

> ಕ್ರಿಕೆಟ್‌ನಲ್ಲಿ ಸಚಿನ್ ಬಿಟ್ಟರೆ ವಿರಾಟ್ ಕೊಹ್ಲಿ ಮಿಂಚುತ್ತಾನೆ. ಒಬ್ಬ ಗೋಲ್ಡ್ ಮೆಡಲಿಸ್ಟ್ ನಂತರ ಮತ್ತೊಬ್ಬ ಗೋಲ್ಡ್ ಮೆಡಲಿಸ್ಟ್ ಬರುತ್ತಾನೆ. ಒಬ್ಬರು ಸಿಎಂ ಆಗಿ ಹೋಗಿದ್ದಾರೆ ಎಂದರೆ ಅದೇ ಸ್ಥಳಕ್ಕೆ ಮತ್ತೊಬ್ಬರು ಸಿಎಂ ಆಗಿ ಬರುತ್ತಾರೆ. ಆದರೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಂತಹ ಮತ್ತೊಂದು ರತ್ನ ಸಿಗಲಿಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಅವರ ವಿಚಾರಧಾರೆಗಳನ್ನು ಅರಿಯುತ್ತಾ-ತಿಳಿಸುತ್ತಾ ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ಸಾಗಿದರೆ ನಾವುಗಳು ಸಹ ಮಹಾತ್ಮರಾಗಲು ಸಾಧ್ಯವಿದೆ. ಈ ಜೀವ ಯಾವತ್ತು ಬಿದ್ದುಹೋಗುತ್ತದೆಯೋ ಗೊತ್ತಿಲ್ಲ. ಚೆಂದದ ಕಣ್ಣು ಕೊಟ್ಟಿದ್ದಾನೆ ಒಳ್ಳೆಯದನ್ನೇ ನೋಡಿ. ಒಳ್ಳೆಯದನ್ನು ಮಾತನಾಡಿ. ದೇವರು ಕಿವಿ ಕೊಟ್ಟಿದ್ದಾನೆ ಒಳ್ಳೆಯದನ್ನೇ ಕೇಳಿಸಿಕೊಳ್ಳಿ. ಈ ಜೀವ ಬಿದ್ದು ಹೋಗುವ ಮುಂಚೆಯೇ ಸಮಾಜಕ್ಕೆ, ನಾಡಿನೊಳಗೆ ಇನ್ನೊಬ್ಬರನ್ನು ಮೇಲಕ್ಕೆ ತರುವ ಕೆಲಸ ಮಾಡಿ.
>
> – ಶ್ರೀ ಸಿದ್ದಲಿಂಗ ದೇವರು,
> ವಿಜಯಪುರ ತಾಳಿಕೋಟೆಯ ಖಾಸ್ಗತೇಶ್ವರ ಮಠ

ರಾಷ್ಟ್ರೀಯ ಮನುಷ್ಯ ಯಾರು?: ನವಿಲನ್ನು ರಾಷ್ಟ್ರ ಪಕ್ಷಿ, ಹುಲಿಯನ್ನು ರಾಷ್ಟ್ರ ಪ್ರಾಣಿ ಎಂದು ಕರೆದಿದ್ದೇವೆ. ಪೊಲೀಸರ ಕಚೇರಿಗಳಲ್ಲಿ ಹುಲಿಯ ಚಿತ್ರವಿರುವ ಲಾಂಛನವಿರುತ್ತದೆ ಎಂದ ಮಾತ್ರಕ್ಕೆ ಅವರನ್ನು ರಾಷ್ಟ್ರ ಮನುಷ್ಯ ಎಂದು ಕರೆಯುತ್ತಾರೆಯೇ? ಕೆಎಸ್‌ಆರ್‌ಟಿಸಿಯಲ್ಲಿ ಗಂಡುಬೇರುಂಡ, ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನಾಯಿ ಚಿತ್ರವನ್ನು ಲೋಗೊ ರೂಪದಲ್ಲಿ ಬಳಸಿಕೊಂಡಿದ್ದಾರೆ. ಇದು ನಿಯತ್ತಿನಲ್ಲಿ ನಾಯಿ ಮನುಷ್ಯನಿಗಿಂತ ಶ್ರೇಷ್ಠ ಎಂಬುದನ್ನು ತೋರುತ್ತದೆ. ಆದರೆ ಬಸ್, ರೈಲ್ವೆ, ವಿಮಾನ ನಿಲ್ದಾಣಗಳ ಮೂಲೆಯಲ್ಲಿ ಇದು ಪುರುಷರ ಅಥವಾ ಮಹಿಳೆಯರ ಶೌಚಾಲಯ ಎಂದು ಚಿತ್ರ ಸಹಿತ ಬಿಡಿಸಲಾಗಿರುತ್ತದೆ. ಅಂದರೆ ಮನುಷ್ಯ ಇದಕ್ಕೆ ಮಾತ್ರ ಸೀಮಿತವಾ... ಎಂದು ಹೇಳುವ ಮೂಲಕ ಹಾಸ್ಯ ಚಟಾಕಿ ಹಾರಿಸಿದ ಸಿದ್ದಲಿಂಗ ದೇವರು, ರಾಷ್ಟ್ರೀಯ ಮನುಷ್ಯ ಎನಿಸಿಕೊಳ್ಳಬೇಕಾದರೆ ಬಂಗಾರ, ಸೂಟು-ಬೂಟು ಹಾಕಿಕೊಳ್ಳುವುದು ಬೇಕಿಲ್ಲ. ಬದಲಿಗೆ ಹಸಿದು ಬಂದವರಿಗೆ ಅನ್ನ, ಬಾಯಾರಿ ಬಂದವರಿಗೆ ನೀರು ಕೊಡುವುದು ಹಾಗೂ ನೊಂದವರ ಜೊತೆಗೆ ನಿಂತು ನಾನು ನಿಮ್ಮ ಜೊತೆ ಇದ್ದೇನೆ ಎನ್ನುವವನೇ ರಾಷ್ಟ್ರೀಯ ಮನುಷ್ಯನಾಗುತ್ತಾನೆ ಎಂದು ಹೇಳಿದರು.

ಮಹಾತ್ಮರಾಗಬೇಕಾದರೆ ಕೇಸರಿ ಬಟ್ಟೆ, ಬಿಳಿ ಬಟ್ಟೆ ಬೇಕಿಲ್ಲ. ಮೂರು ಮೂರು ತಾಸು ತಪಸ್ಸು ಮಾಡಬೇಕಿಲ್ಲ. ಜಗತ್ತಿನೊಳಗೆ ಯಾರೇ ನಿನ್ನ ಬಳಿ ಬಂದರೂ ನಮ್ಮವರು ಎಂದು ಸ್ವೀಕಾರ ಮಾಡುವ ಮನಸ್ಸಿದ್ದರೆ ಮಹಾತ್ಮರಾಗಲು ಸಾಧ್ಯವಿದೆ ಎಂದು ಸಿದ್ದೇಶ್ವರ ಸ್ವಾಮೀಜಿಯವರು ಹೇಳಿದ್ದಾರೆ. ಅದರಂತೆ ನಮ್ಮ ದೊಡ್ಡ ದೊಡ್ಡ ಮನೆಗಳಂತೆ ನಮ್ಮ ಮನಸ್ಸುಗಳು ದೊಡ್ಡದಾಗಬೇಕು. ಪ್ರತಿಯೊಬ್ಬರಿಗೂ ಸಾವು ಖಚಿತ. ಮುಂದೊಂದು ದಿನ ಮಣ್ಣು ನಮ್ಮನ್ನು ನುಂಗುತ್ತದೆ ಎಂಬುದನ್ನು ಅರ್ಥಮಾಡಿಕೊಂಡು ಜೀವನ ನಡೆಸಬೇಕು. ಭಾಷಣ ಮಾಡುವಾಗ ನಿಮ್ಮ ಭಾಷಣ ನಿಲ್ಲಿಸಿ ಸಾಕು ಎಂದು ಆಯೋಜಕರಿಂದ ಚೀಟಿ ಬರುತ್ತದೆ. ಆದರೆ ನಮ್ಮ ಸಾವಿನ ಕುರಿತು ಯಾವುದೇ ಚೀಟಿ ಬರುವುದಿಲ್ಲ. ಚೀಟಿ ಕಳುಹಿಸದೆ ನಮ್ಮನ್ನು ಕರೆದುಕೊಂಡು ಹೋಗಲು ಯಮ ಬರುತ್ತಾನೆ. ಇದಕ್ಕೆ ಕೊರೊನಾ ಸಂದರ್ಭ ಪ್ರತ್ಯಕ್ಷ ಉದಾಹರಣೆಯಾಗಿದೆ ಎಂದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಹುಲ್ಲಿನಬೀದಿ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ದೇವಲಾಪುರ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಜಡೇಸ್ವಾಮಿ, ಮಾದಾಪುರ ಚಂದ್ರಮೌಳೇಶ್ವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಶರಣ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಎಂ.ಎಸ್.ಮಹದೇವಸ್ವಾಮಿ, ಹಿನಕಲ್ ಬಸವರಾಜ್, ಟಿ.ಎಸ್.ಲೋಕೇಶ್, ಟಿ.ಲಿಂಗರಾಜು, ಷಡಕ್ಷರಿ ಮತ್ತಿತರರಿದ್ದರು.

ಡಾ. ಅಂಬೇಡ್ಕರ್‌ಗೆ ಅವಹೇಳನ ಖಂಡಿಸಿ ಮೈಸೂರು ವಿವಿ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ ಪ್ರತಿಭಟನೆ



ಮೈಸೂರು,ಫೆ.13(ಎಂಟಿವೈ)– ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯದಲ್ಲಿ ಪ್ರದರ್ಶನಗೊಂಡ ನಾಟಕದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ದಲಿತರ ವಿರುದ್ಧ ಅವಹೇಳನ ಮಾಡಿರುವುದನ್ನು ಖಂಡಿಸಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮುಖ್ಯ ದ್ವಾರದ ಮುಂಭಾಗವಿರುವ ರಾಷ್ಟ್ರಕವಿ ಕುವೆಂಪು ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು. ಜೈನ್ ವಿವಿ ಮತ್ತು ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜೈನ್ ವಿವಿಯನ್ನು ನಿಷೇಧಿಸುವಂತೆ ಆಗ್ರಹಿಸಿದರು. ಕೋಮುವಾದಿ ಧೋರಣೆಯನ್ನು ಖಂಡಿಸಿ ಧಿಕ್ಕಾರ ಕೂಗಿದರು. ವಿದ್ಯಾರ್ಥಿಗಳು ನಡೆಸುತ್ತಿದ್ದ ಪ್ರತಿಭಟನೆಗೆ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಬೆಂಬಲ ಸೂಚಿಸಿ, ಕೆಲಕಾಲ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಜೈನ್ ವಿವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಲವು ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುನಾಟಕದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಮತ್ತು ದಲಿತರ ವಿರುದ್ಧ ಅವಹೇಳನ ಮಾಡಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ದೇಶಕ್ಕೆ ಅಪಾರವಾದದ್ದು, ಅವರಿಗೆ ಅವಮಾನವಾಗುವ ರೀತಿಯಲ್ಲಿ ಮಾತನಾಡಿರುವುದು ಎಷ್ಟರ ಮಟ್ಟಿಗೆ ಸರಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಮೀಸಲಾತಿ ವಿಚಾರವಾಗಿಯೂ ಸಹ ದಲಿತರ ಬಗ್ಗೆ ಮತ್ತು ಅಸ್ಪೃಶ್ಯತೆ ಕುರಿತಾಗಿ ದಲಿತರಿಗೆ ಅವಮಾನಿಸಿದ್ದಾರೆ. ಇಂತಹ ವಿದ್ಯಾರ್ಥಿಗಳನ್ನು ಕೂಡಲೇ ಬಂಧಿಸಬೇಕು. ಸಂವಿಧಾನ ವಿರೋಧಿ ಜೈನ್ ವಿಶ್ವವಿದ್ಯಾನಿಲಯವನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು. ಸರ್ಕಾರವು ಇವರ ವಿರುದ್ಧ ಕ್ರಮಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೇ ವೇಳೆ ಸಂಶೋಧನಾ ವಿದ್ಯಾರ್ಥಿ ವರಹಳ್ಳಿ ಆನಂದ್ ಮಾತನಾಡಿ, ಅಸ್ಪೃಶ್ಯತೆ ಬಗ್ಗೆ ಅರಿವು ಮೂಡಿಸಲು ಈ ನಾಟಕ ಪ್ರದರ್ಶಿಸಿರುವುದಾಗಿ ಆಡಳಿತ ಮಂಡಳಿ ಹೇಳಿದೆ. ನಾಟಕದಲ್ಲಿ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದು ಯಾಕೇ? ಅವಹೇಳನ ಮಾಡಿದ್ದನ್ನೇ ಎಲ್ಲರೂ ಸಂಭ್ರಮಿಸುವುದು ಸರಿಯೇ? ದಲಿತರನ್ನು ಗೇಲಿ ಮಾಡಲಾಗಿದೆ. ಪತ್ರಕರ್ತರು, ಹೋರಾಟಗಾರರಿಗೆ ನಾಟಕದ ವಿಡಿಯೋವನ್ನು ಯಾಕೇ ನೀಡುತ್ತಿಲ್ಲ. ಉದ್ದೇಶಪೂರ್ವಕವಾಗಿ ನಡೆದುಕೊಂಡಿರುವ ಜೈನ ವಿವಿಯು ಜಾತಿ ಉತ್ಪಾದಿತ ವಿವಿಯಾಗಿದೆ. ಕೂಡಲೇ ಸರ್ಕಾರ ವಿವಿ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ ಶಿವಣ್ಣ, ಉಪಾಧ್ಯಕ್ಷ ಕಲ್ಲಹಳ್ಳಿ ಕುಮಾರ್, ಗೌರವ ಅಧ್ಯಕ್ಷ ಸೋಸಲೆ ಮಹೇಶ, ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪರಂ ಜ್ಯೋತಿ, ಕಾರ್ತಿಕ್, ಶಂಕರ್, ರಂಗಸ್ವಾಮಿ, ಜಗದೀಶ್, ಪ್ರವೀಣ, ನಿಂಗರಾಜ ಇನ್ನಿತರರು ಪಾಲ್ಗೊಂಡಿದ್ದರು.

ರೈತರಿಗೆ ಹಗಲುವೇಳೆ ಗುಣಮಟ್ಟದ ವಿದ್ಯುತ್

ಎಂಎಲ್‌ಸಿ ಸಿ.ಎನ್. ಮಂಜೇಗೌಡರಿಗೆ ಇಂಧನ ಸಚಿವ ಸುನೀಲ್ ಕುಮಾರ್ ಭರವಸೆ



ಬೆಂಗಳೂರು, ಫೆ. 13– ದೇಶದ ಬೆನ್ನೆಲುಬು ರೈತ, ಅನ್ನದಾತ ರೈತ ಎಂದು ಹೇಳುವ ಸರ್ಕಾರ ರೈತರಿಗೆ ಹಗಲುವೇಳೆ ಗುಣಮಟ್ಟದ ವಿದ್ಯುತ್ ಅನ್ನು ಪೂರೈಸುವುದಾಗಿ ಇಂಧನ ಸಚಿವ ಸುನೀಲ್ ಕುಮಾರ್ ಇಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರಿಗೆ ಭರವಸೆ ನೀಡಿದ್ದಾರೆ.

ವಿಧಾನಪರಿಷತ್‌ನಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಮಂಜೇಗೌಡ, ರಾಜ್ಯದಲ್ಲಿ ಸುಮಾರು 3.25 ಲಕ್ಷ ರೈತರ ವಿದ್ಯುತ್ ಪಂಪ್‌ಸೆಟ್‌ಗಳಿದ್ದು, ಪ್ರಧಾನಮಂತ್ರಿಗಳ ಕುಸುಮ್ ಯೋಜನೆಯಡಿಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಒಂದು ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ 1100 ಸೌರಶಕ್ತಿಯ ಪ್ರತ್ಯೇಕ ಫೇರ್ ಸ್ಥಾಪನೆ ಮಾಡುವುದಾಗಿ ತಿಳಿಸಿ 5 ತಿಂಗಳಾದರೂ ಆಗಿಲ್ಲ. ಹಾಗಿದ್ದಲ್ಲಿ ಈ ಹಿಂದೆ ರೈತರಿಗೆ ಎಷ್ಟು ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುತ್ತಿದ್ದೀರಿ. ಇಲ್ಲಿಯವರೆಗೆ ರೈತರಿಗೆ ಹಗಲುವೇಳೆ ಗುಣಮಟ್ಟದ ವಿದ್ಯುತ್ ನೀಡದೆ ಇರುವುದರಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಚಿರತೆಗಳ ಹಾವಳಿ ಹೆಚ್ಚಾಗಿ ರೈತರು ಸಾವಿಗೀಡಾಗುತ್ತಿದ್ದಾರೆ. ರೈತರು ಪ್ರತ್ಯೇಕ ಟಿ.ಸಿ.ಗಳಿಗಾಗಿ ಸರ್ಕಾರಕ್ಕೆ ಹಣ ಪಾವತಿಸಿದ್ದರೂ ಸಹ ಟಿ.ಸಿ. ಕೊಟ್ಟಿಲ್ಲ. ಟಿ.ಸಿ. ಕೊಡದ ಮೇಲೆ ರೈತರಿಗೆ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಅನ್ನು ಹೇಗೆ ಸರಬರಾಜು ಮಾಡುತ್ತೀರಿ? ನಿಮ್ಮ ಸರ್ಕಾರ ಇರುವುದು ಇನ್ನು 3 ತಿಂಗಳು ಮಾತ್ರ ಅಷ್ಟರಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಿ ಸೌರಶಕ್ತಿಯ ವಿದ್ಯುತ್ ಕೊಡಲು ಸಾಧ್ಯವೇ ಎಂದು ಇಂಧನ ಸಚಿವರನ್ನು ಪ್ರಶ್ನಿಸಿದ ಅವರು, ಇದು ರೈತರಿಗೆ ಆಸೆ ತೋರಿಸುವ ಚುನಾವಣಾತಂತ್ರ ಎಂದರು.

ಮಂಜೇಗೌಡರ ಪ್ರಶ್ನೆಗೆ ಇಂಧನ ಸಚಿವರು ಉತ್ತರಿಸಿ ರೈತರಿಗೆ ಮುಂದಿನ ದಿನಗಳಲ್ಲಿ ಗುಣಮಟ್ಟದ ವಿದ್ಯುತ್ ನೀಡಲು ಕ್ರಮವಹಿಸುವುದಾಗಿ ತಿಳಿಸಿದರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಫೆ. 13– ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ವೀರಶೈವ ಸುಜ್ಞನ ಸಂಘದ ಸಹಯೋಗದೊಂದಿಗೆ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ನಾಳೆ (ಫೆ. 14) ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಕೇಂದ್ರದ ಜನವಿರೋಧಿ ಬಜೆಟ್ ವಿರೋಧಿಸಿ; ಅದಾನಿ ಸಂಸ್ಥೆಯ ಮೇಲಿನ ಆರೋಪದ ತನಿಖೆಗೆ ಆಗ್ರಹಿಸಿ ಸಿಪಿಐ ಪ್ರತಿಭಟನೆ

ಮೈಸೂರು,ಫೆ.13(ಎಂಟಿವೈ)– ಕೇಂದ್ರ ಸರ್ಕಾರದ ಜನವಿರೋಧಿ ಬಜೆಟ್ ಹಾಗೂ ಅದಾನಿ ಸಮೂಹ ಸಂಸ್ಥೆಯ ವಿರುದ್ಧ ಅಕ್ರಮ ವಂಚನೆ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಪ್ರತಿಭಟನೆ ನಡೆಸಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಸಿಪಿಐ ಕಾರ್ಯಕರ್ತರು, ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್ ಜನ ವಿರೋಧಿಯಾಗಿದೆ. ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾದ ನಿರುದ್ಯೋಗ, ಬಡತನ, ಬೆಲೆ ಏರಿಕೆಯನ್ನು ತಡೆಗಟ್ಟುವ ಯಾವುದೇ ಪರಿಹಾರ ಮಾರ್ಗವನ್ನು ಈ ಬಜೆಟ್‌ನಲ್ಲಿ ಘೋಷಣೆ ಮಾಡಿಲ್ಲ. ಕಾರ್ಪೊರೇಟ್ ಹಾಗೂ ಬಂಡವಾಳಶಾಹಿಗಳ ಪರವಾಗಿರುವ ಬಿ.ಜೆ.ಪಿ ಸರ್ಕಾರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನು ಖಾಸಗೀಕರಣಗೊಳಿಸಲು ಮುಂದಾಗಿದೆ. ಈ ಕ್ಷೇತ್ರಗಳ ಅನುದಾನವನ್ನು ಕಡಿತಗೊಳಿಸಿದೆ. ಐಸಿಎಂಆರ್ ಲ್ಯಾಬ್ ಹಾಗೂ ನರ್ಸಿಂಗ್ ಕಾಲೇಜುಗಳನ್ನು ಖಾಸಗೀವಲಯಕ್ಕೆ ವಹಿಸಲು ನಿರ್ಧರಿಸಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರವು ಈ ಬಜೆಟ್‌ನಲ್ಲಿ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿಲ್ಲ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷ ಉದ್ಯೋಗ – ವೇತನಗಳ ಬಗ್ಗೆ ದಿವ್ಯ ಮೌನ ವಹಿಸಿದೆ. ಗ್ರಾಮೀಣ ಉದ್ಯೋಗ ಖಾತ್ರಿಯಂತಹ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡದೆ ನಿರ್ಲಕ್ಷಿಸಿದೆ. ಪೆಟ್ರೋಲ್, ಡೀಸೆಲ್, ರಸಗೊಬ್ಬರ ಸೇರಿದಂತೆ ಜನಸಾಮಾನ್ಯರ ನಿತ್ಯ ಬಳಕೆಯ ವಸ್ತುಗಳ ಬೆಲೆಗಳನ್ನು ಕಡಿಮೆ ಮಾಡಲು ಯಾವ ಪ್ರಸ್ತಾಪವನ್ನು ಸಹ ಮಾಡಿಲ್ಲ. ತೀವ್ರವಾದ ಹಣದುಬ್ಬರದಿಂದಾಗಿ ಎಲ್ಲಾ ವಸ್ತುಗಳ ಬೆಲೆ ಏರಿಕೆಗೆ ಎಡೆಮಾಡಿಕೊಟ್ಟಿದೆ ಎಂದು ದೂರಿದರು.

ಸರ್ಕಾರ ಮುಂದುವರೆಸಿರುವ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ಮತ್ತು ಆಸ್ತಿ ನಗದೀಕರಣದಂತಹ ಪ್ರಕ್ರಿಯೆಗಳ ಭಾಗವಾಗಿ ಬ್ಯಾಂಕ್ ವಿಮಾ ಕ್ಷೇತ್ರಗಳಲ್ಲಿನ ಸಾರ್ವಜನಿಕರ ಸಾವಿರಾರು ಕೋಟಿ ರೂಪಾಯಿಗಳ ಹೂಡಿಕೆಯನ್ನು ಅದಾನಿ – ಅಂಬಾನಿಯಂತಹ ಕಾರ್ಪೊರೇಟ್ ತಿಮಿಂಗಿಲಗಳಿಗೆ ಧಾರೆ ಎರೆಯುತ್ತಿದೆ. ಈಗಷ್ಟೇ ಅಮೇರಿಕಾದ ಹೂಡಿಕೆ ಸಂಸ್ಥೆ ಹಿಂಡನ್‌ಬರ್ಗ್ ಕೈಗಾರಿಕೋದ್ಯಮಿ ಗೌತಮ್ ಅದಾನಿ ಸಮೂಹ ಸಂಸ್ಥೆಯ ವಿರುದ್ಧ ಗಂಭೀರ ಆರೋಪ ಮಾಡಿದೆ. ಈಗಾಗಲೇ ಕೋಟ್ಯಾಂತರ ಭಾರತೀಯರು ಜೀವವಿಮಾ ನಿಗಮದಲ್ಲಿ ಕೂಡಿಟ್ಟಿರುವ ಹಣವನ್ನು ಅದಾನಿ ಸಮೂಹ ಸಂಸ್ಥೆಯಲ್ಲಿ ಕೇಂದ್ರ ಸರ್ಕಾರ ಹೂಡಿಕೆ ಮಾಡಿದೆ. ಅಲ್ಲದೆ SBI ಸೇರಿದಂತೆ ವಿವಿಧ ಬ್ಯಾಂಕ್‌ಗಳು ಅದಾನಿಗೆ ಭಾರೀ ಮೊತ್ತದ ಸಾಲ ನೀಡಿವೆ. ಅದಾನಿಯ ವಿರುದ್ಧ ಅಕ್ರಮ ವಂಚನೆಯ ಬಗ್ಗೆ ಹಿಂಡನ್‌ಬರ್ಗ್ ಆರೋಪದಿಂದ ತೀವ್ರ ಆತಂಕ ಸೃಷ್ಟಿಯಾಗಿದೆ ಎಂದು ತಿಳಿಸಿದರು.


ಕೂಡಲೇ ಕೇಂದ್ರ ಸರ್ಕಾರ ಅದಾನಿ ಸಮೂಹ ಸಂಸ್ಥೆಯ ಮೇಲೆ ಮಾಡಲಾಗಿರುವ ಆರೋಪಗಳ ಬಗ್ಗೆ ಸುಪ್ರೀಂಕೋರ್ಟ್ ಅಥವಾ ಜಂಟಿ ಸಂಸದೀಯ ಸಮಿತಿ (ಜೆ.ಪಿ.ಸಿ)ಯಿಂದ ಉನ್ನತ ಮಟ್ಟದ ಸಮಗ್ರ ತನಿಖೆ ನಡೆಸಬೇಕು. ನಿರುದ್ಯೋಗ, ಬಡತನ ನಿವಾರಣೆ ಹಾಗೂ ಅಗತ್ಯವಸ್ತುಗಳ ಬೆಲೆ ಏರಿಕೆ ತಡೆಗಟ್ಟಲು ಪರಿಹಾರ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನು ಖಾಸಗೀಕರಣ ಮಾಡಬಾರದು. ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು. ರೈತ ಹಾಗೂ ಕಾರ್ಮಿಕ ವಿರೋಧಿ ಕಾನೂನುಗಳನ್ನು ಹಿಂಪಡೆಯಬೇಕು. ICMR ಲ್ಯಾಬ್ ಹಾಗೂ ನರ್ಸಿಂಗ್ ಕಾಲೇಜುಗಳನ್ನು ಖಾಸಗಿವಲಯಕ್ಕೆ ವಹಿಸಬಾರದು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಒದಗಿಸಬೇಕು. ಗ್ರಾಮೀಣ ಉದ್ಯೋಗ ಖಾತ್ರಿಯಂತಹ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ಮತ್ತು ಆಸ್ತಿ ನಗದೀಕರಣದಂತಹ ಪ್ರಕ್ರಿಯೆಗಳನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ ಮುಖಂಡರಾದ ಹೆಚ್.ಆರ್. ಶೇಷಾದ್ರಿ, ಹೆಚ್.ಬಿ. ರಾಮಕೃಷ್ಣ, ಕೆ.ಎಸ್. ರೇವಣ್ಣ, ಕೆ.ಜಿ. ಸೋಮರಾಜೇಅರಸ್, ಜಗನ್ನಾಥ್, ಎಂ.ಶಿವಣ್ಣ, ಡಿ.ಸುರೇಶ್, ತ್ಯಾಗರಾಜನ್, ರಾಜು, ಶಾಮು ಇತರರು ಪಾಲ್ಗೊಂಡಿದ್ದರು.

ಮಂಡ್ಯ ಉಸ್ತುವಾರಿ ವಹಿಸಿಕೊಳ್ಳಲು ಅಶ್ವತ್ಥ್ ನಾರಾಯಣ್ ಹಿಂದೇಟು

ಮಂಡ್ಯ, ಫೆ.13– ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನಕ್ಕೆ ಕಂದಾಯ ಸಚಿವ ಆರ್.ಅಶೋಕ್ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉನ್ನತ ಶಿಕ್ಷಣ ಸಚಿವ ಅಶ್ವತ್ಥ್ ನಾರಾಯಣ್‌ಗೆ ಮಂಡ್ಯ ಉಸ್ತುವಾರಿ ವಹಿಸಿಕೊಳ್ಳುವಂತೆ ಸೂಚಿಸಿದ್ದು, ಇದಕ್ಕೆ ಸಚಿವರು ಹಿಂದೇಟು ಹಾಕಿದ್ದಾರೆ ಎಂದು ಜಿಲ್ಲಾ ಬಿಜೆಪಿ ಮೂಲಗಳು ತಿಳಿಸಿವೆ.



ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಉಸ್ತುವಾರಿ ಹೊತ್ತಿದ್ದ ಅಬಕಾರಿ ಸಚಿವ ಕೆ.ಗೋಪಾಲಯ್ಯ ಅವರ ಹೊರೆ ಕಡಿಮೆ ಮಾಡಲು ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ ಅಶೋಕ್ ಜೆಡಿಎಸ್ ಜೊತೆಗೆ ಹೊಂದಾಣಿಕೆ ರಾಜಕಾರಣ ಮಾಡುತ್ತಾರೆ ಎಂದು ಆರೋಪಿಸಿ, ಸ್ವತಃ ಬಿಜೆಪಿ ಮುಖಂಡರೇ ಅವರ ವಿರುದ್ಧ ಗೋ ಬ್ಯಾಕ್ ಅಭಿಯಾನವನ್ನು ದೊಡ್ಡ ಮಟ್ಟದಲ್ಲಿ ಮಾಡಿದ್ದರು. ಇದರಿಂದ ಬೇಸರಗೊಂಡಿದ್ದ ಅಶೋಕ್ ಮಂಡ್ಯ ಉಸ್ತುವಾರಿಯಿಂದ ತಮ್ಮನ್ನು ವಿಮುಕ್ತರನ್ನಾಗಿ ಮಾಡಬೇಕೆಂದು ಸಿಎಂಗೆ ಮನವಿ ಮಾಡಿ, ಜಿಲ್ಲಾ ಉಸ್ತುವಾರಿಯಿಂದ ವಿಮುಕ್ತಿಗೊಂಡಿದ್ದರು. ಇದೀಗ ರಾಜ್ಯದ ಯಾವುದೇ ಜಿಲ್ಲೆಗೆ ಉಸ್ತುವಾರಿ ಖಾಲಿಯಾದ ತಕ್ಷಣ ನೇಮಿಸಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದ್ದು, ಪಕ್ಕದ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಉನ್ನತ ಶಿಕ್ಷಣ ಸಚಿವ ಅಶ್ವತ್ಥ್ ನಾರಾಯಣ್‌ಗೆ ಸಿಎಂ ಜವಾಬ್ದಾರಿ ಹೊತ್ತುಕೊಳ್ಳುವಂತೆ ಹೇಳಿದ್ದು, ಇದನ್ನು ಅಶ್ವತ್ಥ್ ನಯವಾಗಿಯೇ ತಿರಸ್ಕರಿಸಿದ್ದಾರೆ ಎನ್ನಲಾಗಿದೆ.

ಮಂಡ್ಯ ಜಿಲ್ಲಾ ಬಿಜೆಪಿಯಲ್ಲಿ ಗೊಂದಲ ಹೆಚ್ಚಿರುವ ಕಾರಣ, ಸ್ವಪಕ್ಷೀಯರ ವಿರುದ್ಧವೇ ಸ್ಥಳೀಯ ಮುಖಂಡರು ಆರೋಪ ಮಾಡುತ್ತಿರುವ ಹಿನ್ನಲೆಯಲ್ಲಿ ಮಂಡ್ಯ ಉಸ್ತುವಾರಿ ವಹಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದು, ರಾಮನಗರ ಜಿಲ್ಲೆ ಉಸ್ತುವಾರಿ ಹಾಗೂ ತಾವು ಪ್ರತಿನಿಧಿಸುವ ಮಲ್ಲೇಶ್ವರಂ ಕ್ಷೇತ್ರವನ್ನು ನೋಡಿಕೊಳ್ಳುವ ಎರಡು ಜವಾಬ್ದಾರಿಗಳಿದ್ದು, ಮತ್ತೊಂದು ಜವಾಬ್ದಾರಿ ಬೇಡ ಎಂದು ಹಿಂದೇಟು ಹಾಕಿದ್ದಾರೆ. ಜೊತೆಗೆ ರಾಮನಗರದಲ್ಲಿ ರಾಮದೇವರ ಬೆಟ್ಟ ಅಭಿವೃದ್ಧಿ ಹೊಣೆ ಹೊತ್ತಿರುವುದರಿಂದ ಹೊಸ ಜವಾಬ್ದಾರಿ ಬೇಡ ಎಂಬುದು ಅಶ್ವತ್ಥ್ ವಾದವಾಗಿದೆ.

ಗೋಪಾಲಯ್ಯ, ನಾರಾಯಣಗೌಡಗೆ ಮಣೆ ಸಾಧ್ಯತೆ: ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಯಾವುದೇ ಸರ್ಕಾರವಿದ್ದ ಸಂದರ್ಭ ಮಂಡ್ಯ ಜಿಲ್ಲೆಯಲ್ಲಿ ಒಕ್ಕಲಿಗ ಸಮುದಾಯ ಅತೀ ಹೆಚ್ಚಾಗಿರುವುದರಿಂದ ಒಕ್ಕಲಿಗ ಸಚಿವರಿಗೆ ಉಸ್ತುವಾರಿ ಕೊಟ್ಟಿರುವ ಉದಾಹರಣೆಗಳಿದ್ದು, ಚುನಾವಣೆ ಸಮಯದಲ್ಲಿ ಮತ್ತೆ ಒಕ್ಕಲಿಗ ಮಂತ್ರಿಗೆ ಉಸ್ತುವಾರಿ ಕೊಡಲು ಸಿಎಂ ಚಿಂತಿಸಿದ್ದಾರೆ ಎನ್ನಲಾಗಿದೆ.

ಈ ಹಿಂದೆ ಉಸ್ತುವಾರಿಯಾಗಿದ್ದ ಗೋಪಾಲಯ್ಯಗೆ ಮತ್ತೆ ಮಣೆ ಹಾಕಬಹುದು ಎನ್ನಲಾಗಿದ್ದು, ಮತ್ತೆ ಅವರಿಗೆ ಉಸ್ತುವಾರಿ ಕೊಟ್ಟರೆ, ಬದಲಿಸಿ ಮತ್ತೆ ಕೊಟ್ಟರು ಎಂದು ನಗೆಪಾಟಲಿಗೆ ಒಳಗಾಗುವ ಭಯವಿದೆ. ಮತ್ತೊಂದೆಡೆ ಜಿಲ್ಲೆಯವರೇ ಆದ ನಾರಾಯಣಗೌಡ ಹೆಸರು ಸಹ ಚಾಲ್ತಿಯಲ್ಲಿದ್ದು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಯಾವ ಸಚಿವರಿಗೂ ತವರು ಜಿಲ್ಲೆಯ ಉಸ್ತುವಾರಿ ಕೊಟ್ಟಿಲ್ಲ. ಇದು ಸಹ ಗಮನಾರ್ಹ ವಿಚಾರವಾಗಿದ್ದು, ಹಾಗೊಂದು ವೇಳೆ ಪ್ರಯೋಗಕ್ಕೆ ಮುಂದಾದರೆ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಥವಾ ಆರೋಗ್ಯ ಸಚಿವ ಡಾ.ಕೆ.ಸುಧಾಕರ್‌ಗೆ ಹೊಣೆ ನೀಡುವ ಸಾಧ್ಯತೆ ಇದೆ.

ಬೆಂಕಿ ಕೆನ್ನಾಲಿಗೆಗೆ ಹೊತ್ತಿ ಉರಿದ ಕರಿಘಟ್ಟ



ಶ್ರೀರಂಗಪಟ್ಟಣ, ಫೆ.13– ತಾಲೂಕಿನ ಗಂಜಾಂ ಬಳಿಯ ಕರಿಘಟ್ಟ ಅರಣ್ಯ ಪ್ರದೇಶ ಬೆಂಕಿ ಕೆನ್ನಾಲಿಗೆಗೆ ಸಿಲುಕಿ ಸಂಪೂರ್ಣವಾಗಿ ಭಸ್ಮವಾಗಿದೆ.

ಸೋಮವಾರ ಕರಿಘಟ್ಟ ಅರಣ್ಯ ಪ್ರದೇಶಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದ ಪರಿಣಾಮ, ಬೆಟ್ಟದಲ್ಲಿದ್ದ ಗಿಡ, ಮರಗಳು ಒಣಗಿದ ಹುಲ್ಲು ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ. ಬೆಂಕಿ ಜ್ವಾಲೆ ನಂದಿಸಲು ಅಗ್ನಿಶಾಮಕ ದಳ, ಅರಣ್ಯ ಇಲಾಖೆ ಸಿಬ್ಬಂದಿ, ಪರಿಸರ ಸಂಘಟನೆಗಳು ಹಾಗೂ ಸ್ಥಳೀಯ ಗ್ರಾಮಗಳ ಜನರೆಲ್ಲ ಸೇರಿ ಪ್ರಯತ್ನಿಸಿದರಾದರೂ ಯಾವುದೇ ಪ್ರಯೋಜನವಾಗಿಲ್ಲ. ಬೆಂಕಿ ಆರ್ಭಟಕ್ಕೆ ಅರಣ್ಯ ಪ್ರದೇಶದಲ್ಲಿದ್ದ ಹಲವಾರು ಪ್ರಾಣಿಗಳು ಕೂಡ ಸಜೀವವಾಗಿ ದಹನವಾಗಿದೆ.

ಕರಿಘಟ್ಟಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದಿಲ್ಲ. ಯಾರೋ ಕಿಡಿಗೇಡಿಗಳು ಬೇಕಂತಲೇ ಬೆಂಕಿ ಹಚ್ಚಿ ಇಡೀ ಕರಿಘಟ್ಟ ಬೆಂಕಿಯ ಕೆನ್ನಾಲಿಗೆಗೆ ಸಿಲುಕುವಂತೆ ಮಾಡಿದ್ದಾರೆ. ಎಂಬುದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕರಿಘಟ್ಟ ಬೆಟ್ಟದ ತಪ್ಪಲಿನ ಅರಣ್ಯಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದರಿಂದ ಬೆಟ್ಟದ ಕುರುಚಲು ಅರಣ್ಯ ಪ್ರದೇಶ ನಾಶವಾಗಿದೆ. ಬೆಂಕಿಯಿಂದಾಗಿ ಅರಣ್ಯದಲ್ಲಿನ ಔಷಧೀಯ ಸಸ್ಯಗಳು, ಚಿಕ್ಕಪುಟ್ಟ ಗಿಡ ಮರಗಳು, ಸಣ್ಣ ಪುಟ್ಟ ಪ್ರಾಣಿಗಳು ಪಕ್ಷಿಗಳ ಸಂಕುಲ ನಾಶವಾಗಿವೆ. ಬೆಟ್ಟದ ಅರಣ್ಯಕ್ಕೆ ಬಿದ್ದ ಬೆಂಕಿಯಿಂದ ಬೆಟ್ಟದ ಮೇಲೆ ಮುಗಿಲೆತ್ತರದ ಜ್ವಾಲೆ ಕಾಣಿಸಿಕೊಂಡಿತು.

ಕೆ.ಎಂ.ದೊಡ್ಡಿಯಲ್ಲಿ ನಕಲಿ ಪೊಲೀಸ್ ಬಂಧನ

ಭಾರತೀನಗರ, ಫೆ.13– ಪೊಲೀಸ್ ವೇಷ ಧರಿಸಿ ಸಾರ್ವಜನಿಕರನ್ನು ವಂಚಿಸುತ್ತಿದ್ದ ವ್ಯಕ್ತಿಯೋರ್ವನನ್ನು ಕೆ.ಎಂ.ದೊಡ್ಡಿ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರಿನ ಗೊಟ್ಟಿಕೆರೆ ಮೂಲದ ಸಂಜಯ್ ಬಂಧಿತ ಆರೋಪಿ. ಈತ ಪೊಲೀಸ್ ಸಮವಸ್ತ್ರ ಧರಿಸಿ ಸಾರ್ವಜನಿಕರನ್ನು ಹೆದರಿಸಿ ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ. ಈ ಬಗ್ಗೆ ಸಾರ್ವಜನಿಕರಿಗೆ ಅನುಮಾನ ಬಂದು ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ತಿಳಿಸಿದ್ದಾರೆ. ತಕ್ಷಣ ಇನ್ಸ್‌ಪೆಕ್ಟರ್ ಆನಂದ್ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಬಂದು ಪೊಲೀಸ್ ವೇಷಧಾರಿ ನಕಲಿ ಪೊಲೀಸನನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದೊಯ್ದು ವಿಚಾರಣೆಗೆ ಒಳಪಡಿಸಿದ್ದಾರೆ. ಆಗ ಆರೋಪಿ ನಕಲಿ ಪೊಲೀಸ್ ಎಂಬುದು ತಿಳಿದು ಬಂದಿದ್ದು ಆತನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ರೈತ ಸಜೀವ ದಹನ ಪ್ರಕರಣ

ಶಾಸಕ ಸಿಎಸ್‌ಪಿ ಭೇಟಿ: ಸಾಂತ್ವನ, ಪರಿಹಾರದ ಭರವಸೆ

ಮಂಡ್ಯ, ಫೆ13– ತಾಲೂಕಿನ ಮೊಡಚಾಕನಹಳ್ಳಿ ಗ್ರಾಮದಲ್ಲಿ ಬೆಂಕಿ ನಂದಿಸಲು ಹೋಗಿ ಸಜೀವ ದಹನವಾದ ರೈತ ಮಹಾಲಿಂಗಯ್ಯನ ನಿವಾಸಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಬಳಿಕ ಘಟನಾ ಸ್ಥಳಕ್ಕೂ ಭೇಟಿ ನೀಡಿ ಪರಿಶೀಲಿಸಿದ ಅವರು, ಮುಖ್ಯಮಂತ್ರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ 5 ಲಕ್ಷ ರೂ. ಪರಿಹಾರ ಕೊಡಿಸುವ ಭರವಸೆ ನೀಡಿದರು.



ನಿನ್ನೆ ಕಬ್ಬಿನ ಗದ್ದೆಗೆ ಬಿದ್ದಿದ್ದ ಬೆಂಕಿ ನಂದಿಸಲು ಮುಂದಾದ ರೈತ ಮಹಾಲಿಂಗಯ್ಯ ಬೆಂಕಿಯ ದಟ್ಟ ಹೊಗೆಗೆ ಸಿಲುಕಿ ಕುಸಿದು ಬಿದ್ದು ಸಜೀವ ದಹನ ಆಗಿದ್ದರು. ವಿಚಾರ ತಿಳಿದ ಕೂಡಲೇ ಗ್ರಾಮಕ್ಕಾಗಮಿಸಿದ ಶಾಸಕ ಪುಟ್ಟರಾಜು ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಘಟನೆ ಬಗ್ಗೆ ಮಾಹಿತಿ ಪಡೆದರು.

ಕೂಡಲೇ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಕರೆ ಮಾಡಿ, ಘಟನೆ ಬಗ್ಗೆ ವಿವರಿಸಿದರು. ನಂತರ ಮಾತನಾಡಿದ ಅವರು ಸಿಎಂ 5 ಲಕ್ಷರೂ. ಪರಿಹಾರ ನೀಡುವ ಭರವಸೆ ಕೊಟ್ಟಿದ್ದಾರೆ. ಬೆಳೆ ಪರಿಹಾರದ ಹಣ ಸಹ ಶೀಘ್ರ ಅವರಿಗೆ ತಲುಪಲಿದೆ. ಜೊತೆಗೆ ಬಡ ಕುಟುಂಬವಾದ್ದರಿಂದ ಜೀವನೋಪಾಯಕ್ಕೆ ಎರಡು ಹಸು ಕೊಡಿಸುವುದಾಗಿಯೂ ಹೇಳಿದರು.

ಬಳಿಕ ಅಧಿಕಾರಿಗಳಿಗೆ ಶೀಘ್ರ ಶವದ ಮರಣೋತ್ತರ ಪರೀಕ್ಷೆ ಮಾಡಿಸಿ, ಕುಟುಂಬಸ್ಥರಿಗೆ ಹಸ್ತಾಂತರಿಸುವಂತೆ ಸೂಚಿಸಿದರು. ಜೊತೆಗೆ ಸ್ಥಳಕ್ಕೆ ತಹಸೀಲ್ದಾರ್ ಹಾಗೂ ಕೃಷಿ ಅಧಿಕಾರಿಗಳನ್ನು ಕರೆಸಿ ಬೆಳೆ ಪರಿಹಾರ ಶೀಘ್ರ ತಲುಪುವಂತೆ ಕ್ರಮ ವಹಿಸಿ ಎಂದು ಸೂಚಿಸಿದರು.

ಹೆಚ್ಡಿಕೆ ಸಂತಾಪ: ರೈತ ಸಜೀವ ದಹನ ಪ್ರಕರಣಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಟ್ವಿಟ್ ಮಾಡಿ ಸಂತಾಪ ವ್ಯಕ್ತಪಡಿಸಿದ್ದು, ರೈತ ಮಹಾಲಿಂಗಯ್ಯ ಬೆಂಕಿ ಕೆನ್ನಾಲಿಗೆಗೆ ಸಿಲುಕಿ ಸಾವನ್ನಪ್ಪಿರುವುದು ನಿಜಕ್ಕೂ ನನಗೆ ದಿಗ್ಭ್ರಮೆ ಮೂಡಿಸಿದೆ. ಅವರ ಕುಟುಂಬಕ್ಕೆ ಸರ್ಕಾರ ನೆರವಾಗಲಿ ಎಂದು ಅವರು ಮನವಿ ಮಾಡಿದ್ದಾರೆ.

ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಿಂದ ನನ್ನ ಕುಟುಂಬಕ್ಕೆ ನೋವು

ತಾಪಂ ಮಾಜಿ ಸದಸ್ಯ ರಾಜಾಹುಲಿ ದಿನೇಶ್ ಗಂಭೀರ ಆರೋಪ



ಕೆ.ಆರ್.ಪೇಟೆ, ಫೆ13– ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು 2018ರಲ್ಲಿ ನನ್ನ ಮನೆಗೆ ತಮ್ಮ ಬೆಂಬಲಿಗರಿಂದ ಕಲ್ಲು ತೂರಾಟ ಮಾಡಿಸಿ, ನನ್ನ ಕುಟುಂಬಕ್ಕೆ ಸಾಕಷ್ಟು ನೋವುಂಟು ಮಾಡಿದ್ದರು ಎಂದು ತಾಪಂ ಮಾಜಿ ಸದಸ್ಯ ರಾಜಾಹುಲಿ ದಿನೇಶ್ ಗಂಭೀರ ಆರೋಪ ಮಾಡಿದರು.

ತಾಲೂಕಿನ ಬಿಲ್ಲೇನಹಳ್ಳಿ ಶ್ರೀಗವಿರಂಗನಾಥ ಶ್ರೀಕ್ಷೇತ್ರದಲ್ಲಿ ಬಿ.ಎನ್.ದಿನೇಶ್ (ರಾಜಾಹುಲಿ) ಅಭಿಮಾನಿಗಳ ಬಳಗದ ವತಿಯಿಂದ ಆಯೋಜಿಸಿದ್ದ ಬೃಹತ್ ಸ್ವಾಭಿಮಾನಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ನಾನು 2018ರಲ್ಲಿ ಜೆಡಿಎಸ್‌ನ ತಾಪಂ ಸದಸ್ಯನಾಗಿದ್ದು, ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದೆ. ಆದರೆ ಅಂದಿನ ಶಾಸಕರಾಗಿದ್ದ ನಾರಾಯಣಗೌಡರ ಕಟ್ಟಾ ಬೆಂಬಲಿಗರಾಗಿದ್ದ ಹೆಚ್.ಟಿ.ಮಂಜು, ಮೋಹನ್, ಜಾನಕೀರಾಂ ಅವರು ಶಾಸಕರ ಅಧಿಕಾರ ದುರ್ಬಳಕೆ ಮಾಡಿಕೊಂಡು ಬಿಲ್ಲೇನಹಳ್ಳಿ ಗ್ರಾಮದಲ್ಲಿರುವ ನನ್ನ ಮನೆಗೆ ಜನರನ್ನು ಕರೆತಂದು ಕಲ್ಲು ತೂರಾಟ ಮಾಡಿ ನನ್ನ ಕುಟುಂಬವನ್ನು ಕೊಲೆ ಮಾಡಲು ಪ್ರಯತ್ನಿಸಿದ್ದರು. ಆ ದಿನಗಳಲ್ಲಿ ನಾರಾಯಣಗೌಡರಿಗೆ ಪರ್ಯಾಯವಾಗಿ ಜೆಡಿಎಸ್ ಟಿಕೆಟ್ ಕೇಳುವ ಅರ್ಹತೆ ಬೆಳೆಸಿಕೊಳ್ಳುತ್ತಾನೆ ಎಂಬ ಕಾರಣಕ್ಕಾಗಿ ನನ್ನ ಮೇಲೆ ಇಲ್ಲ ಸಲ್ಲದ ಪಿತೂರಿ ನಡೆಸಿ ನನ್ನ ಮೇಲೆ ಸುಳ್ಳು ಕೇಸು ದಾಖಲಿಸಿ ತೊಂದರೆ ನೀಡಿದರು. ನಾರಾಯಣಗೌಡರು ಒಳ್ಳೆಯವರಾಗಿದ್ದರೂ ಸಹ ಹೆಚ್.ಟಿ.ಮಂಜು ಅವರು ನನ್ನ ಮನೆಗೆ ಕಲ್ಲು ತೂರಾಟ ಮಾಡಿಸುವ ಮೂಲಕ, ನನಗೆ ಮಾನಸಿಕ ಹಾಗೂ ದೈಹಿಕವಾಗಿ ತೊಂದರೆ ನೀಡಿದರು. ಕೊಲೆ ಮಾಡುವಂತಿದ್ದರೆ ನನ್ನನ್ನು ಮಾಡಬೇಕಿತ್ತು. ಆದರೆ ನನ್ನ ಕುಟುಂಬ ಇವರಿಗೆ ಏನು ತೊಂದರೆ ಮಾಡಿತ್ತು ಎಂದು ಪ್ರಶ್ನಿಸಿದರು.

ಅಂದು ನನಗೆ ತೊಂದರೆ ನೀಡದಿದ್ದರೆ ನಾನು ಜೆಡಿಎಸ್ ಪ್ರಬಲ ನಾಯಕನಾಗಿ ಬೆಳೆದು 2023ರ ವಿಧಾನಸಭೆ ಜೆಡಿಎಸ್ ಟಿಕೆಟ್ ಪಡೆದುಕೊಳ್ಳುತ್ತಿದ್ದೆ. ಇಂತಹ ಅವಕಾಶ ತಪ್ಪಿದೆ ಎಂದರೆ ಅದಕ್ಕೆ ನೇರ ಕಾರಣ ಹೆಚ್.ಟಿ.ಮಂಜು ಎಂದು ದೂರಿದರು.

ಕಾರ್ಯಕ್ರಮದಲ್ಲಿ ವಕೀಲ ಶಂಕರೇಗೌಡ, ಬಿ.ಎನ್.ದಿನೇಶ್ ಅಭಿಮಾನಿ ಬಳಗದ ಹರೀಶ್, ಕೃಷ್ಣೇಗೌಡ, ಮಹಾದೇವ್, ಎಪಿಎಂಸಿ ಮಾಜಿ ಅಧ್ಯಕ್ಷೆ ಮಂಜಮ್ಮ, ಗೋವಿಂದರಾಜು, ಧರ್ಮರತ್ನಾಕರ್, ಸಂತೋಷ್, ಮಂಜು, ನಂದೀಶ್, ಸಂತೋಷ್, ಪ್ರಕಾಶ್, ಪ್ರಸನ್ನ, ಮನು, ಶಿವು, ಗ್ರಾಪಂ ಸದಸ್ಯರಾದ ನಾಗೇಂದ್ರಗೌಡ, ನಂದೀಶ್, ಸಾವಿತ್ರಮ್ಮ, ಶಾಂತಮ್ಮ ಸೇರಿದಂತೆ ಇತರರಿದ್ದರು.

ಮದ್ದೂರು ಆಸ್ಪತ್ರೆಯಲ್ಲಿ ಸರಣಿ ಮೊಬೈಲ್ ಕಳವು

ಮದ್ದೂರು, ಫೆ.13– ಹಲವು ಅಧ್ವಾನಗಳ ಮೂಲಕ ಸದಾ ಸುದ್ದಿಯಲ್ಲಿರುವ ಪಟ್ಟಣದ ಕೆ.ಗುರುಶಾಂತಪ್ಪ ಸ್ಮಾರಕ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳ ಸರಣಿ ಮೊಬೈಲ್ ಕಳವು ಪ್ರಕರಣ ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ. ಕಳೆದ 3 ದಿನಗಳಿಂದೀಚೆಗೆ ನಾಲ್ವರು ಒಳರೋಗಿಗಳ ಹಾಗೂ ಅವರ ಜತೆಗಿದ್ದವರ ಮೊಬೈಲ್‌ಗಳು ಕಳವಾಗಿದ್ದು, ಪ್ರಕರಣ ಸಂಬಂಧ ಮದ್ದೂರು ಠಾಣೆಯಲ್ಲಿ ದೂರು ದಾಖಲಾಗಿದೆ. ಪಟ್ಟಣದ ಹಳೇ ಒಕ್ಕಲಿಗರ ಬೀದಿ ನಿವಾಸಿ ಮಾನಸ ತಮ್ಮ ಸಹೋದರನ ಪತ್ನಿ ಹೆರಿಗೆಗಾಗಿ ಆಸ್ಪತ್ರೆಯಲ್ಲಿದ್ದ ವೇಳೆ ಶನಿವಾರ ರಾತ್ರಿ ವಾರ್ಡ್ ಕಿಟಕಿ ಮೆಸ್ ಕತ್ತರಿಸಿರುವ ದುಷ್ಕರ್ಮಿಗಳು ಮೊಬೈಲ್ ದೋಚಿ ಪರಾರಿಯಾಗಿದ್ದಾರೆ. ಅಲ್ಲದೇ ಶುಕ್ರವಾರ ತಡರಾತ್ರಿ ತಾಲೂಕಿನ ತೊರೆಚಾಕನಹಳ್ಳಿ ಸತೀಶ್ ಸಂಬಂಧಿಗಳು ಹೆರಿಗೆ ವಾರ್ಡ್‌ನಲ್ಲಿ ದಾಖಲಾಗಿದ್ದು, ಅವರ ಮೊಬೈಲ್ ಕಳವು ಮಾಡಲಾಗಿದೆ. ಕಳೆದ ವಾರದಿಂದೀಚೆಗೆ ಒಳರೋಗಿಗಳ ವಿಭಾಗ ಹಾಗೂ ಹೆರಿಗೆ ವಾರ್ಡ್‌ಗಳಲ್ಲಿ 5ಕ್ಕೂ ಹೆಚ್ಚು ಮೊಬೈಲ್‌ಗಳು ಕಳವಾಗಿದ್ದು, ಈ ಸಂಬಂಧ ಮದ್ದೂರು ನಿವಾಸಿ ಮಾನಸ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಕಬಾಬ್ ಅಂಗಡಿ ಮಾಲೀಕನ ಅಪಹರಣ

- ಹುಡುಗಿಯ ಚುಡಾಯಿಸುವುದಕ್ಕೆ ಆಕ್ಷೇಪ: ಇಬ್ಬರು ಯುವಕರಿಂದ ಕೃತ್ಯದ ಶಂಕೆ
- ಅಪಹೃತ ಸಯ್ಯದ್ ಮನ್ಸೂರ್ ಹತ್ಯೆ ಅನುಮಾನ
- ಪೊಲೀಸರಿಂದ ದುಷ್ಕರ್ಮಿಗಳಿಗಾಗಿ ಶೋಧ

ಮೈಸೂರು, ಫೆ. 13– ರಸ್ತೆ ಬದಿ ನಿಂತು ಹುಡುಗಿಯರನ್ನು ಚುಡಾಯಿಸುವುದನ್ನು ಆಕ್ಷೇಪಿಸಿದ ಕಬಾಬ್ ಅಂಗಡಿ ಮಾಲೀಕನನ್ನು ದುಷ್ಕರ್ಮಿಗಳು ಅಪಹರಿಸಿರುವ ಘಟನೆ ಭಾನುವಾರ ರಾತ್ರಿ ಮೈಸೂರಿನ ಗಾಂಧಿನಗರ ಪಾರ್ಕ್ ಬಳಿ ನಡೆದಿದ್ದು, ಈತನನ್ನು ಅಪಹರಣಕಾರರು ಹತ್ಯೆ ಮಾಡಿರಬಹುದೆಂದು ಬಲವಾದ ಶಂಕೆ ವ್ಯಕ್ತವಾಗಿದೆ.



ಮೂಲತಃ ಕಲ್ಯಾಣಗಿರಿಯವರಾಗಿದ್ದು, ಗಾಂಧಿನಗರದಲ್ಲಿ ವಾಸವಾಗಿರುವ ಸಯ್ಯದ್ ಮನ್ಸೂರ್(32) ಅಪಹರಣಕ್ಕೊಳಗಾದವನಾಗಿದ್ದು, ಈತ ಗಾಂಧಿನಗರ ಪಾರ್ಕ್ ಬಳಿ ತಳ್ಳುಗಾಡಿಯಲ್ಲಿ ಕಬಾಬ್ ಮಾರಾಟ ಮಾಡುತ್ತಿದ್ದ. ಈತನನ್ನು ಭಾನುವಾರ ರಾತ್ರಿ 11.30ರ ಸುಮಾರಿನಲ್ಲಿ ಅಪಹರಿಸಲಾಗಿದ್ದು, ಅಲ್ಲಲ್ಲಿ ರಕ್ತದ ಕಲೆಗಳು ಪತ್ತೆಯಾಗಿರುವುದರಿಂದ ದುಷ್ಕರ್ಮಿಗಳು ಮನ್ಸೂರ್‌ನನ್ನು ಹತ್ಯೆ ಮಾಡಿರಬಹುದು ಎಂದು ಶಂಕಿಸಲಾಗಿದೆ.

ಮನ್ಸೂರ್‌ನನ್ನು ಅಪಹರಿಸಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಆತನನ್ನು ಇಬ್ಬರು ಹೊತ್ತೊಯ್ದಿರುವುದು ಕಂಡುಬಂದಿದೆ. ಅಪಹರಣಕ್ಕೂ ಮುನ್ನ ಮನ್ಸೂರ್‌ನನ್ನು ದುಷ್ಕರ್ಮಿಗಳು ಚಾಕುವಿನಿಂದ ಇರಿದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಪೊಲೀಸರಿಗೆ ತಿಳಿಸಿದ್ದಾರಂತೆ. ಅದಕ್ಕೆ ಪೂರಕವಾಗಿ ಗಾಂಧಿನಗರ ಪಾರ್ಕ್ ಬಳಿಯಿಂದ ಜೆಪಿ ಫಾರ್ಚೂನ್ ಹೋಟೆಲ್ ಹಿಂಭಾಗದ ಗಲ್ಲಿವರೆಗೆ ರಕ್ತದ ಕಲೆಗಳು ಪತ್ತೆಯಾಗಿರುವುದರಿಂದ ಅಪಹರಿಸಲ್ಪಟ್ಟ ವ್ಯಕ್ತಿ ಇರಿತದಿಂದ ತೀವ್ರ ರಕ್ತಸ್ರಾವಕ್ಕೆ ಒಳಗಾಗಿ ಸಾವನ್ನಪ್ಪಿರಬಹುದು ಎಂದು ಹೇಳಲಾಗಿದೆ.

ಭಾನುವಾರ ರಾತ್ರಿ ಮನ್ಸೂರ್‌ನ ಕುಟುಂಬಸ್ಥರು ಎನ್‌ಆರ್ ಠಾಣೆಗೆ ದೂರು ಸಲ್ಲಿಸಿದ್ದು, ಮನ್ಸೂರ್‌ನ ಕಬಾಬ್ ಅಂಗಡಿ ಮುಂದೆ ನಿಂತು ಇಬ್ಬರು ಯುವಕರು ಆ ರಸ್ತೆಯಲ್ಲಿ ಓಡಾಡುವ ಹುಡುಗಿಯರನ್ನು ಚುಡಾಯಿಸುತ್ತಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಮನ್ಸೂರ್‌ನನ್ನು ಅದೇ ಯುವಕರು ಅಪಹರಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ. ಪೊಲೀಸರು ಸದ್ಯಕ್ಕೆ ಅಪಹರಣ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಪಹರಣ ನಡೆದ ಸ್ಥಳ ಹಾಗೂ ಕೆಲವು ದೂರದವರೆಗೆ ರಕ್ತದ ಕಲೆಗಳು ಕಂಡುಬಂದಿರುವ ಹಿನ್ನಲೆಯಲ್ಲಿ ಮನ್ಸೂರ್ ಕೊಲೆಯಾಗಿರಬಹುದು ಎಂದು ಬಲವಾದ ಅನುಮಾನದ ಮೇರೆಗೆ ಪೊಲೀಸರು ಒಂದೆಡೆ ಮೃತದೇಹಕ್ಕಾಗಿ ಶೋಧ ಕಾರ್ಯ ನಡೆಸುತ್ತಿದ್ದರೆ. ಮತ್ತೊಂದೆಡೆ ಆರೋಪಿಗಳ ಬಂಧನಕ್ಕಾಗಿ ಬಲೆ ಬೀಸಿದ್ದಾರೆ. ಎನ್‌ಆರ್ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ನೇತೃತ್ವದ ಪೊಲೀಸರ ತಂಡ ನಿರಂತರ ಕಾರ್ಯಾಚರಣೆಗೆ ಇಳಿದಿದ್ದು, ಸೋಮವಾರ ರಾತ್ರಿವರೆಗೂ ಮನ್ಸೂರ್‌ನ ಮೃತದೇಹವಾಗಲೀ, ಆರೋಪಿಗಳಾಗಲೀ ಪತ್ತೆಯಾಗಿಲ್ಲ.

ಬಾಲಿವುಡ್ ನಟ ಗುರುದತ್ ಸಹೋದರಿ, 'ತಾರೆ ಜಮೀನ್ ಪರ್' ನಟಿ ಲಲಿತಾ ಲಜ್ಮಿ ನಿಧನ

ಮುಂಬೈ: ಬಾಲಿವುಡ್‌ನ ಖ್ಯಾತ ನಟ ಗುರುದತ್ ಅವರ ಸಹೋದರಿ ಹಾಗೂ ಅಮೀರ್ ಖಾನ್ ಅಭಿನಯದ ತಾರೆ ಜಮೀನ್‌ಪರ್ ಸಿನಿಮಾದಲ್ಲಿ ಆರ್ಟ್ಸ್ ಟೀಚರ್ ಆಗಿ ನಟಿಸಿದ್ದ ನಟಿ ಲಲಿತಾ ಲಜ್ಮಿ (90 ವರ್ಷ) ಸೋಮವಾರ ನಿಧನರಾಗಿದ್ದಾರೆ.



ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಲಲಿತಾ ಲಜ್ಮಿ ಅವರು ಇಂದು ನಿಧನರಾಗಿದ್ದಾರೆ. ಈ ಬಗ್ಗೆ ಮುಂಬೈನ ಜಹಾಂಗೀರ್ ನಿಕೋಲ್ಸನ್ ಆರ್ಟ್ ಫೌಂಡೇಷನ್ ದೃಢಪಡಿಸಿದ್ದು, "ಸೂಕ್ಷ್ಮ ಸಂವೇದನೆಯ ಕಲಾವಿದೆ, ಕ್ಲಾಸಿಕಲ್ ಡ್ಯಾನ್ಸ್‌ನಲ್ಲೂ ಅಪಾರ ಆಸಕ್ತಿ ಹೊಂದಿದ್ದ ಅವರ ಅಗಲಿಕೆಯ ಸುದ್ದಿ ದುಃಖ ತಂದಿದೆ" ಎಂದು ಸಂಸ್ಥೆ ಸಂತಾಪ ಸೂಚಿಸಿದೆ.

ಮೂಲತ ಲಲಿತಾ ಲಜ್ಮಿ ಅವರು ಚಿತ್ರ ಕಲಾವಿದೆಯಾಗಿದ್ದು, ಅವರ ಪೇಂಟಿಂಗ್‌ಗಳು ಹೆಚ್ಚು ಖ್ಯಾತಿ ಪಡೆದಿವೆ. ನೂರಾರು ಎಕ್ಸಿಬಿಷನ್‌ನಲ್ಲಿ ಅವರು ಬಿಡಿಸಿದ ಚಿತ್ರಗಳು ಪ್ರದರ್ಶನಗೊಂಡಿವೆ. ತಾರೆ ಜಮೀನ್‌ಪರ್ ಸಿನಿಮಾದಲ್ಲಿ ಲಲಿತಾ ಅವರು ಅತಿಥಿ ಪಾತ್ರ ನಿರ್ವಹಿಸಿದ್ದರು. ಆದರೂ, ಇದು ಅವರಿಗೆ ಖ್ಯಾತಿ ತಂದುಕೊಟ್ಟಿತ್ತು.

ಲಜ್ಮಿ ಅವರು 1932ರಲ್ಲಿ ಕೋಲ್ಕತ್ತಾದಲ್ಲಿ ಲೇಖಕರಾಗಿದ್ದ ತಂದೆ ಮತ್ತು ಬಹುಭಾಷಾ ಬರಹಗಾರ ತಾಯಿಗೆ ಜನಿಸಿದರು. ಅವರು ಶಾಸ್ತ್ರೀಯ ನೃತ್ಯದಲ್ಲಿ ತೀವ್ರ ಆಸಕ್ತಿ ಹೊಂದಿರುವ ಸ್ವಯಂ–ಕಲಿಸಿದ ಕಲಾವಿದರಾಗಿದ್ದರು. ದಶಕಗಳಲ್ಲಿ, ಅವರು ಪ್ಯಾರಿಸ್, ಲಂಡನ್ ಮತ್ತು ನೆದರ್ಲ್ಯಾಂಡ್ಸ್‌ನ ಅಂತಾರಾಷ್ಟ್ರೀಯ ಕಲಾ ಗ್ಯಾಲರಿಗಳಲ್ಲಿ ಹಲವಾರು ಪ್ರದರ್ಶನಗಳನ್ನು ನಡೆಸಿದ್ದರು.

ಮತದಾನದ ಪ್ರಮುಖ ಮಾಹಿತಿ ಉಪಕರಣ ವಿವಿ ಪ್ಯಾಟ್ ಜೋಪಾನ ಮಾಡಲು ಜಿಲ್ಲಾಡಳಿತದಿಂದ ಸೂಕ್ತ ವ್ಯವಸ್ಥೆ

ಇಂದು ರಾತ್ರಿ ಹೈದರಾಬಾದ್‌ನಿಂದ ಮೈಸೂರಿಗೆ ಬರಲಿವೆ 4274 ವಿವಿ ಪ್ಯಾಟ್

ಮೈಸೂರು, ಫೆ. 13(ಆರ್‌ಕೆ)– ಮುಂಬರುವ ವಿಧಾನಸಭೆ ಚುನಾವಣೆಗೆ 4,274 ವಿವಿ ಪ್ಯಾಟ್‌ಗಳನ್ನು ಹೈದರಾಬಾದ್‌ನಿಂದ ನಾಳೆ (ಫೆ 14) ರಾತ್ರಿ ಮೈಸೂರಿಗೆ ತರಲಾಗುತ್ತಿದೆ.



ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ಕಂಪನಿಯ ವೋಟರ್ ವೆರಿಫಿಕೇಷನ್ ಪೇಪರ್ ಆಡಿಟ್ ಟ್ರಯಲ್ಸ್ (ವಿವಿ ಪ್ಯಾಟ್) ಉಪಕರಣಗಳನ್ನು ಸಿದ್ಧಪಡಿಸುತ್ತಿದ್ದು, ಮತದಾನದ ವೇಳೆ ಯಾವ ಅಭ್ಯರ್ಥಿಗೆ ಮತ ದಾಖಲಾಗಿದೆ ಎಂಬುದನ್ನು ದೃಢೀಕರಿಸುವ ಈ ಯಂತ್ರವನ್ನು ಭಾರತ ಚುನಾವಣಾ ಆಯೋಗವು ಪರಿಚಯಿಸಿದೆ. ವಿವಿ ಪ್ಯಾಟ್ ಅನ್ನು ಪ್ರಿಂಟರ್ ಪೋರ್ಟ್ ಮೂಲಕ ಇವಿಎಂಗೆ ಸಂಪರ್ಕ ಕಲ್ಪಿಸಿದರೆ, ಮತ ಚಲಾಯಿಸಿದ ಕೂಡಲೇ ಅದರಲ್ಲಿ ಚಲಾಯಿಸಿದ ಅಭ್ಯರ್ಥಿಗೇ ದಾಖಲಾಗಿದೆ ಎಂಬುದನ್ನು ತೋರಿಸಿ, ಕೆಲ ಕ್ಷಣಗಳಲ್ಲಿ ಮಾಯವಾಗುತ್ತದೆ.

ಮೈಸೂರು ಜಿಲ್ಲೆಯ ಚುನಾವಣಾ ನೋಡಲ್ ಅಧಿಕಾರಿಯಾಗಿರುವ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ನೇತೃತ್ವದಲ್ಲಿ 12 ಮಂದಿ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿ ಹಾಗೂ 12 ಮಂದಿ ರೆವಿನ್ಯೂ ಇಲಾಖೆ ಸಿಬ್ಬಂದಿಗಳೊಂದಿಗೆ ಭಾನುವಾರ ಹೈದರಾಬಾದ್ ತಲುಪಿದ್ದು, ಇಂದು ವಿವಿ ಪ್ಯಾಟ್‌ಗಳನ್ನು ತಲಾ 500ರಂತೆ 9 ಟ್ರಕ್‌ಗಳಿಗೆ ಲೋಡ್ ಮಾಡಿ ಅಧಿಕೃತ ಪ್ರಕ್ರಿಯೆಗಳನ್ನು ಪೂರೈಸಿ ರಾತ್ರಿ 11 ಗಂಟೆ ನಂತರ ಪ್ರಯಾಣ ಬೆಳೆಸಿ ಮಂಗಳವಾರ (ಫೆ. 14) ರಾತ್ರಿ 11 ಗಂಟೆ ವೇಳೆಗೆ ಮೈಸೂರು ತಲುಪುತ್ತವೆ.

ಅವುಗಳನ್ನು ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾ ಕಚೇರಿಗಳ ಸಂಕೀರ್ಣದಲ್ಲಿನ ಇವಿಎಂ ಉಗ್ರಾಣದಲ್ಲಿ ಇರಿಸಲಾಗುವುದು.

2022ರ ನವೆಂಬರ್ ತಿಂಗಳಲ್ಲಿ 5,635 ಬ್ಯಾಲೆಟ್ ಯೂನಿಟ್‌ಗಳನ್ನು ಇಸಿಐಎಲ್‌ನಿಂದ ಮೈಸೂರಿಗೆ ತರಲಾಗಿದೆ. 2023ರಲ್ಲಿ ನಡೆಯಲಿರುವ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಮೈಸೂರು ಜಿಲ್ಲೆಯಲ್ಲಿ 5,635 ಬ್ಯಾಲೆಟ್ ಯೂನಿಟ್, 3958 ಕಂಟ್ರೋಲ್ ಯೂನಿಟ್ (ಇವಿಎಂ)ಗಳ ಜೊತೆಗೆ 4,274 ವಿವಿಪ್ಯಾಟ್‌ಗಳನ್ನು ಬಳಸಲಾಗುತ್ತದೆ.

ಇವಿಎಂ ಉಗ್ರಾಣದ ಒಳಗೆ, ಹೊರಗೆ, ಆವರಣ, ಪ್ರವೇಶ ದ್ವಾರಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ, ದಿನದ 24 ಗಂಟೆಯೂ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ನಜರ್‌ಬಾದ್ ಠಾಣೆ ಗರುಡ ಸಿಬ್ಬಂದಿ ಆಗಿಂದಾಗ್ಗೆ ಉಗ್ರಾಣ ಪರಿಶೀಲಿಸುತ್ತಿದ್ದಾರೆ.

ಭಾರತ ಚುನಾವಣಾ ಆಯೋಗವು ಇವಿಎಂ, ವಿವಿಪ್ಯಾಟ್‌ಗಳನ್ನು ಸಿದ್ಧಪಡಿಸಲು ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಕಂಪನಿಗೆ ನಿರ್ದೇಶನ ನೀಡಿದ್ದು, ತಮ್ಮ ಸೂಚನೆ ಮೇರೆಗೆ ಅವುಗಳನ್ನು ಸರಬರಾಜು ಮಾಡುವಂತೆ ಆದೇಶ ನೀಡಿದೆ ಈ ಬಾರಿ ಆಯೋಗವು ಮೈಸೂರು ಜಿಲ್ಲೆಗೆ ಹೊಚ್ಚ ಹೊಸ ಇವಿಎಂ ಹಾಗೂ ವಿವಿ ಪ್ಯಾಟ್‌ಗಳನ್ನು ಒದಗಿಸಲಾಗಿದ್ದು, ಮುಕ್ತ ಹಾಗೂ ನ್ಯಾಯಸಮ್ಮತ ಮತದಾನಕ್ಕೆ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಎಲ್ಲಾ ವಿವಿ ಪ್ಯಾಟ್‌ಗಳು ಕಾರ್ಯನಿರ್ವಹಿಸುತ್ತಿವೆಯೇ ಎಂದು ಪ್ರತಿಯೊಂದನ್ನೂ ಪರೀಕ್ಷಿಸಿಕೊಂಡ ನಂತರವೇ ಉಪಕರಣಗಳನ್ನು ಟ್ರಕ್‌ಗಳಿಗೆ ಲೋಡ್ ಮಾಡಿಸಿ ಪೊಲೀಸ್ ಭದ್ರತೆಯಲ್ಲಿ ಜಿ.ಟಿ. ದಿನೇಶ್ ಕುಮಾರ್ ಮೈಸೂರಿಗೆ ತರುತ್ತಿದ್ದಾರೆ.

ಕೋಲಾರ ಕ್ಷೇತ್ರ: ಸಿದ್ದರಾಮಯ್ಯ 'ವಾರ್ ರೂಂ' ಸಿದ್ಧ!

ಕೋಲಾರ: ಚುನಾವಣೆ ಸಮೀಪಿಸುತ್ತಿರುವಂತೆ ಕೋಲಾರ ವಿಧಾನಸಭಾ ಕ್ಷೇತ್ರದ ರಾಜಕೀಯ ಚಟುವಟಿಕೆಗಳು ರಂಗು ಪಡೆಯುತ್ತಿದ್ದು, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ತಮ್ಮ ಚುನಾವಣಾ ತಂತ್ರಗಾರಿಕೆಯ 'ವಾರ್ ರೂಂ'ಗೆ ಚಾಲನೆ ನೀಡಿದರು.

ಈಗಾಗಲೇ ಅವರಿಗೆ ಕ್ಷೇತ್ರದಲ್ಲಿ ವಾಸ್ತವ್ಯಕ್ಕೆಂದು ವಿಶಾಲವಾದ ಬಾಡಿಗೆ ಮನೆ ಸಿದ್ಧಪಡಿಸಲಾಗಿದೆ. ಇದರೊಂದಿಗೆ ಅವರು ಎಲ್ಲರಿಗಿಂತ ಮೊದಲೇ ಚುನಾವಣಾ ಪ್ರಚಾರ ಅಖಾಡಕ್ಕೆ ಸಿದ್ಧಮಾಡಿಕೊಂಡಿದ್ದಾರೆ.

ಟೇಕಲ್ ರಸ್ತೆಯ ಸಮೃದ್ಧಿ ಬಡಾವಣೆಯಲ್ಲಿರುವ ಸುಸಜ್ಜಿತ 'ವಾರ್ ರೂಮ್'ನಲ್ಲಿ ಕ್ಷೇತ್ರದ ಚುನಾವಣಾ ಕೆಲಸ, ಪ್ರಚಾರದ ಯೋಜನೆ ರೂಪಿಸಲಾಗುತ್ತದೆ. ಬೆಂಗಳೂರಿನ ಚುನಾವಣಾ ತಂತ್ರಗಾರಿಕೆ ತಂಡ 'ಪೋಲ್ ಹೌಸ್' ಕ್ಷೇತ್ರದ ಚುನಾವಣಾ ಉಸ್ತುವಾರಿ ವಹಿಸಿಕೊಂಡಿದ್ದು ಮುಂದಿನ ಮೂರು ತಿಂಗಳು ಈ ವಾರ್ ರೂಂ ನಿರ್ವಹಿಸಲಿದೆ.

ವಾರ್ ರೂಂ ವಿಶೇಷವೇನು

- ಬೆಂಗಳೂರಿನ ಪೋಲ್ ಹೌಸ್ ಏಜೆನ್ಸಿ ನಿರ್ವಹಣೆ
- ವಾರ್ ರೂಂನಲ್ಲಿ 25ರಿಂದ 30 ತಂಡ
- 30x60 ವಿಸ್ತೀರ್ಣ ಎರಡು ಮಹಡಿಯ ಕಟ್ಟಡ
- ವಿವಿಧ ರೀತಿಯ ಸಮೀಕ್ಷೆ
- ಸಿದ್ದರಾಮಯ್ಯ ಬ್ರ್ಯಾಂಡಿಂಗ್, ಇಮೇಜ್ ಬಿಲ್ಡಿಂಗ್
- ಜನರಿಗೆ ಸಿದ್ದರಾಮಯ್ಯ ಯೋಜನೆ ತಲುಪಿಸುವುದು
- ಕ್ಷೇತ್ರದ ವಿವಿಧೆಡೆ ತಂಡ ತಿರುಗಾಟ
- ಡಿಜಿಟಲ್ ಮೂಲಕ ತಂತ್ರಗಾರಿಕೆ
- ಕಂಪ್ಯೂಟರ್, ವಿವಿಧ ರೀತಿ ಉಪಕರಣ ಅಳವಡಿಕೆ

ನಾನು ಕೋಲಾರ ಕ್ಷೇತ್ರದಿಂದಲೇ ಕಣಕ್ಕಿಳಿಯುತ್ತಿದ್ದೇನೆ. ಇದರಲ್ಲಿ ಯಾವುದೇ ಗೊಂದಲ ಇಲ್ಲ ಬಿಜೆಪಿ ಹಾಗೂ ಜೆಡಿಎಸ್‌ನಿಂದ ಯಾರಾದರೂ ಅಭ್ಯರ್ಥಿ ಹಾಕಲಿ. ಎದುರಾಳಿ ಯಾರು ಎಂಬುದು ನನಗೆ ಮುಖ್ಯವಲ್ಲ. ಕಾಂಗ್ರೆಸ್‌ನ ಸ್ಥಳೀಯ ಶಾಸಕರು, ಮುಖಂಡರು ನನ್ನನ್ನು ಗೆಲ್ಲಿಸಿ ಕೊಡುತ್ತಾರೆ ಎಂದು ಸಿದ್ದರಾಮಯ್ಯ ಹೇಳಿದರು. ದಲಿತರಿಗೆ ಅನ್ಯಾಯವಾಗಿದೆ ಎಂದು ಕೆಲ ದಲಿತ ಸಂಘಟನೆಗಳು ಕುಪ್ರಚಾರ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಜೆಡಿಎಸ್‌ನವರು ಷಡ್ಯಂತರ ನಡೆಸಿ ನನ್ನ ವಿರುದ್ಧ ಕರಪತ್ರ ಹಂಚುತ್ತಿದ್ದಾರೆ. ಇದಕ್ಕೆಲ್ಲಾ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನಾನು ಏನು ಕೆಲಸ ಮಾಡಿದ್ದೇನೆ ಎಂಬುದು ದಲಿತ ಸಮುದಾಯದವರಿಗೆ ಗೊತ್ತಿದೆ ಎಂದು ತಿರುಗೇಟು ನೀಡಿದರು. ಶಾಸಕರಾದ ಕೆ.ಶ್ರೀನಿವಾಸಗೌಡ, ಬೈರತಿ ಸುರೇಶ್, ಕೆ.ಆರ್.ರಮೇಶ್ ಕುಮಾರ್, ವಿಧಾನ ಪರಿಷತ್ ಸದಸ್ಯರಾದ ನಜೀರ್ ಅಹಮದ್, ಎಂ.ಎಲ್.ಅನಿಲ್ ಕುಮಾರ್, ಮಾಜಿ ಸಚಿವ ಎಂ.ಆರ್.ಸೀತಾರಾಂ, ಮಾಜಿ ಸಭಾಪತಿ ವಿ.ಆರ್ ಸುದರ್ಶನ್ ಇದ್ದರು.

'ಲಕ್ಕಾ ಶಹ್ ವಾಲಿ ಮಕಾನ್' ಪದಾಧಿಕಾರಿಗಳ ನೇಮಕ



ಮೈಸೂರು, ಫೆ13– ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧೀನದ 'ದಿ ಲಕ್ಕಾ ಶಹ್ ವಾಲಿ ಮಕಾನ್(The Lakka Shah Vali Makan)' ಆಡಳಿತ ಸಮಿತಿಗೆ ನೂತನ ಪದಾಧಿಕಾರಿಗಳ ನೇಮಕ ಮಾಡಿ, ವಕ್ಫ್ ಮಂಡಳಿ ಅಡಿಷನಲ್ ಸಿಇಓ ಆದೇಶ ಹೊರಡಿಸಿದ್ದಾರೆ.

ಅಧ್ಯಕ್ಷರಾಗಿ ಮೊಹಮದ್ ರಫಿ, ಉಪಾಧ್ಯಕ್ಷರಾಗಿ ಸೈಯದ್ ಅಫ್ರೋಜ್ ಅಹ್ಮದ್, ಕಾರ್ಯದರ್ಶಿಯಾಗಿ ಸೈಯದ್ ಇಫ್ತೆಕರ್, ಖಜಾಂಚಿಯಾಗಿ ಮುಜಾಮ್ಮಿಲ್ ಅಹ್ಮದ್, ಸದಸ್ಯರಾಗಿ ನುಸ್ರತ್ ಅಹ್ಮದ್, ಮೊಹಮ್ಮದ್ ಸಾದತ್ ಹುಸ್ಸೇನ್, ಅಬ್ದುಲ್ ರಹೀಮ್, ಕಲೀಮ್ ಶರೀಫ್, ಅನ್ಸರ್ ಶರೀಫ್, ಅಬ್ದುಲ್ಲಾ ಹಾಗೂ ರಿಯಾಜ್ ಖಾನ್ ಅವರನ್ನು ನೇಮಿಸಲಾಗಿದೆ.

ಯಾವ ಐದು ಜಿಲ್ಲೆಗಳಲ್ಲಿ ಮಾರ್ಚ್‌ನಲ್ಲಿ ಕೆಎಸ್‌ಆರ್‌ಟಿಸಿ ಇ–ಬಸ್ ಸಂಚಾರ

ಬೆಂಗಳೂರು: ರಾಜ್ಯದಲ್ಲಿ ಐದು ಮಾರ್ಗಗಳಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಯೋಜನೆ ಫೆಬ್ರವರಿಯಲ್ಲಿ ಪ್ರಾರಂಭವಾಗುವ ಸಾಧ್ಯತೆಯಿಲ್ಲ. ಏಕೆಂದರೆ, ಖಾಸಗಿ ನಿರ್ವಾಹಕರು ಇನ್ನೂ 49 ಬಸ್‌ಗಳನ್ನು ತಲುಪಿಸಬೇಕಿದ್ದು, ಹಾಗಾಗಿ ಪ್ರಯಾಣಿಕರ ಸೇವೆಗೆ ಬಿಡುವುದು ತಡವಾಗಬಹುದು ಎಂದು ಸಾರಿಗೆ ಸಂಸ್ಥೆಯ ಮೂಲಗಳು ತಿಳಿಸಿವೆ.

ಬೆಂಗಳೂರು–ಮೈಸೂರು ನಡುವೆ ಮೊದಲ ಎಲೆಕ್ಟ್ರಿಕ್ ಬಸ್ ಯಶಸ್ವಿಯಾಗಿ ಓಡುತ್ತಿದ್ದು, ಪ್ರಯಾಣಿಕರಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಇತರ ಮಾರ್ಗಗಳಿಂದಲೂ ಇದೇ ಬೇಡಿಕೆಯಿದ್ದರೂ, ಪ್ರಯಾಣಿಕರು ಈ ಸೌಲಭ್ಯವನ್ನು ಪಡೆಯಲು ಮಾರ್ಚ್‌ವರೆಗೆ ಕಾಯಬೇಕಾಗಬಹುದು.

ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವುದು ಸೇರಿದಂತೆ ಇ–ಬಸ್‌ಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವ ಕಾರ್ಯಗಳು ನಡೆಯುತ್ತಿವೆ ಮತ್ತು ಖಾಸಗಿ ನಿರ್ವಾಹಕರಿಂದ ಬಸ್‌ಗಳ ವಿತರಣೆಗಾಗಿ ಅವರು ಕಾಯುತ್ತಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಮೂಲಗಳು ತಿಳಿಸಿವೆ.

ಇ–ಬಸ್‌ಗಳಿಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರಯಾಣವು ಸದ್ದುಗದ್ದಲವಿಲ್ಲದೆ ಮತ್ತು ಸುಗಮವಾಗಿರುವುದರಿಂದ ಅವರು ಈ ಅನುಭವವನ್ನು ಪ್ರೀತಿಸುತ್ತಾರೆ. ಈ ತಿಂಗಳ ಅಂತ್ಯ ಅಥವಾ ಮಾರ್ಚ್‌ನಲ್ಲಿ ಕನಿಷ್ಠ 25 ಬಸ್‌ಗಳ ವಿತರಣೆಯನ್ನು ನಾವು ನಿರೀಕ್ಷಿಸುತ್ತಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಸ್‌ಗಳು ನಮಗೆ ಸಿಕ್ಕ ನಂತರ, ಅವುಗಳನ್ನು ನೋಂದಾಯಿಸಬೇಕು, ಪರೀಕ್ಷಿಸಬೇಕು ಮತ್ತು ಪ್ರಯೋಗಗಳಿಗೆ ಒಳಪಡಿಸಬೇಕು. ಹೀಗಾಗಿ, ಇದು ಬಸ್‌ಗಳನ್ನು ಸೇವೆಗೆ ಬಿಡುವುದು ತಡವಾಗುವ ಸಾಧ್ಯತೆ ಇದೆ ಎಂದು ಮೂಲವೊಂದು ತಿಳಿಸಿದೆ.

ನಾವು ಬೆಂಗಳೂರಿನಿಂದ ಇ–ಬಸ್‌ಗಳಿಗಾಗಿ ಐದು ಮಾರ್ಗಗಳನ್ನು ಅಂತಿಮಗೊಳಿಸಿದ್ದೇವೆ. ಬಸ್‌ಗಳು ಬಂದ ನಂತರ ಬೆಂಗಳೂರಿನಿಂದ ಮಡಿಕೇರಿ, ವಿರಾಜಪೇಟೆ, ಚಿಕ್ಕಮಗಳೂರು, ದಾವಣಗೆರೆ ಮತ್ತು ಶಿವಮೊಗ್ಗಕ್ಕೆ ಕಾರ್ಯನಿರ್ವಹಿಸಲಿವೆ.

ಈಗಾಗಲೇ ಬೆಂಗಳೂರು ಮತ್ತು ಮೈಸೂರಿನಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳು ಜಾರಿಯಲ್ಲಿದ್ದರೆ, ಮಡಿಕೇರಿ, ವಿರಾಜಪೇಟೆ, ದಾವಣಗೆರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಬಸ್ ನಿಲ್ದಾಣಗಳಲ್ಲಿ ಅವುಗಳನ್ನು ಸ್ಥಾಪಿಸುವ ಕೆಲಸಗಳು ನಡೆಯುತ್ತಿವೆ. ಇ–ಬಸ್ ಒಂದೇ ಚಾರ್ಜ್‌ನಲ್ಲಿ 300 ಕಿಮೀ ಓಡುವ ಸಾಮರ್ಥ್ಯ ಹೊಂದಿದೆ.

ಕೊಡಗಲ್ಲಿ ಹುಲಿ ಹಾವಳಿ: ವಿಧಾನಸಭೆಯಲ್ಲಿ ಪ್ರತಿಧ್ವನಿ

ಕೆ.ಜಿ.ಬೋಪಯ್ಯ, ಅಪ್ಪಚ್ಚುರಂಜನ್ ಆಕ್ರೋಶ


ಕೆ.ಜಿ.ಬೋಪಯ್ಯ


ಅಪ್ಪಚ್ಚುರಂಜನ್

ಬೆಂಗಳೂರು, ಫೆ13(ಕುಂಎ)– ಕೊಡಗಿನ ವಿರಾಜಪೇಟೆ ತಾಲೂಕಿನ ಕೆ.ಬಾಡಗ ಗ್ರಾಮದಲ್ಲಿ ಹುಲಿ ಇಬ್ಬರ ಬಲಿ ಪಡೆದಿರುವ ಘಟನೆ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ, ಗಂಭೀರ ಚರ್ಚೆಗೆ ಎಡೆ ಮಾಡಿಕೊಟ್ಟಿತು.

ಶೂನ್ಯವೇಳೆಯಲ್ಲಿ ಆಡಳಿತ ಪಕ್ಷದ ಶಾಸಕ ಕೆ.ಜಿ. ಬೋಪಯ್ಯ ವಿಷಯ ಪ್ರಸ್ತಾಪಿಸಿ, ನಿನ್ನೆ ಸಂಜೆ 4 ಗಂಟೆಗೆ 12 ವರ್ಷದ ಮಗುವನ್ನು ಹುಲಿ ತಿಂದು ಹಾಕಿದೆ. ತಕ್ಷಣವೇ ಅರಣ್ಯ ಇಲಾಖೆ ಆ ಗ್ರಾಮದಲ್ಲಿ ರಕ್ಷಣೆಗೆ ಬಾರದ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಮತ್ತೊಬ್ಬರನ್ನು ತಿಂದು ಹಾಕಿದೆ ಎಂದರು.

ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಗೆ ಈ ಗ್ರಾಮ ಬರುತ್ತದೆ. ಮನುಷ್ಯನ ರಕ್ತದ ರುಚಿ ನೋಡಿದ ಹುಲಿ ಮತ್ತೆ ಬರುವ ಸಾಧ್ಯತೆಯೂ ಇದೆ. ಆದರೆ, ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸಿದೆ. ಯಾವುದೇ ತುರ್ತು ಕ್ರಮ ಕೈಗೊಂಡಿಲ್ಲ. ಹೀಗಾಗಿ ಇಂದು ಬೆಳಗ್ಗೆ ಮತ್ತೆ 75 ವರ್ಷದ ವ್ಯಕ್ತಿಯೊಬ್ಬರನ್ನು ತಿಂದಿದೆ. ಅಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಇಲ್ಲವೇ ನಮಗೆ ಬಿಡಿ ಹುಲಿ ಮದುವೆ ಮಾಡಿಕೊಂಡು ಹುಲಿಯಿಂದ ರಕ್ಷಣೆ ಮಾಡಿಕೊಳ್ಳುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಅಪ್ಪಚ್ಚು ರಂಜನ್ ಮಾತನಾಡಿ, ಡಿಎಫ್‌ಓ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಕಾಂಗ್ರೆಸ್ ಶಾಸಕ ಹೆಚ್.ಪಿ.ಮಂಜುನಾಥ್, ಹುಲಿ ತಿಂದು ಹಾಕಿದವರು ನಮ್ಮ ಮತ ಕ್ಷೇತ್ರಕ್ಕೆ ಸೇರಿದವರು. ನಿನ್ನೆ ಮಗುವನ್ನು ಹುಲಿ ತಿಂದಿದೆ ಎಂಬ ಸುದ್ದಿ ಬಂದ ಕೂಡಲೇ ಮನೆಯವರು ರಾತ್ರಿ ಹೋಗಿದ್ದರು. ಮತ್ತೆ ಬೆಳಗ್ಗೆ ಅಜ್ಜನನ್ನು ತಿಂದಿದೆ. ಈ ಸುದ್ದಿಯನ್ನು ತಿಳಿದ ಅಜ್ಜಿಯು ಇತ್ತ ಆಘಾತದಿಂದ ತೀರಿಕೊಂಡಿರುವ ಮಾಹಿತಿ ಇದೆ.

ಇಂತಹ ಘಟನೆಗಳಿಂದ ಕಾಡಂಚಿನ ಕ್ಷೇತ್ರಗಳ ಶಾಸಕರ ಮೇಲೆ ಜನರ ಆಕ್ರೋಶವಿದೆ. ನಾವು ಹೋಗಲಾರದ ಸ್ಥಿತಿ ಇದೆ. ಕೂಲಿ ಕೆಲಸಕ್ಕಾಗಿ ಹಾಡಿ ಜನರು ಕೊಡಗಿಗೆ ಹೋಗಿದ್ದರು. ಜೀವಕ್ಕೆ ಬೆಲೆ ಕಟ್ಟಲಾಗದು ಎಂದರು. ಜೆಡಿಎಸ್ ಶಾಸಕ ಎಚ್.ಕೆ.ಕುಮಾರಸ್ವಾಮಿ ಈ ಬಗ್ಗೆ ವಿಶೇಷ ಚರ್ಚೆಯಾಗಬೇಕು ಎಂದು ಆಗ್ರಹಿಸಿದರು. ಆಗ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಹೇಳಿದರು. ಸರ್ಕಾರದ ಪರವಾಗಿ ಉತ್ತರಿಸಿದ ಸಚಿವ ಮಾಧುಸ್ವಾಮಿ, ಕೊಡಗು ಜಿಲ್ಲೆಯಲ್ಲಿ ಹುಲಿ ಮಗುವನ್ನು ತಿಂದು ಹಾಕಿರುವ ಘಟನೆಗೆ ಸಂಬಂಧಿಸಿದಂತೆ ಯಾವುದೇ ಹಂತದಲ್ಲಿ ನಿರ್ಲಕ್ಷ್ಯ ತೋರಿದ್ದರೆ ಅಂಥವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ಈ ವಿಚಾರ ಗಂಭೀರವಾಗಿದ್ದು, ಮುಖ್ಯಮಂತ್ರಿ ಗಮನಕ್ಕೆ ತಂದು ಮತ್ತೆ ಸದನಕ್ಕೆ ಸಮರ್ಪಕ ಉತ್ತರ ಕೊಡಿಸುವ ಭರವಸೆ ನೀಡಿ ಈ ವಿಚಾರದ ಚರ್ಚೆಗೆ ತೆರೆ ಎಳೆದರು.


ಹುಲಿ ದಾಳಿಗೆ ಬಲಿಯಾದವರ ಕುಟುಂಬಸ್ಥರಿಗೆ ಪರಿಹಾರ ವಿತರಣೆ.

ಹುಲಿಗೆ ಕಂಡಲ್ಲಿ ಗುಂಡಿಕ್ಕಲು ಆಗ್ರಹ

ಗೋಣಿಕೊಪ್ಪ, ಫೆ.13– ಕೇವಲ 15 ಗಂಟೆ ಅವಧಿಯಲ್ಲಿ ಇಬ್ಬರನ್ನು ಹುಲಿ ಬಲಿ ಪಡೆದಿದ್ದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಪ್ರತಿಭಟನೆಗಿಳಿದರು. ಅಖಿಲ ಕೊಡವ ಸಮಾಜದ ಯೂಥ್‌ವಿಂಗ್ ಅಧ್ಯಕ್ಷ ಚೆಮ್ಮಟ್ಟಿರ ಪ್ರವೀಣ್ ಉತ್ತಪ್ಪ ಅವರು ಮಾನವರನ್ನು ಬಲಿ ಪಡೆಯುತ್ತಿರುವ ಹುಲಿಗೆ ಗುಂಡಿಕ್ಕುವಂತೆ ಆಗ್ರಹಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್. ಪೊನ್ನಣ್ಣ ಭಾನುವಾರ ಹುಲಿ ದಾಳಿಗೆ ಮೃತಪಟ್ಟ ಬಾಲಕ ಚೇತನ್‌ನ ತಂದೆ ಮಧು ಎಂಬುವರ ಮೇಲೆ ಹುಲಿ ದಾಳಿ ನಡೆಸಿದೆ. ಅವರನ್ನು ಆಸ್ಪತ್ರೆಗೆ ಸೇರಿಸುವ ಸೌಜನ್ಯವನ್ನೂ ಕೂಡ ಅರಣ್ಯ ಇಲಾಖೆ ಅಧಿಕಾರಿಗಳು ತೋರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವನ್ಯ ಪ್ರಾಣಿ ಹಾಗೂ ಮಾನವ ಸಂಘರ್ಷ ತಡೆಯುವಲ್ಲಿ ನಿರ್ಲಕ್ಷ್ಯತೆ ವಹಿಸಿರುವ ಕೆಲವು ಅರಣ್ಯಾಧಿಕಾರಿಗಳ ವಿರುದ್ಧ ಕೇಸ್ ದಾಖಲಿಸಬೇಕು ಎಂದು ಒತ್ತಾಯಿಸಿದ ಅವರು, ಅಧಿಕಾರಿಗಳ ತಲೆದಂಡವಾದರೆ ಮಾತ್ರ ಈ ಸಮಸ್ಯೆಗೆ ಪರಿಹಾರ ದೊರೆಯಬಹುದು ಎಂದು ಅಭಿಪ್ರಾಯಪಟ್ಟರು. ನಿರಂತರವಾಗಿ ಹುಲಿ ದಾಳಿ ನಡೆಯುತ್ತಿದ್ದರೂ ಅದನ್ನು ತಡೆಯುವಲ್ಲಿ ಸರ್ಕಾರ ಹಾಗೂ ಅರಣ್ಯ ಇಲಾಖೆ ವಿಫಲವಾಗಿದೆ ಎಂದ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಣ್ಣ ವನ್ಯ ಜೀವಿಗಳ ಉಪಟಳ ತಡೆಯಲು ಶಾಶ್ವತ ಯೋಜನೆ ರೂಪಿಸಬೇಕೆಂದು ಒತ್ತಾಯಿಸಿದರು.

ಕೂಂಬಿಂಗ್ ಆರಂಭ: ಮಾನವನ ಮೇಲೆ ದಾಳಿ ಮಾಡಿರುವ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದಕ್ಕಾಗಿ ಮೈಸೂರು, ಚಾಮರಾಜನಗರ, ನಾಗರಹೊಳೆ, ಕೊಡಗು ವೃತ್ತದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಹಿತ 100 ಮಂದಿಯ ತಂಡ ರಚಿಸಲಾಗಿದೆ. ಕಾರ್ಯಾಚರಣೆಗಾಗಿ ಮತ್ತಿಗೋಡು ಸಾಕಾನೆ ಶಿಬಿರದ 4 ಸಾಕಾನೆಗಳು, ಅರವಳಿಕೆ ತಜ್ಞರು, ಪಶು ವೈದ್ಯಾಧಿಕಾರಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಎಲ್ಲಾ ಗ್ರಾಮಸ್ಥರು, ಬೆಳೆಗಾರರು, ಸಂಘಟನೆಗಳು ಸಹಕರಿಸುವಂತೆ ಸಿಸಿಎಫ್ ನಿರಂಜನ್ ಮೂರ್ತಿ ಮನವಿ ಮಾಡಿದರು. ಇನ್ನು ಸ್ಥಳದಲ್ಲಿ ಬಿಗುವಿನ ವಾತಾವರಣ ಮನೆ ಮಾಡಿದ್ದು, ಪೊಲೀಸ್ ಬಂದೋಬಸ್ತ್ ಹಾಕಲಾಗಿದೆ. ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಪ್ರತಿಭಟನಾಕಾರರ ಬಹುತೇಕ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ. ಮಾತ್ರವಲ್ಲದೇ ಪ್ರತಿಭಟನಾಕಾರರ ಒತ್ತಾಯದಂತೆ ಮೃತಪಟ್ಟ ಕುಟುಂಬಗಳಿಗೆ ಸ್ಥಳದಲ್ಲೇ ತಲಾ 5 ಲಕ್ಷ ರೂ. ಪರಿಹಾರ ವಿತರಿಸಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ.


ಸಾಕಾನೆ ಸಹಾಯದೊಂದಿಗೆ ಹುಲಿ ಸೆರೆ ಕಾರ್ಯಾಚರಣೆ.

ವಿ.ಪೇಟೆಯಲ್ಲಿ ಮೆಗಾ ಲೋಕ್ ಅದಾಲತ್



ವಿರಾಜಪೇಟೆ, ಫೆ.13– ವಿರಾಜಪೇಟೆ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಮೆಗಾ ಲೋಕ್ ಅದಾಲತ್‌ನಲ್ಲಿ ಒಟ್ಟು 1699 ಪ್ರಕರಣಗಳನ್ನು ಆಯ್ಕೆಮಾಡಿಕೊಳ್ಳಲಾಗಿತ್ತು, ಅದರಲ್ಲಿ 454 ರಾಜಿಯಾದ ಪ್ರಕರಣಗಳಲ್ಲಿ 159 ಚೆಕ್ ಬೌನ್ಸ್ ಪ್ರಕರಣ ಹಾಗೂ ಸಿವಿಲ್ ದಾವೆಗಳು 42 ಪ್ರಕರಣ ಸೇರಿದಂತೆ ಉಳಿದ ಪ್ರಕರಣಗಳು ಇತ್ಯರ್ಥಗೊಂಡಿರುತ್ತವೆ. ರಾಜಿಯಾದ ಪ್ರಕರಣಗಳಲ್ಲಿ ಇತ್ಯರ್ಥವಾದ ಹಣದ ಮೊತ್ತ 3,46,43697 ರೂ, ಆಗಿರುತ್ತದೆ.

ಲೋಕ ಅದಾಲತ್‌ನಲ್ಲಿ ಎರಡನೇ ಅಪರ ಜಿಲ್ಲಾ ಸತ್ರ ನ್ಯಾಯಾಧೀಶರಾದ ಎಸ್. ಸುಜಾತ, ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಜಿ.ಲೋಕೇಶ್, ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ್ ಕೊಠಾರಿ, ಅಪರ ಸಿವಿಲ್ ನ್ಯಾಯಾಧೀಶರಾದ ಸಿ.ಮಹಾಲಕ್ಷ್ಮಿ ಹಾಗೂ ಕೆ.ಎಸ್.ಆಶಾ ಮತ್ತು ವಕೀಲರ ಸಂಘದ ಅಧ್ಯಕ್ಷ ಐ.ಆರ್. ಪ್ರಮೋದ್ ಉಪಸ್ಥಿತರಿದ್ದು, ಸಂಧಾನಕಾರರಾಗಿ ವಕೀಲರಾದ ಸಿ.ದರ್ಶನ್, ಎಂ.ಕೆ.ಧನ್ಯ, ಬಿ.ಎನ್. ಜಗದೀಶ್, ಬಿ.ಬಿ.ಮಾದಪ್ಪ, ಎಂ.ಹೆಚ್. ನವಲಗುಂದ ಇತರರು ಭಾಗವಹಿಸಿದ್ದರು.

ಕೂಲಿ ಕಾರ್ಮಿಕ ಆತ್ಮಹತ್ಯೆ

ವಿರಾಜಪೇಟೆ, ಫೆ.13– ಕೂಲಿ ಕಾರ್ಮಿಕನೊರ್ವ ಜೀವನದಲ್ಲಿ ಜಿಗುಪ್ಸೆಗೊಂಡು ತೆರೆದ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿ ನಡೆದಿದೆ. ಮೈಸೂರು ಜಿಲ್ಲೆಯ ಬೆಟ್ಟದಪುರ ಐತನಳ್ಳಿ ಗ್ರಾಮದ ರವಿ (50) ಎಂಬಾತ ಕೆಲ ವರ್ಷಗಳ ಹಿಂದೆ ಕುಟುಂಬ ಸಮೇತರಾಗಿ ಕೂಲಿ ಕೆಲಸಕ್ಕೆಂದು ಬಂದು ವಿರಾಜಪೇಟೆ ನಗರದ ಅಪ್ಪಯ್ಯಸ್ವಾಮಿ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡಿದ್ದರು. ಫೆ12 ರಂದು ಮನೆಯಿಂದ ಕೆಲಸಕ್ಕೆಂದು ಹೋದವನು ಮನೆಗೆ ಬಂದಿಲ್ಲ. ಇಂದು ಮುಂಜಾನೆ ನಗರದ ಶಾಂತ ಚಿತ್ರಮಂದಿರದ ಬಳಿ ಇರುವ ತೆರೆದ ಬಾವಿಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಮೃತನ ಪತ್ನಿ ರತ್ನಮ್ಮ ನೀಡಿದ ದೂರಿನ ಮೇರೆ ವಿರಾಜಪೇಟೆ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲಾರಿ–ಕಾರು ಡಿಕ್ಕಿ: ಓರ್ವನ ಸಾವು

ಗೋಣಿಕೊಪ್ಪ, ಫೆ.13– ಲಾರಿ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಕಾರು ಚಾಲಕ ಸ್ಥಳದಲ್ಲೇ ಮೃತಪಟ್ಟ ಘಟನೆ ಗೋಣಿಕೊಪ್ಪದಲ್ಲಿ ನಡೆದಿದೆ. ಬಿಟ್ಟಂಗಾಲದ ಅಂಬಟ್ಟಿ ನಿವಾಸಿ ನಂದೇಟಿರ ಸದನ್ ಚಂಗಪ್ಪ (49) ಎಂಬವರೇ ಅಪಘಾತದಲ್ಲಿ ಮೃತಪಟ್ಟವರು.

ಗೋಣಿಕೊಪ್ಪದಿಂದ ವಿರಾಜಪೇಟೆಗೆ ಬರುತ್ತಿದ್ದ ಕಾರು ಹಾಗೂ ವಿರಾಜಪೇಟೆಯಿಂದ ಮೈಸೂರಿಗೆ ತೆರಳುತ್ತಿದ್ದ ಲಾರಿ ನಡುವೆ ಸೋಮವಾರ ಮಧ್ಯಾಹ್ನ ವೇಳೆ ಗೋಣಿಕೊಪ್ಪ ಕೈಕೇರಿ ಬಳಿ ಅಪಘಾತವಾಗಿದೆ. ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ಕಾರು ರಸ್ತೆ ಬದಿಯಿದ್ದ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ್ದು, ಸಂಪೂರ್ಣ ನಜ್ಜುಗುಜ್ಜಾಗಿದೆ. ಅಪಘಾತದ ತೀವ್ರತೆಗೆ ಚಾಲಕ ಸದನ್



ಚಂಗಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರಿನಲ್ಲಿದ್ದ ಸದನ್ ಚಂಗಪ್ಪ ಅವರ ಪುತ್ರ ಶ್ರೇಯಸ್ ಮಾದಪ್ಪ ಪವಾಡ ಸದೃಶ ರೀತಿಯಲ್ಲಿ ಸಣ್ಣಪುಟ್ಟ ಗಾಯಗಳಿಂದ ಅಪಾಯದಿಂದ ಪಾರಾಗಿದ್ದಾರೆ. ಗಾಯಾಳುವಿಗೆ ಗೋಣಿಕೊಪ್ಪ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಗೋಣಿಕೊಪ್ಪ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ವಿಜೃಂಭಣೆಯ ಶ್ರೀ ಮುತ್ತಪ್ಪ ತೆರೆ ಮಹೋತ್ಸವ

ಕುಶಾಲನಗರ, ಫೆ.13– ಇಲ್ಲಿನ ಶ್ರೀ ಮುತ್ತಪ್ಪ ದೇವಾಲಯದ ತೆರೆ ಮಹೋತ್ಸವದ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು. ಕುಶಾಲನಗರ ಬೈಚನಹಳ್ಳಿ ಯೋಗಾನಂದ ಬಡಾವಣೆಯಲ್ಲಿರುವ ದೇವಾಲಯದಲ್ಲಿ ಬೆಳಗ್ಗೆ ಗಣಪತಿ ಹೋಮ, ನಂತರ ಧ್ವಜಾರೋಹಣ ನಡೆಯಿತು.

ಎರಡು ದಿನಗಳ ಕಾಲ ನಡೆಯಲಿರುವ ತೆರೆ ಮಹೋತ್ಸವ ಅಂಗವಾಗಿ ಕುಶಾಲನಗರ ಅಯ್ಯಪ್ಪ ಸ್ವಾಮಿ ದೇವಾಲಯ ಬಳಿ ಕಾವೇರಿ ನದಿಗೆ ಪೂಜೆ ಸಲ್ಲಿಸಿ ನಂತರ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಮೂಲಕ ತೆರಳಿ ಮುತ್ತಪ್ಪ ದೇವಾಲಯ ತನಕ ಸಾಗಿದರು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು. ಮುತ್ತಪ್ಪ ಸೇವಾ ಟ್ರಸ್ಟ್ ಅಧ್ಯಕ್ಷ ಹರೀಂದ್ರನ್, ಉಪಾಧ್ಯಕ್ಷ ಆರ್. ಚಂದ್ರ, ರಾಜೇಶ್,



ಬಳಪಂಡ ಪೊನ್ನು ಅವರ ನೇತೃತ್ವದಲ್ಲಿ ಸಂಜೆ ಮುತ್ತಪ್ಪನ ವೆಲ್ಲಾಟಮ್, ತಾಲಪೊಲಿ ಸಿಡಿಮದ್ದು ಪ್ರದರ್ಶನ ನಂತರ ಅನ್ನದಾನ ಕಾರ್ಯಕ್ರಮ ಜರುಗಿತು. ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಆಟೋರಿಕ್ಷಾ ಮಗುಚಿ ಮಹಿಳೆ ಸಾವು

ಕುಶಾಲನಗರ, ಫೆ.13– ಸಮೀಪದ ಕೂಡ್ಲೂರು ಬಳಿ ಹಾಸನ –ಮಡಿಕೇರಿ ರಾಜ್ಯ ಹೆದ್ದಾರಿಯಲ್ಲಿ ಆಟೋರಿಕ್ಷಾ ಮಗುಚಿ ಮಹಿಳೆಯೋರ್ವಳು ಮೃತಪಟ್ಟ ಘಟನೆ ಸೋಮವಾರ ನಡೆದಿದೆ. ಆಟೋದಲ್ಲಿ ಪ್ರಯಾಣಿಸುತ್ತಿದ್ದ ಕೆ.ಆರ್.ನಗರ ತಾಲೂಕಿನ ಕೊರಟಗೆರೆ ಗ್ರಾಮದ ಪಂಕಜಮ್ಮ (55) ಮೃತ ದುರ್ದೈವಿ. ಇವರ ಜೊತೆ ಪ್ರಯಾಣಿಸುತ್ತಿದ್ದ ಮೃತರ ಸಹೋದರಿಯರಾದ ಕೂಡಿಗೆಯ ಲೀಲಾವತಿ ಮತ್ತು ವಿಜಯಲಕ್ಷ್ಮಿ ಎಂಬುವರಿಗೆ ಗಾಯಗಳಾಗಿದ್ದು, ಮಡಿಕೇರಿ ಜಿಲ್ಲಾ ಕೇಂದ್ರ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಗಿದೆ. ಪಂಕಜಮ್ಮ ಸೇರಿದಂತೆ ಅವರ ಮಗ ಮತ್ತು ಅವರ ಇಬ್ಬರು ತಂಗಿಯಂದಿರು ಕುಶಾಲನಗರಕ್ಕೆ ಪ್ರಯಾಣದ ಮಾಡುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಶ್ವ ರೈತ ಚೇತನ ಪ್ರೊ ಎಂಡಿಎನ್ ಅವರ 87ನೇ ಜನ್ಮ ದಿನಾಚರಣೆ

ಪ್ರೊ. ನಂಜುಂಡಸ್ವಾಮಿಯವರ ರೈತ ಚಳವಳಿಗೆ ಮರುಹುಟ್ಟು ನೀಡಿ

ರಾಷ್ಟ್ರೀಯ ರೈತ ಮುಖಂಡ ಯೋಗೇಂದ್ರಯಾದವ್ ಕರೆ



ಚಾಮರಾಜನಗರ, ಫೆ.13– ಕೃಷಿಕರಿಗೆ ಮಾರಕವಾಗಿದ್ದ ವಿಶ್ವ ವ್ಯಾಪಾರ ಒಪ್ಪಂದದ ಮತ್ತೊಂದು ಮುಖವಾಗಿರುವ ಎಫ್‌ಟಿಎ (ಫ್ರೀಟ್ರೇಡ್ ಅಗ್ರಿಮೆಂಟ್) ಅನ್ನು ದೂರವಿರಿಸುವುದು ನಂಜುಂಡಸ್ವಾಮಿ ಅವರ ಹೋರಾಟದ ಮುಖ್ಯ ಗುರಿಯಾಗಿತ್ತು ಎಂದು ರಾಷ್ಟ್ರೀಯ ರೈತ ಮುಖಂಡ ಯೋಗೇಂದ್ರ ಯಾದವ್ ತಿಳಿಸಿದರು.

ನಗರದ ನಂದಿಭವನದಲ್ಲಿ ರಾಜ್ಯ ರೈತ ಸಂಘದಿಂದ ನಡೆದ ವಿಶ್ವ ರೈತ ಚೇತನ ಪ್ರೊ ಎಂಡಿಎನ್ ಅವರ 87ನೇ ಜನ್ಮ ದಿನಾಚರಣೆ ಅಂಗವಾಗಿ ನಡೆದ ಯುವ ರೈತ ಘಟಕ ಕಾರ್ಯಕ್ರಮಕ್ಕೆ ಜಿಲ್ಲೆಯ ನಾನಾ ಜಿಲ್ಲೆಗಳ ಯುವ ರೈತ ಘಟಕದ ಸಂಚಾಲಕರಿಗೆ ಬಾವುಟ ವಿತರಿಸಿ ಮಾತನಾಡಿದರು.

ಉತ್ತರ ಭಾರತದಲ್ಲಿ ರೈತ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದ ಕಿಶನ್ ಪಟ್ನಾಯಕ್ ಅವರಂತೆ ನಂಜುಂಡಸ್ವಾಮಿ ಅವರು ಒಂದೇ ನೆಲೆಯಲ್ಲಿ ಚಿಂತನೆ ಮಾಡಿದವರು. 80ರ ದಶಕದಲ್ಲಿ ಸರಕಾರ ಗ್ಯಾಟ್, ಡಂಕಲ್ ಪ್ರಸ್ತಾವನೆಗೆ ಸಹಿ ಹಾಕಿದಾಗ ಕೃಷಿಯ ಅಸ್ತಿತ್ವ ಮುಗಿಯುವ ಸಂದರ್ಭ ಎದುರಾಯಿತು. ಅದನ್ನು ವಿರೋಧಿಸಿ ಹೋರಾಟಕ್ಕಿಳಿದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರು, ಮಹಾರಾಷ್ಟ್ರದ ಶರದ್ ಜೋಶಿ ಎಂಬವರು ದೇಶದೊಳಗೆ ಬಹುರಾಷ್ಟ್ರೀಯ ಕಂಪನಿಗಳು ಬಂದಲ್ಲಿ ದೇಶ ಅಭಿವೃದ್ಧಿಯತ್ತ ಸಾಗಲಿದೆ ಎಂದಿದ್ದರು. ಆ ಸಂದರ್ಭದಲ್ಲಿ ನಂಜುಂಡಸ್ವಾಮಿ ಬಹುರಾಷ್ಟ್ರೀಯ ಕಂಪನಿಗಳು ದೇಶದ ಅಭಿವೃದ್ಧಿಗೆ ಮಾರಕವೇ ಹೊರತು ಪೂರಕವಲ್ಲ ಎಂದು ಹೋರಾಟಕ್ಕಿಳಿದರು ಎಂದರು.

ಪ್ರತಿವರ್ಷ ಅವರ ಜಯಂತಿ ಆಚರಣೆ, ಪುಸ್ತಕಗಳ ಬಿಡುಗಡೆ ಮಾಡುವುದು ಇದ್ದೇ ಇದೆ. ಆಚರಣೆಗಳನ್ನು ಕಡಿಮೆ ಮಾಡುವ ಮೂಲಕ ಹೋರಾಟಗಳನ್ನು ಹೆಚ್ಚಳ ಮಾಡುವುದು ಯುವ ರೈತರ ಮೇಲಿದೆ ಎಂದು ಕಿವಿಮಾತು ಹೇಳಿದರು. ಕೇಂದ್ರ ಸರಕಾರ ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಒಂದೂವರೆ ವರ್ಷಗಳ ಕಾಲ ರೈತರು ಹೋರಾಟ ಮಾಡಿದರು. ಹೋರಾಟದಿಂದ ರೈತರ ಒಗ್ಗಟ್ಟು ಪ್ರದರ್ಶನವಾಯಿತೇ ಹೊರತು ಕಾಯ್ದೆ ವಾಪಸ್ ಆಗಿದ್ದರಿಂದ ರೈತರ ಸ್ಥಿತಿ ಬದಲಾಗಲಿಲ್ಲ. ಯುವ ಘಟಕದ ಕಾರ್ಯಕರ್ತರು ತಮ್ಮ ಹೋರಾಟದ ಹಾದಿಯನ್ನು ಚಾಮರಾಜನಗರದಿಂದಲೇ ಆರಂಭಿಸಬೇಕು ಎಂದರು.

ಆಶಯನುಡಿಗಳನ್ನಾಡಿದ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಇಂದಿನ ದಿನಗಳಲ್ಲಿ ರೈತರ ಹೋರಾಟಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಯುವಕರು ಚಳವಳಿಗಳತ್ತ ಮುಖ ಮಾಡಬೇಕು. ಯುವಕರಿಂದ ಮಾತ್ರ ರೈತ ಚಳವಳಿ ಉಳಿಯಲು ಸಾಧ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ನಾನಾ ಜಿಲ್ಲೆಗಳ ಯುವ ರೈತ ಘಟಕದ ಸಂಚಾಲಕರಿಗೆ ರೈತ ಬಾವುಟ ವಿತರಿಸಿ, ಪ್ರತಿಜ್ಞಾವಿಧಿ ಬೋಧಿಸಲಾಯಿತು.

ದೀಪಕ್ ಲಂಬು ಸೇರಿದಂತೆ ಯುವ ರೈತ ಮುಖಂಡರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಯುವ ರೈತ ಹೋರಾಟಗಾರ ಮಳವಳ್ಳಿ ಪೃಥ್ವಿರಾಜ್, ರೈತ ಸಂಘದ ಉಪಾಧ್ಯಕ್ಷ ಎ.ಎಂ.ಮಹೇಶ್‌ಪ್ರಭು, ಕರ್ನಾಟಕ ಸರ್ವೋದಯ ಪಕ್ಷದ ರಾಜ್ಯಾಧ್ಯಕ್ಷ ಚಾಮರಸ ಮಾಲಿಗೌಡ ಪಾಟೀಲ್ ಸೇರಿದಂತೆ ಜಿಲ್ಲಾ ಪದಾಧಿಕಾರಿಗಳು, ರಾಜ್ಯದ ನಾನಾ ಜಿಲ್ಲೆಗಳ ರೈತ ಮುಖಂಡರು, ಯುವ ಕೃಷಿಕರು ಭಾಗವಹಿಸಿದ್ದರು

ನಗರದಲ್ಲಿ ಅದ್ದೂರಿ ಮೆರವಣಿಗೆ

ಚಾಮರಾಜನಗರ, ಫೆ.13– ವಿಶ್ವ ರೈತ ಚೇತನ ಪ್ರೊ. ಎಂಡಿಎನ್ ಅವರ 87ನೇ ಜನ್ಮ ದಿನಾಚರಣೆ ಅಂಗವಾಗಿ ನಗರದಲ್ಲಿ ಎಂಡಿಎನ್ ಅವರ ಭಾವ ಚಿತ್ರದ ಅದ್ದೂರಿ ಮೆರವಣಿಗೆ ನಡೆಯಿತು.

ನಗರದ ಪ್ರವಾಸಿಮಂದಿರದ ಆವರಣದಲ್ಲಿ ಕರ್ನಾಟಕ ಸರ್ವೋದಯ ಪಕ್ಷದ ಅಧ್ಯಕ್ಷ ಚಾಮರಸ ಮಾಲೀಗೌಡ ಪಾಟೀಲ್ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ನಗರದ ಪ್ರಮುಖ ಬೀದಿಗಳಲ್ಲಿ ಎಂಡಿಎನ್ ಅವರ ಭಾವಚಿತ್ರದ ಅದ್ದೂರಿ ಮೆರವಣಿಗೆ ರೈತ ಮುಖಂಡರ ನೇತೃತ್ವದಲ್ಲಿ ನಡೆಯಿತು. ನಾನಾ ಗ್ರಾಮಗಳ ಟ್ರಾಕ್ಟರ್‌ಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಮುಣಚನಹಳ್ಳಿ ಬಳಿಯ ತೆಂಗು ಸಂಸ್ಕರಣಾ ಘಟಕದಲ್ಲಿ ಎಂಡಿಎನ್ ಅವರ ಪುತ್ಥಳಿಗೆ ರೈತ ಮುಖಂಡರು ಮಾಲಾರ್ಪಣೆ ಮಾಡಿದರು.

ಚಾ.ನಗರದಲ್ಲಿ ಸಾವಯವ ರೈತ ಸಂತೆಗೆ ಚಾಲನೆ



ಚಾಮರಾಜನಗರ, ಫೆ.13– ಚಾಮರಾಜನಗರದ ಜಿಲ್ಲಾ ನ್ಯಾಯಾಲಯ ರಸ್ತೆಯ ಸಮೀಪದಲ್ಲಿರುವ 'ನಮ್ದು' ಅಂಗಡಿ ಮಳಿಗೆ ಆವರಣದಲ್ಲಿ ಸಾವಯವ ರೈತ ಸಂತೆಗೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ನಮ್ದು ರೈತ ಉತ್ಪಾದಕ ಕಂಪನಿ, ಜಲಾನಯನ ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ ಪ್ರಾರಂಭವಾಗಿರುವ 'ಸಾವಯವ ರೈತಸಂತೆ'ಯೂ ರಾಸಾಯನಿಕ ಮುಕ್ತ ವಸ್ತುಗಳ ಪ್ರದರ್ಶನ ಮತ್ತು ಮಾರಾಟದಿಂದ ಎಲ್ಲರ ಗಮನ ಸೆಳೆಯಿತು.

ಸಾವಯವ ಅಡುಗೆಎಣ್ಣೆ, ಹರಳೆಣ್ಣೆ, ಬೀಜದುಂಡೆಗಳು, ಹಲವು ಬಗೆಯ ತರಕಾರಿ, ಸೊಪ್ಪುಗಳನ್ನು ಮಾರಾಟಕ್ಕಿಡಲಾಗಿತ್ತು. ಗ್ರಾಹಕರು ವಸ್ತುಗಳನ್ನು ವೀಕ್ಷಿಸುವುದರ ಜೊತೆ ಖರೀದಿಸಿದರು.

ಈ ವೇಳೆ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿದ ಬೆಳಗಾಂನ ಸಾವಯವ ಕೃಷಿತಜ್ಞ ಸುರೇಶ್.ಬಿ.ದೇಸಾಯಿ ಮಾತನಾಡಿ, ಹೆಚ್ಚಿನ ಇಳುವರಿ ಆಸೆಯಿಂದ ರೈತರು ಭೂಮಿಗೆ ಅತಿಯಾದ ರಾಸಾಯನಿಕ ಬಳಕೆ ಮಾಡಿ, ಪರಿಸರ ಹಾಳಾಗುವುದರ ಜೊತೆಗೆ ಭೂಮಿಯ ಫಲವತ್ತತೆಯನ್ನು ನಾಶ ಮಾಡುವ ಹಂತ ತಲುಪಿದ್ದಾರೆ. ಇದರಿಂದ ರೈತರು ಪಾರಾಗಬೇಕಾದರೆ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರು ಕಂಡ 30ವರ್ಷದ ಕನಸಾದ ಬೀಜ ಸ್ವಾತಂತ್ರ್ಯ, ನೇರ ಮಾರುಕಟ್ಟೆ ಸೃಷ್ಟಿಸುವ ಚಿಂತನೆ ಸಾಕಾರಗೊಳ್ಳಬೇಕಿದೆ ಎಂದರು.

ಇದೇ ವೇಳೆ ರೈತ ಉತ್ಪಾದಕ ಕಂಪನಿ ನೋಂದಣಿ ಪತ್ರ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಮಾತನಾಡಿ, ಜಗತ್ತಿನಾದ್ಯಂತ ಸಂಚಲನ ಸೃಷ್ಟಿಸಿರುವ ಸಾಫ್ಟ್‌ವೇರ್ ಆಧಾರಿತ ಕಂಪನಿಗಳ ಮಾರುಕಟ್ಟೆಯನ್ನು ಒಬ್ಬ ವ್ಯಕ್ತಿ ನಿಯಂತ್ರಣ ಮಾಡುತ್ತಾನೆ. ಆದರೆ ಪ್ರೊ. ಎಂಡಿಎನ್ ಅವರು 30 ವರ್ಷದ ಹಿಂದೆ ಬೀಜ ಸ್ವಾತಂತ್ರ್ಯ, ರೈತಬೆಳೆದ ಬೆಳೆಗಳಿಗೆ ಆತನೆ ಮಾರುಕಟ್ಟೆ ಸೃಷ್ಟಿ ಮಾಡಿಕೊಳ್ಳಬೇಕು ಎಂಬ ಚಿಂತನೆ ಇನ್ನು ನನಸಾಗದಿರುವುದು ವಿಷಾದನೀಯ ಎಂದರು.

ಕಾರ್ಯಕ್ರಮದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಚಿಕ್ಕಸ್ವಾಮಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಧುಸೂದನ್, ನಮ್ದು ಮಳಿಗೆ ವ್ಯವಸ್ಥಾಪಕ ಹರೀಶ್, ರೈತ ಸಂಘದ ಪದಾಧಿಕಾರಿಗಳು ಇದ್ದರು.

ಮಹಾಶಿವರಾತ್ರಿ ಜಾತ್ರೆ ವೇಳೆ ಮಲೆ ಮಹದೇಶ್ವರ ಬೆಟ್ಟಕ್ಕೆ ದ್ವಿಚಕ್ರ ವಾಹನಗಳ ನಿಷೇಧ: ಜಿಲ್ಲಾಧಿಕಾರಿ ಆದೇಶ

ಚಾಮರಾಜನಗರ, ಫೆ.13– ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಫೆಬ್ರವರಿ 17 ರಿಂದ 21ರವರೆಗೆ ಜರುಗಲಿರುವ ಮಹಾಶಿವರಾತ್ರಿ ಜಾತ್ರೆ ವೇಳೆ ಮಲೈ ಮಹದೇಶ್ವರ ಬೆಟ್ಟಕ್ಕೆ ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಆದೇಶ ಹೊರಡಿಸಿದ್ದಾರೆ.



ಮಲೆ ಮಹದೇಶ್ವರ ಬೆಟ್ಟಕ್ಕೆ ಮಹಾಶಿವರಾತ್ರಿ ಜಾತ್ರೆ ವೇಳೆ ಜಿಲ್ಲೆ–ಹೊರ ಜಿಲ್ಲೆಗಳಿಂದ ಲಕ್ಷಾಂತರ ಭಕ್ತಾದಿಗಳು ಸೇರುವ ಸಂಭವವಿದ್ದು, ವಾಹನ ದಟ್ಟಣೆ ಹೆಚ್ಚಾಗುವುದರಿಂದ ಸದರಿ ರಸ್ತೆಯು ಅರಣ್ಯ ಪ್ರದೇಶ ಹಾಗೂ ತುಂಬಾ ಕಡಿದಾದ ತಿರುವುಗಳಿಂದ ಕೂಡಿದೆ. ಸದರಿ ರಸ್ತೆಯ ಸಂಚಾರದಲ್ಲಿ ವಾಹನಗಳ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ಮಲೈ ಮಹದೇಶ್ವರಬೆಟ್ಟಕ್ಕೆ ಜಾತ್ರೆಗಾಗಿ ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ಫೆಬ್ರವರಿ 17ರ ಬೆಳಗ್ಗೆ 6 ರಿಂದ ಫೆ.21ರ ಸಂಜೆ 7 ಗಂಟೆಯವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಿರುವುದಾಗಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಆದೇಶದಲ್ಲಿ ತಿಳಿಸಿದ್ದಾರೆ. ಹನೂರು ತಾಲೂಕಿನ ಕೌದಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ.

ದನದ ಮಾಂಸ ಮಾರಾಟ: ಇಬ್ಬರ ಬಂಧನ

ಚಾಮರಾಜನಗರ, ಫೆ.13– ನಗರದಲ್ಲಿ ಅಕ್ರಮವಾಗಿ ದನದ ಮಾಂಸ ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ಪೊಲೀಸರು ಹಾಗೂ ನಗರಸಭೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ.

ನಗರದ ಸುಲೇಮನ್(24), ನೈಮತ್‌ಉಲ್ಲಾ(40) ಬಂಧಿತ ಆರೋಪಿಗಳು. ಇವರಿಂದ 136 ಕೆಜಿ ದನದ ಮಾಂಸ ವಶಪಡಿಸಿಕೊಳ್ಳಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಘಟನೆ ವಿವರ: ನಗರದ ಕೆಲವು ಅಂಗಡಿಗಳಲ್ಲಿ ಅಕ್ರಮವಾಗಿ ದನದ ಮಾಂಸ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಅಧಿಕಾರಿಗಳು ನಗರದ ವಿವಿಧ ಅಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಿದರು.

ಈ ವೇಳೆ ಅಕ್ರಮವಾಗಿ ದನದ ಮಾಂಸ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೋ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಮಾ.1 ರಿಂದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಕಾರ್ಮಿಕರ ಮುಷ್ಕರ



ಚಾಮರಾಜನಗರ, ಫೆ.13– ಸರ್ಕಾರದ ವೇತನ ಮಂಡಳಿ ಆದೇಶದಂತೆ ವೇತನ ಜಾರಿ ಮಾಡಲು ಅನಗತ್ಯ ವಿಳಂಬ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಾ.1 ರಿಂದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘ ಮುಷ್ಕರ ನಡೆಸಲಿದೆ ಎಂದು ಸಂಘದ ಗೌರವ ಅಧ್ಯಕ್ಷ ಚಂದ್ರಶೇಖರ್ ಮೇಟಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ಟೋಬರ್ 1–2018 ರಿಂದ ಮಾರ್ಚ್–31–2022ರ ಅವಧಿಯ ಬೇಡಿಕೆಗಳನ್ನು ಈಡೇರಿಸುವಂತೆ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಕೊಡಲಾಗಿದೆ. ಜಿಲ್ಲಾಧಿಕಾರಿಗಳು ಕೂಡ ಸಭೆ ನಡೆಸಿ ಕಾರ್ಖಾನೆ ಮ್ಯಾನೇಜ್‌ಮೆಂಟ್‌ನೊಂದಿಗೆ ಶೀಘ್ರದಲ್ಲೇ ಕಾರ್ಮಿಕರು ಬೇಡಿಕೆ ಈಡೇರಿಸುವಂತೆ ತಿಳಿಸಿದರೂ ಕೂಡ ಕಾರ್ಖಾನೆಯವರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು.

ತಮಿಳುನಾಡಿನಲ್ಲಿ ಕೊಡುವ ಮಾದರಿಯಲ್ಲೇ ವೇತನ ಕೊಡುವುದಾಗಿ ಹಠ ಹಿಡಿದಿದ್ದಾರೆ. ನಮಗೆ ಕರ್ನಾಟಕದ ಮಾದರಿಯಲ್ಲೇ ನೀಡಬೇಕು ಎಂದು ಒತ್ತಾಯ ಮಾಡಲಾಗಿದೆ. ನಮ್ಮ ಬೇಡಿಕೆಗಳ ಈಡೇರಿಸುವಲ್ಲಿ ಕಾರ್ಖಾನೆ ವಿಳಂಬ ಮಾಡುತ್ತಿದೆ ಇದರಿಂದ ಕಾರ್ಮಿಕರಿಗೆ ಸಮಸ್ಯೆಯಾಗಿದೆ ಕೂಡಲೇ ಕಾರ್ಮಿಕರ ಬೇಡಿಕೆ ಈಡೇರಿಸುವ ತನಕ ಮುಷ್ಕರ ನಡೆಸಲು ಸಂಘ ನಿರ್ಧರಿಸಿದೆ. ರೈತರು ಸಹಕರಿಸಿ ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಬೇಕು ಎಂದು ಚಂದ್ರಶೇಖರ ಮೇಟಿ ಮನವಿ ಮಾಡಿದರು.

ಸಂಘದ ಅಧ್ಯಕ್ಷ ಭೃಂಗೇಶ್ ಮಾತನಾಡಿ, ಮೂಲಸೌಕರ್ಯಗಳಲ್ಲಿ ಒಂದಾದ ಕ್ವಾಟ್ರಸ್‌ನ್ನು ಕೂಡ ಕೊಟ್ಟಿಲ್ಲ. ಕಾರ್ಖಾನೆಯಲ್ಲಿ ಕರ್ನಾಟಕದ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ತಮಿಳುನಾಡಿನ ಆಹಾರ ಪದ್ಧತಿ ಕೊಡುತ್ತಿರುವುದು ಸಮಸ್ಯೆಯಾಗಿದೆ. ಆದ್ದರಿಂದ ಕರ್ನಾಟಕ ಆಹಾರ ಪದ್ಧತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಜಶೇಖರಮೂರ್ತಿ, ಉಪಾಧ್ಯಕ್ಷ ಪುಟ್ಟಸ್ವಾಮಿ, ಜಂಟಿ ಕಾರ್ಯದರ್ಶಿ ಸಿ.ಹರೀಶ್ ಕುಮಾರ್, ಖಜಾಂಚಿ ವೈ.ಎಂ.ಬಸವರಾಜು ಹಾಜರಿದ್ದರು.

ಕಾಡಾನೆ ಹಾವಳಿ ತಡೆಗೆ ಕಂಟ್ರೋಲ್ ರೂಂ

ಚಾಮರಾಜನಗರ, ಫೆ.13– ಜಿಲ್ಲೆಯ ಯಾವುದೇ ಭಾಗದಲ್ಲಿ ಕಾಡಾನೆ ಹಾವಳಿ ಕಂಡುಬಂದಲ್ಲಿ ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ಕಚೇರಿಯಲ್ಲಿ ತೆರೆಯಲಾಗಿರುವ ಕಂಟ್ರೋಲ್ ರೂಂ ಸಹಾಯವಾಣಿ ಸಂಖ್ಯೆ 9480500131 ಗೆ ಕರೆ ಮಾಡಿದಲ್ಲಿ ಕೂಡಲೇ ಕಾಡಾನೆ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಕೊಳ್ಳೇಗಾಲದ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

ಇಂದು ನಗರದಲ್ಲಿ ಮಕ್ಕಳ ಭಾವೈಕ್ಯತೆಯ ಮೇಳ

ಚಾಮರಾಜನಗರ, ಫೆ.13– ಭಾರತ ಸೇವಾದಳ, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಮಕ್ಕಳ ಭಾವೈಕ್ಯತಾ ಮೇಳವನ್ನು ಫೆಬ್ರವರಿ 14 ರಂದು ಬೆಳಗ್ಗೆ 9 ರಿಂದ ಸಂಜೆ 4.30 ಗಂಟೆಯವರೆಗೆ ನಗರದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 9 ಗಂಟೆಗೆ ನಗರದ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಚಾಮರಾಜನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ ಅವರು ಧ್ವಜಾರೋಹಣ ನೆರವೇರಿಸುವರು. ಬೆಳಗ್ಗೆ 9.30 ಗಂಟೆಗೆ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಆರ್. ಶಂಕರ್ ಅವರು ಪ್ರಭಾತ್ ಪೇರಿಗೆ ಚಾಲನೆ ನೀಡುವರು. ಬೆಳಗ್ಗೆ 10.30 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿರುವ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ.

ಭಾರತ ಸೇವಾದಳದ ಜಿಲ್ಲಾಧ್ಯಕ್ಷ ಬಿ.ವಿ. ವೆಂಕಟನಾಗಪ್ಪಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಭಾರತ ಸೇವಾದಳದ ತಾಲೂಕು ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ 12 ರಿಂದ 1.30 ಗಂಟೆಯವರೆಗೆ ಸೇವಾದಳದ ಮಕ್ಕಳಿಂದ ಸಾಮೂಹಿಕ ಗೀತಗಾಯನ, ಯೋಗ, ಕವಾಯತು ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಮಧ್ಯಾಹ್ನ 2.30 ಗಂಟೆಗೆ ಮೈಸೂರಿನ ಜಗ್ಗು ಜಾದೂಗಾರ ಇವರಿಂದ ಜಾದೂ ಪ್ರದರ್ಶನ ಏರ್ಪಡಿಸಲಾಗಿದೆ. ಬಳಿಕ ಸಮಾರೋಪ ಸಮಾರಂಭ ನಡೆಯಲಿದೆ.

ಒಂದನೇ ಪುಟದಿಂದ

10 ಮಂದಿ ಕುಖ್ಯಾತ ಕ್ರಿಮಿನಲ್‌ಗಳ ಬಂಧನ

ಕೆಟಿಎಂ ಡ್ಯೂಕ್ ಬೈಕ್ (ಕೆಎ 01-ಹೆಚ್‌ಎಲ್ 2676), ಯಮಹಾ ಆರ್‌ಎಕ್ಸ್ (ಕೆಎ 01-ಜೆಎಲ್ 7528), ಹೋಂಡಾ ಡಿಯೋ (ಕೆಎ 11-ಇಜಿ 8495), ಐದು ಡ್ರ್ಯಾಗರ್, ಮೂರು ಲಾಂಗ್‌ಗಳು, 11 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅಪಹರಣಕಾರರು ವೃತ್ತಿನಿರತ ಕ್ರಿಮಿನಲ್‌ಗಳಾಗಿದ್ದು, ಹಲವಾರು ದುಷ್ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ ಎಂದು ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ತಿಳಿಸಿದರು. ಬಂಧಿತರಲ್ಲಿ ಪ್ರಮುಖ ಆರೋಪಿ ಮಂಡ್ಯ ಜಿಲ್ಲೆಯ ಚಂದಗಾಲು, ಬಸವಣ್ಣ ಅಲಿಯಾಸ್ ಖಾರದಪುಡಿ ಬಸವ ಕೊಲೆ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದು, 11 ವರ್ಷ ಜೈಲು ವಾಸ ಅನುಭವಿಸಿ, ಬಿಡುಗಡೆಯಾಗಿದ್ದ. ಆನಂತರವೂ ಆತ ದುಷ್ಕೃತ್ಯಗಳಲ್ಲಿ ತೊಡಗಿದ್ದು, ಈತನ ವಿರುದ್ಧ ಮಂಡ್ಯ ಪೂರ್ವ, ಪಶ್ಚಿಮ, ಶಿವಳ್ಳಿ, ಕೆ.ಆರ್. ಪೇಟೆ, ಮೈಸೂರಿನ ಮೇಟಗಳ್ಳಿ, ಮಂಡಿ ಠಾಣೆಗಳಲ್ಲಿ ಕೊಲೆ, ಸಶಸ್ತ್ರ ಕಾಯ್ದೆ ಸೇರಿದಂತೆ ಹಲವಾರು ಕಾಲಂಗಳಡಿ 9 ಪ್ರಕರಣಗಳು ದಾಖಲಾಗಿವೆ. ಕುಣಿಗಲ್ ಅಭಿ ವಿರುದ್ಧ ಮಂಡ್ಯ ಜಿಲ್ಲೆಯ ಶಿವಳ್ಳಿ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದ್ದರೆ, ಪ್ರಮೋದ್ ಅಲಿಯಾಸ್ ಕಾಡ ವಿರುದ್ಧ ಮಂಡ್ಯ ಪಶ್ಚಿಮ, ಶಿವಳ್ಳಿ, ಪಾಂಡವಪುರ, ರಾಮನಗರ ಜಿಲ್ಲೆಯ ಕಗ್ಗಲಿಪುರ ಠಾಣೆಗಳಲ್ಲಿ 5 ಪ್ರಕರಣಗಳು, ಶಶಿಧರ್ ಅಲಿಯಾಸ್ ಬಾತು ವಿರುದ್ಧ ಮಂಡ್ಯ ಗ್ರಾಮಾಂತರ, ಶಿವಳ್ಳಿ, ಪಾಂಡವಪುರ, ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆಗಳಲ್ಲಿ ಕಳವು ಪ್ರಕರಣಗಳು ದಾಖಲಾಗಿವೆ. ರಾಹುಲ್ ಅಲಿಯಾಸ್ ಬಬ್ಲು ಮತ್ತು ಚಂದ್ರು ವಿರುದ್ಧ ಬನ್ನೂರು ಠಾಣೆಯಲ್ಲಿ ಹಲ್ಲೆ ಪ್ರಕರಣ ದಾಖಲಾಗಿದೆ ಎಂದು ಎಸ್ಪಿ ತಿಳಿಸಿದರು.

ಪ್ರಕರಣದ ವಿವರ: ನಂಜನಗೂಡು ತಾಲೂಕು ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹರ್ಷ ಇಂಪೆಕ್ಸ್ ಕಾರ್ಖಾನೆಯ ಕಾರ್ಮಿಕರನ್ನು ಮಾರಕಾಸ್ತ್ರಗಳಿಂದ ಬೆದರಿಸಿ, ಗೋಡೌನ್‌ನಲ್ಲಿ ಕೂಡಿಹಾಕಿ, ಫೆಬ್ರವರಿ 6ರಂದು ಮಧ್ಯಾಹ್ನ 12.50ರ ಸುಮಾರಿನಲ್ಲಿ ಕಾರ್ಖಾನೆಯ ಮಾಲೀಕ ದೀಪಕ್ ಮತ್ತು ಅವರ ಪುತ್ರ ಹರ್ಷನನ್ನು ಅವರದೇ ಕಾರಿನ ಸಮೇತ ದುಷ್ಕರ್ಮಿಗಳು ಅಪಹರಿಸಿದ್ದರು. ಅಪಹರಣಕಾರರು ಒಂದು ಕೋಟಿ ರೂ. ಒತ್ತೆ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಅಪಹರಣ ವಿಚಾರ ತಿಳಿಯುತ್ತಿದ್ದಂತೆಯೇ ಜಿಲ್ಲಾ ಪೊಲೀಸರು, ಸಂಪರ್ಕ ರಸ್ತೆಗಳಲ್ಲಿ ಬ್ಯಾರಿಕೇಡ್ ಹಾಕಿ ಶೋಧನಾ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಆದರೆ, ಅಪಹರಣಕಾರರು ಮೈಸೂರಿನ ಸುತ್ತೂರು ಮಠದ ಬಳಿ ದೀಪಕ್ ಅವರ ಕಾರನ್ನು ಬಿಟ್ಟು ತಂದೆ ಹಾಗೂ ಮಗನನ್ನು ತಮ್ಮ ಕಾರಿನಲ್ಲಿ ಕರೆದೊಯ್ದಿದ್ದರು. ಇತ್ತ ಗಡಿಯಲ್ಲಿ ಪೊಲೀಸರು, ಶೋಧನಾ ಕಾರ್ಯಾಚರಣೆಯಲ್ಲಿ ತೊಡಗಿದ್ದರೆ ಅತ್ತ ಅಪಹರಣಕಾರರು ಬುದ್ಧಿವಂತಿಕೆಯಿಂದ ಮೈಸೂರು ನಗರ ವ್ಯಾಪ್ತಿಯಲ್ಲೇ ಸುತ್ತಾಡುತ್ತಾ, ದೀಪಕ್ ಮೊಬೈಲ್ ಮೂಲಕವೇ ಅವರ ಸಂಬಂಧಿಕರನ್ನು ಸಂಪರ್ಕಿಸುವಂತೆ ಮಾಡಿ, ಸಂಜೆ ವೇಳೆಗೆ 35 ಲಕ್ಷ ರೂ. ಒತ್ತೆ ಹಣ ಪಡೆದು ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಜಲಮಹಲ್ ರೆಸಾರ್ಟ್ ಬಳಿ ತಂದೆ ಹಾಗೂ ಮಗನನ್ನು ಅಂದು ಸಂಜೆ 6 ಗಂಟೆ ಸುಮಾರಿನಲ್ಲಿ ಬಿಡುಗಡೆ ಮಾಡಿದ್ದರು.

ಒತ್ತೆಯಾಳುಗಳನ್ನು ಅಪಹರಣಕಾರರು ಜಲಮಹಲ್ ರೆಸಾರ್ಟ್ ಬಳಿ ಕಾರಿನಲ್ಲಿ ಇರಿಸಿಕೊಂಡಿದ್ದರೆ, ಅಪಹರಣಕಾರರ ಮತ್ತೊಂದು ತಂಡ ದ್ವಿಚಕ್ರ ವಾಹನದಲ್ಲಿ ಬೇರೊಂದು ಕಡೆ ದೀಪಕ್‌ರವರ ಸಂಬಂಧಿಕರಿಂದ ಒತ್ತೆ ಹಣ ಪಡೆದು, ಕಾರಿನಲ್ಲಿದ್ದವರಿಗೆ ಮೊಬೈಲ್ ಮೂಲಕ ಮಾಹಿತಿ ರವಾನಿಸಿದ ನಂತರ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿತ್ತು. ಅಂದು ರಾತ್ರಿ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಂತರ ಅಪಹರಣಕಾರರ ಪತ್ತೆಗಾಗಿ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಅವರು, ಎಎಸ್ಪಿ ಡಾ. ನಂದಿನಿ ಮಾರ್ಗದರ್ಶನದಲ್ಲಿ ನಂಜನಗೂಡು ಉಪವಿಭಾಗದ ಡಿವೈಎಸ್ಪಿ ಗೋವಿಂದರಾಜು ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜ ಶೆಟ್ಟಿ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಿದ್ದರು.

ವರ್ಷದ ಹಿಂದಿನ ಬೆದರಿಕೆ ಕರೆಯ ಜಾಡು: ವಿಶೇಷ ತಂಡವು ದೀಪಕ್ ಅವರನ್ನು ವಿಚಾರಣೆಗೊಳಪಡಿಸಿದ ವೇಳೆ ವರ್ಷದ ಹಿಂದೆ ಅವರಿಗೆ ಅನಾಮಧೇಯ ಸಂಖ್ಯೆಯಿಂದ ವ್ಯಕ್ತಿಯೋರ್ವ ಕರೆಮಾಡಿ, ಒಂದು ಕೋಟಿ ರೂ. ಹಫ್ತಾ ನೀಡಬೇಕೆಂದು ಒತ್ತಡ ಹೇರಿದ್ದ. ಸರ್ಕಾರಕ್ಕೆ ತೆರಿಗೆ ಕಟ್ಟದೇ ವಂಚಿಸುತ್ತಿರುವ ಮಾಹಿತಿಯನ್ನು ಬಹಿರಂಗಪಡಿಸುವುದಾಗಿಯೂ ಹೇಳಿದ್ದ ಆತ, ಹಣ ಕೊಡದಿದ್ದರೆ ಕಾರ್ಖಾನೆಯಿಂದಲೇ ಅಪಹರಿಸುವುದಾಗಿ ಬೆದರಿಕೆ ಹಾಕಿದ್ದ. ಈ ಬೆದರಿಕೆ ಕರೆಗೆ ಉಡಾಫೆಯಿಂದ ಉತ್ತರಿಸಿದ್ದ ದೀಪಕ್, ಈ ಕರೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಹಾಗೂ ಪೊಲೀಸರಿಗೆ ದೂರನ್ನೂ ಸಲ್ಲಿಸಿರಲಿಲ್ಲ. ಆದರೆ, ಅನಾಮಧೇಯ ಕರೆ ಬಂದ ಮೊಬೈಲ್ ಸಂಖ್ಯೆಯನ್ನು ತಮ್ಮ ಮೊಬೈಲ್‌ನಲ್ಲಿ ಸೇವ್ ಮಾಡಿಟ್ಟುಕೊಂಡಿದ್ದರು ಎಂಬುದು ಬೆಳಕಿಗೆ ಬಂದಿದೆ. ಈ ಮೊಬೈಲ್ ಸಂಖ್ಯೆಯ ಜಾಡು ಹಿಡಿದು ತನಿಖೆಗಳಿದ ಪೊಲೀಸರು, ಕೊನೆಗೂ ಆರೋಪಿಗಳನ್ನು ಬಂಧಿಸಿದ್ದಾರೆ. ಅದು ಮಾತ್ರವಲ್ಲದೇ ಅಪಹರಣಕಾರರು ಒತ್ತೆ ಹಣ ಪಡೆದ ಸ್ಥಳದ ಮೊಬೈಲ್ ಟವರ್ ಮತ್ತು ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ಸ್ಥಳದ ಟವರ್‌ಗಳಲ್ಲಿ ಫೆಬ್ರವರಿ 6ರಂದು ಸಂಜೆ ಕಾರ್ಯನಿರ್ವಹಿಸಿದ ಮೊಬೈಲ್‌ಗಳ ವಿವರಗಳನ್ನು ಕಲೆಹಾಕಿದ್ದ ಒಂದು ತನಿಖಾ ತಂಡ, ಪ್ರಮುಖ ಆರೋಪಿ ಖಾರದ ಪುಡಿ ಬಸವ ಈ ಪ್ರಕರಣ ಹಿಂದೆ ಇರುವುದನ್ನು ಖಚಿತಪಡಿಸಿಕೊಂಡಿದೆ. ಈತ ಜೈಲಿನಲ್ಲಿದ್ದಾಗಲೂ ಶ್ರೀಮಂತರಿಗೆ ಕರೆ ಮಾಡಿ ಬೆದರಿಸಿ ತನ್ನ ಸಹಚರರ ಮೂಲಕ ಹಣ ವಸೂಲಿ ಮಾಡುತ್ತಿದ್ದ ಎಂಬುದನ್ನು ಪತ್ತೆ ಮಾಡಿದ್ದರು. ಆ ನಂತರ ಕ್ಷಿಪ್ರ ಕಾರ್ಯಾಚರಣೆ ನಡೆಸಿ 10 ಆರೋಪಿಗಳನ್ನು ಬಂಧಿಸಿದ್ದಾರೆ. ಈ ಪ್ರಕರಣದ ಮತ್ತೋರ್ವ ಆರೋಪಿ ರವಿ ಎಂಬಾತನಿಗಾಗಿ ಹುಡುಕಾಟ ನಡೆದಿದೆ.

ಈ ಪತ್ತೆ ಕಾರ್ಯದಲ್ಲಿ ನಂಜನಗೂಡಿನ ಡಿವೈಎಸ್‌ಪಿ ಗೋವಿಂದರಾಜು, ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ, ಪಿಎಸ್‌ಐಗಳಾದ ಚೇತನ, ರಮೇಶ್ ಕರಕಿಕಟ್ಟಿ, ಕೃಷ್ಣಕಾಂತಕೋಳಿ, ಕಮಲಾಕ್ಷಿ, ಸಿ.ಕೆ.ಮಹೇಶ್, ಪ್ರೊಬೆಷನರಿ ಪಿಎಸ್‌ಐ ಚರಣ್‌ಗೌಡ, ಎಎಸ್‌ಐಗಳಾದ ಶಿವಕುಮಾರ್, ವಸಂತಕುಮಾರ್, ಸಿಬ್ಬಂದಿಯಾದ ಸುರೇಶ್, ವಸಂತಕುಮಾರ್, ಸುನೀತಾ, ಕೃಷ್ಣ, ಭಾಸ್ಕರ್, ಅಬ್ದುಲ್ ಲತೀಫ್, ನಿಂಗರಾಜು, ಸುರೇಶ್, ಸುಶೀಲ್‌ಕುಮಾರ್, ರಾಜು, ಚೇತನ್, ವಿಜಯ್‌ಕುಮಾರ್, ಮಂಜು, ಚೆಲುವರಾಜು ಪಾಲ್ಗೊಂಡಿದ್ದರು. ಈ ತಂಡಕ್ಕೆ ಐಜಿಪಿ ಪ್ರವೀಣ್ ಮಧುಕರ್ ಪವಾರ್ 25 ಸಾವಿರ ರೂ. ಬಹುಮಾನ ಘೋಷಿಸಿದ್ದಾರೆ.

ಶಾಲೆಗಳಲ್ಲಿ ಮೊಟ್ಟೆ ಕೊಡುವುದ ನಿಲ್ಲಿಸಲ್ಲ

ಉದ್ದೇಶ ಪೂರ್ವಕವಾಗಿ ಮೊಟ್ಟೆ ಕೊಡುತ್ತಿಲ್ಲ. ಬಾಳೆಹಣ್ಣು, ಚಿಕ್ಕಿ ಮಾತ್ರ ಕೊಡಲಾಗುತ್ತಿದೆ. ಕೆಲ ಶಾಲೆಗಳಲ್ಲಿ ಮೊಟ್ಟೆ ಕೊಡಬೇಡಿ ಎಂದು ಸೂಚನೆ ನೀಡಿದ್ದಾರೆ. ಯಾವುದೇ ಕಾರಣಕ್ಕೂ ಮೊಟ್ಟೆ ಕೊಡುವುದನ್ನು ನಿಲ್ಲಿಸಬಾರದು ಎಂದು ಆಗ್ರಹಿಸಿದರು. ಇದಕ್ಕೆ ಉತ್ತರ ನೀಡಿದ ಸಚಿವ ಬಿ.ಸಿ.ನಾಗೇಶ್, ಬಿಸಿಯೂಟದಲ್ಲಿ ಶಾಲಾ ಮಕ್ಕಳಿಗೆ ಮೊಟ್ಟೆ ಕೊಡಬೇಕು ಎಂದು 2007ರಲ್ಲಿ ನಿರ್ಧಾರ ಕೈಗೊಳ್ಳಲಾಯಿತು. ಆದರೆ ಈವರೆಗೂ ಮೊಟ್ಟೆ ಕೊಡದಂತೆ ನೋಡಿಕೊಳ್ಳಲಾಯಿತು. ಯಾರ ಒತ್ತಡಕ್ಕೆ ಹೀಗೆ ಆಯ್ತೋ ಗೊತ್ತಿಲ್ಲ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ನಮ್ಮ ಸರ್ಕಾರವು ಧೈರ್ಯ ಮಾಡಿ ಮೊಟ್ಟೆ ಕೊಡುವ ನಿರ್ಧಾರ ಜಾರಿಗೆ ತಂದೆವು. ಎಲ್ಲ ಕಡೆ ಒಟ್ಟಿಗೆ ಜಾರಿಗೆ ತರುವ ಬದಲು ಅಪೌಷ್ಟಿಕತೆ ಇರುವ ಕಡೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಮೊದಲು ಜಾರಿಗೆ ತರಲಾಗಿದೆ. ನಂತರ ಇತರ ಜಿಲ್ಲೆಗೆ ವಿಸ್ತರಿಸಲಾಗಿದೆ. ಮೊಟ್ಟೆ ಕೊಟ್ಟ ನಂತರ ಪೌಷ್ಟಿಕತೆಯಲ್ಲಿನ ಬದಲಾವಣೆ ಕುರಿತು ಅಧ್ಯಯನ ವರದಿ ಪಡೆಯಲಾಗಿದೆ. ಅದರಂತೆ ಪೌಷ್ಟಿಕತೆ ಹೆಚ್ಚಾಗಿದ್ದನ್ನು ಮನಗಂಡು ಮೊಟ್ಟೆ ಕೊಡುವುದನ್ನು ಮುಂದುವರಿಸಲಾಗುತ್ತದೆ. ಯಾರಿಗೂ ಮೊಟ್ಟೆ, ಬಾಳೆಹಣ್ಣು ತಿನ್ನಿ ಎಂದು ಒತ್ತಾಯ ಇಲ್ಲ. ಯಾರಿಗೆ ಯಾವುದು ಬೇಕೋ ಅದನ್ನು ಕೊಡಲಾಗುತ್ತದೆ. ಮೊಟ್ಟೆ ಬೇಡ ಅಂದವರಿಗೆ ಮಾತ್ರ ಬಾಳೆಹಣ್ಣು, ಚಿಕ್ಕಿ ಕೊಡುತ್ತೇವೆ ಎಂದು ಸ್ಪಷ್ಟಪಡಿಸಿದರು. ನೈತಿಕ ಶಿಕ್ಷಣ ಕೊಡಬೇಕು ಎನ್ನುವ ನಿರ್ಧಾರಕ್ಕೆ ಸರ್ಕಾರ ಬಂದಿದೆ. ಆದರೆ ಸಾತ್ವಿಕ ಆಹಾರದ ಬಗ್ಗೆ ಇಲಾಖೆಯಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು. ಈ ವೇಳೆ ಮಧ್ಯಪ್ರವೇಶ ಮಾಡಿದ ಸಭಾಪತಿ ಬಸವರಾಜ ಹೊರಟ್ಟಿ, ಶಾಲೆಗಳಲ್ಲಿ ಮಕ್ಕಳಿಗೆ ಮಾರಲ್ ಎಜುಕೇಶನ್ ಇರಬೇಕು. ವಾರಕ್ಕೆ ಒಂದು ಪೀರಿಯಡ್ ಆದರೂ ಇದನ್ನು ಮಾಡಬೇಕು. ನನ್ನ ಸಲಹೆ ಪರಿಗಣಿಸಿ ಎಂದರು.

ತೊಂದರೆ ಆಗದಂತೆ ವಿದ್ಯುತ್ ಪೂರೈಕೆ

ಉತ್ತರಿಸಿದ ಸಚಿವರು, ಫೆಬ್ರವರಿಯಲ್ಲಿಯೇ ನಾವು ವಿದ್ಯುತ್ ಬಳಕೆಯಲ್ಲಿ 15,016 ಮೆಗಾವ್ಯಾಟ್ ತಲುಪಿದ್ದೇವೆ. ಬೇಸಿಗೆಯಲ್ಲಿ 15.5 ಸಾವಿರ ಮೆಗಾವ್ಯಾಟ್ ತಲುಪಲಿದ್ದೇವೆ. ದೊಡ್ಡ ಪ್ರಮಾಣದಲ್ಲಿ ಸೋಲಾರ್ ರೂಫ್ ಟಾಪ್‌ಗೆ ಅನುಕೂಲ ಮಾಡಲಾಗುತ್ತಿದೆ. 14,800 ಮೆಗಾವ್ಯಾಟ್ ಕಳೆದ ಬಾರಿ ಬೇಡಿಕೆ ಬಂದರೂ ಸರಬರಾಜು ಮಾಡಿದ್ದೇವೆ. ಈ ಬಾರಿಯ ಏಪ್ರಿಲ್, ಮೇನಲ್ಲಿ ತೊಂದರೆ ಆಗದಂತೆ ಕ್ರಮ ವಹಿಸಲಾಗುತ್ತದೆ ಎಂದರು. ಈ ವೇಳೆ ಬಿಜೆಪಿ ಸದಸ್ಯ ಲಕ್ಷ್ಮಣ ಸವದಿ ಮಾತನಾಡಿ, ಈಗ ಪರೀಕ್ಷೆ ಸಮಯ. ವಿದ್ಯಾರ್ಥಿಗಳಿಗೆ ಓದಲು ಸಮಸ್ಯೆ ಆಗುತ್ತದೆ. ಹಳ್ಳಿ ಭಾಗದಲ್ಲಿ ಆಗಾಗ ವಿದ್ಯುತ್ ಹೋದರೆ ಮಕ್ಕಳಿಗೆ ಓದಲು ತೊಂದರೆ ಆಗುತ್ತದೆ. ಹೀಗಾಗಿ ಗ್ರಾಮೀಣ ಭಾಗದಲ್ಲಿ ನಿರಂತರವಾಗಿ ಒಂದು ಫೇಸ್ ಕರೆಂಟ್ ನೀಡಬೇಕು ಎಂದು ಒತ್ತಾಯ ಮಾಡಿದರು. ಇದಕ್ಕೆ ಉತ್ತರ ನೀಡಿದ ಸಚಿವರು, ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮಯದಲ್ಲಿ ತೊಂದರೆ ಆಗದಂತೆ ವಿದ್ಯುತ್ ಕೊಡುತ್ತೇವೆ. ತೋಟದ ಮನೆಗೆ ಮಾತ್ರ ಸ್ವಲ್ಪ ಸಮಸ್ಯೆ ಆಗುತ್ತಿದೆ. ಆದರೂ ಮಕ್ಕಳಿಗೆ ಓದಲು ಸಮಸ್ಯೆ ಆಗದಂತೆ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದರು. ಅಲ್ಲದೇ ಬೇಸಿಗೆಯಲ್ಲಿ ರೈತರಿಗೆ ಸಮಸ್ಯೆ ಆಗದಂತೆ ವಿದ್ಯುತ್ ಕೊಡುವ ಭರವಸೆ ನೀಡಿದರು.

ಸದ್ಯಕ್ಕೆ ವಿದ್ಯುತ್ ದರ ಏರಿಕೆ ಇಲ್ಲ: ರಾಜ್ಯದಲ್ಲಿ ಸದ್ಯಕ್ಕೆ ವಿದ್ಯುತ್ ದರ ಏರಿಕೆ ಮಾಡುವುದಿಲ್ಲ ಎಂದು ಸುನಿಲ್ ಕುಮಾರ್ ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ರಾಜ್ಯದ ಜನರಿಗೆ ಸದ್ಯಕ್ಕೆ ಬಿಗ್ ರಿಲೀಫ್ ಕೊಟ್ಟಿದ್ದಾರೆ. ಸದ್ಯಕ್ಕೆ ರಾಜ್ಯದಲ್ಲಿ ವಿದ್ಯುತ್ ದರ ಹೆಚ್ಚಳ ಇಲ್ಲ. ಸರ್ಕಾರದ ಮುಂದೆ ವಿದ್ಯುತ್ ಬೆಲೆ ಏರಿಕೆ ಮಾಡುವ ಯಾವುದೇ ಪ್ರಸ್ತಾಪ ಇಲ್ಲ ಎಂದರು. ಸದ್ಯಕ್ಕೆ ದರ ಏರಿಕೆ ಬಗ್ಗೆ ಯಾವುದೇ ಯೋಚನೆಯೂ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪರಿಸರ ಅಧ್ಯಯನ ಶಿಬಿರ

ವಿದ್ಯಾರ್ಥಿಗಳಿಗೆ ಸಸ್ಯಸಂಕುಲದ ಪರಿಪೂರ್ಣ ಮಾಹಿತಿ



ಮೈಸೂರು,ಫೆ.13(ಎಂಟಿವೈ)- ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಆರಂಭವಾದ ಎರಡು ದಿನಗಳ ಪರಿಸರ ಅಧ್ಯಯನ ಶಿಬಿರದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಜೀವ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಸಸ್ಯಲೋಕದ ಬಗ್ಗೆ ಮಾಹಿತಿ ಪಡೆದರು.

ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಸಹಯೋಗದಲ್ಲಿ ನಡೆದ ಪರಿಸರ ಅಧ್ಯಯನ ಶಿಬಿರವನ್ನು ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಜೀವ ವಿಜ್ಞಾನ ಶಾಲೆಯ ಮುಖ್ಯಸ್ಥ ಪ್ರೊ.ಕೆ.ಎ.ರವೀಶ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಮೈಸೂರಿನ ಪ್ರಮುಖ ಜಲಮೂಲಗಳಲ್ಲಿ ಒಂದಾಗಿರುವ ಕುಕ್ಕರಹಳ್ಳಿ ಕೆರೆಯಲ್ಲಿ ಹಲವು ಜೀವವೈವಿಧ್ಯತೆ ಇದೆ. ಸಸ್ಯ ಪ್ರಭೇದಗಳೊಂದಿಗೆ ಪಕ್ಷಿ ಸಂಕುಲವೂ ಆವಾಸಸ್ಥಾನವಾಗಿ ಮಾಡಿಕೊಂಡಿದೆ. ಈ ಪರಿಸರದಲ್ಲಿರುವ ವೈವಿಧ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲು ಶಿಬಿರ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಶಿವಮೊಗ್ಗ ಜಿಲ್ಲೆಯ ಸಾಗರದ ಪರಿಸರ ತಜ್ಞ ಆನೆಗುಳಿ ಸುಬ್ಬರಾವ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಯಾವ ರೀತಿ ಭೂಮಿಯನ್ನು ಕಾಪಾಡಬೇಕು. ಪರಿಸರವನ್ನು ಹೇಗೆ ಉಳಿಸಿಕೊಳ್ಳಬೇಕು ಎಂದು ಮನವರಿಕೆ ಮಾಡಿಕೊಡಲು ಪರಿಸರ ಅಧ್ಯಯನ ಶಿಬಿರ ಆಯೋಜಿಸಲಾಗಿದೆ. ಕೆರೆ ಆವರಣದಲ್ಲಿರುವ ಸಣ್ಣ ಸಣ್ಣ ಕೀಟ, ಔಷಧೀಯ ಸಸ್ಯಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಇಲ್ಲಿ ನಡೆಸುತ್ತಿರುವ ಪರಿಸರ ಜಾಗೃತಿ ಕಾರ್ಯಕ್ರಮ ಮಹತ್ವ ಪಡೆದಿದೆ. ಭೂಮಿ ಹಾಗೂ ಪರಿಸರವನ್ನು ಮುಂದಿನ ತಲೆಮಾರಿಗೆ ಹೇಗೆ ಉಳಿಸಿಕೊಳ್ಳಬೇಕು ಎಂದು ಚಿಂತಿಸುವುದರೊಂದಿಗೆ ಪರಿಸರ ಸಂರಕ್ಷಣೆಗೆ ಎಲ್ಲರೂ ಪಣತೊಡಬೇಕು ಎಂದು ಸಲಹೆ ನೀಡಿದರು.

ಮಲೆನಾಡು ಸೇರಿದಂತೆ ವಿವಿಧೆಡೆ ಔಷಧೀಯ ಸಸ್ಯಗಳು ಕಣ್ಮರೆಯಾಗುತ್ತಿವೆ. ಅದಕ್ಕಾಗಿ ನಾನು 500ಕ್ಕೂ ಹೆಚ್ಚು ಬಗೆಯ ಗಿಡ-ಮರಗಳ ಬೀಜಗಳನ್ನು ಸಂಗ್ರಹಿಸಿದ್ದೇನೆ. ಅವುಗಳನ್ನು ಪ್ರದರ್ಶಿಸಿ ಜಾಗೃತಿ ಮೂಡಿಸಲಾಗುತ್ತಿದೆ. ನಾವು ಎಲ್ಲೇ ಹೋದರೂ ಬೀಜ ಸಂಗ್ರಹ ಹಾಗೂ ಪ್ರಸರಣ ಮಾಡಬೇಕು. ಹಲವು ಗಿಡ-ಮರಗಳು ಅಳಿವಿನಂಚಿಗೆ ದೂಡಲ್ಪಟ್ಟಿವೆ. ಹಲವು ಔಷಧೀಯ ಸಸ್ಯಗಳು ಅಳಿವಿನಂಚಿಗೆ ಬಂದು ನಿಂತಿವೆ. ಇದಕ್ಕೆ ಕಾರಣ ಸಮಗ್ರ ಬೀಜ ಪ್ರಸರಣವಾಗಿಲ್ಲ. ಇನ್ನಾದರೂ ನಾವು ಬೀಜ ಪ್ರಸರಣ ಮಾಡಬೇಕಾಗಿದೆ. ನಾವು ಬೀಜವಾಹಕಗಳಾಗಿ ಕೆಲಸ ಮಾಡಬೇಕಾಗಿದೆ. ಹೆಚ್ಚಾಗಿ ಬೀಜ ಸಂಗ್ರಹ ಮಾಡಬೇಕು. ಮಲೆನಾಡಿನಲ್ಲಿ ನೆಲ ಸಸ್ಯಗಳು, ಬೇರಿನ ಗಿಡ, ಅಶೋಕ ತೊಗಟೆ, ಏಕನಾಥ ಗಿಡ ಸೇರಿದಂತೆ ಹಲವು ಗಿಡಗಳು ಕಣ್ಮರೆಯಾಗಿವೆ. ವಾಣಿಜ್ಯ ಬೆಳೆ ಹಾಗೂ ವಾಣಿಜ್ಯ ಉದ್ದೇಶಕ್ಕೆ ಭೂಮಿ ಬಳಕೆ ಹೆಚ್ಚಾಗುತ್ತಿರುವುದರಿಂದ ನೆಲ ಸಸ್ಯಗಳು ಕಣ್ಮರೆಯಾಗುತ್ತಿವೆ. ಮೈಸೂರು ಭಾಗದಲ್ಲಿ ಅರ್ಜುನ, ಅಕೇಶಿಯಾ ಮರ ಸೇರಿದಂತೆ ಹಲವು ಗಿಡ-ಮರಗಳು ಅಳಿವಿನಂಚಿಗೆ ದೂಡಲ್ಪಟ್ಟಿವೆ. ಇನ್ನಾದರೂ ಎಚ್ಚೆತ್ತುಕೊಂಡು ಅಳಿವಿನಂಚಿಗೆ ದೂಡಲ್ಪಟ್ಟಿರುವ ಗಿಡ-ಮರಗಳ ಸಂತತಿ ಕಾಪಾಡಿಕೊಳ್ಳಬೇಕಾಗಿದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಪರಿಸರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಹಾಗೂ ಸಂಯೋಜಕ ಡಾ.ಹೆಚ್.ಪಿ.ಶಿವರಾಜು, ಪರಿಸರ ವಿಜ್ಞಾನ ವಿಭಾಗದ ಅಧ್ಯಾಪಕರು, ಅನಿಲ್, ಪ್ರದೀಪ್ ಕಲ್ಲಳ್ಳಿ, ವೆಂಕಟೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ 22ರವರೆಗೆ ಹಿಮಾಚ್ಛಾದಿತ ಕೈಲಾಸ ಪರ್ವತ, ರುದ್ರಾಕ್ಷಿ ಶಿವಲಿಂಗದ ಪ್ರತಿಕೃತಿ ದರ್ಶನ



ಮೈಸೂರು,ಫೆ.13(ಪಿಎಂ)- ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಆಲನಹಳ್ಳಿ ಸೇವಾ ಕೇಂದ್ರದ ವತಿಯಿಂದ ನಗರದಲ್ಲಿ ಪ್ರಪ್ರಥಮ ಬಾರಿಗೆ ಮಹಾ ಶಿವರಾತ್ರಿ ಪ್ರಯುಕ್ತ ಲಲಿತಮಹಲ್ ಅರಮನೆ ಮೈದಾನದಲ್ಲಿ 30 ಅಡಿ ಎತ್ತರದ ಹಿಮಾಚ್ಛಾದಿತ ಕೈಲಾಸ ಪರ್ವತ ಮತ್ತು 21 ಅಡಿ ಎತ್ತರದ ರುದ್ರಾಕ್ಷಿ ಶಿವಲಿಂಗದ ಪ್ರತಿಕೃತಿ ನಿರ್ಮಿಸಲಾಗುತ್ತಿದ್ದು, ಫೆ15ರಿಂದ 22ರವರೆಗೆ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಕಾರ್ಯಕ್ರಮದ ಸಂಚಾಲಕ ರಂಗನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷ ಮಹಾಶಿವರಾತ್ರಿಯ ಪ್ರಯುಕ್ತ ಮೈಸೂರು ನಗರದಲ್ಲಿ ವಿದ್ಯಾಲಯವು ಅನೇಕ ಬಡಾವಣೆಗಳಲ್ಲಿ ಜನವರಿಯಿಂದಲೇ ನಾನಾ ಕಾರ್ಯಕ್ರಮ ಆರಂಭಿಸಿದೆ. ಅದರೊಂದಿಗೆ ಹಿಮಾಚ್ಛಾದಿತ ಕೈಲಾಸ ಪರ್ವತ ಮತ್ತು ರುದ್ರಾಕ್ಷಿ ಶಿವಲಿಂಗದ ಬೃಹತ್ ಪ್ರತಿಕೃತಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಇದರ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಸಾರ್ವಜನಿಕರು ಉಚಿತವಾಗಿ ದರ್ಶನ ಪಡೆಯಬಹುದು ಎಂದರು.

ರುದ್ರಾಕ್ಷಿ ಶಿವಲಿಂಗವನ್ನು ತಯಾರು ಮಾಡಲು ಹೃಷಿಕೇಶ ಮತ್ತು ಹರಿದ್ವಾರಗಳಿಂದ 5,16,108 ರುದ್ರಾಕ್ಷಿ ಮಣಿಗಳನ್ನು ತರಿಸಲಾಗಿದೆ. ರುದ್ರಾಕ್ಷಿ ಶಿವಲಿಂಗದ ಎದುರು ಬಸವನ ಮೂರ್ತಿಯೂ ಬರಲಿದೆ. ಈ ಕೈಲಾಸ ಪರ್ವತವು 3ಡಿ ಮಾದರಿಯಲ್ಲಿ ಇರಲಿದ್ದು, ನೋಡುಗರಿಗೆ ಕೈಲಾಸ ಪರ್ವತಕ್ಕೆ ಹೋದಂತೆ ಅನುಭವ ಆಗಲಿದೆ. ಇದರ ಒಳಗೆ 160 ಅಡಿ ಉದ್ದ, 8 ಅಡಿ ಎತ್ತರ ಮತ್ತು 10 ಅಡಿ ಅಗಲದ ಗುಹೆಯನ್ನು ನಿರ್ಮಾಣ ಮಾಡಲಾಗುತ್ತಿದೆ. ಇದರೊಳಗೆ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಯ್ಯ, ರಾಷ್ಟ್ರಕವಿ ಕುವೆಂಪು ಮತ್ತು ಪ್ರಜಾಪಿತ ಬ್ರಹ್ಮ ಬಾಬಾ ಅವರ ಚಿತ್ರಗಳ ಜೊತೆಗೆ ಅವರ ಜೀವನ ಮತ್ತು ಸಾಧನೆಯ ಸಂಕ್ಷಿಪ್ತ ವಿವರಗಳು ಇರಲಿವೆ. ಗುಹಾಂತ ಧ್ಯಾನ ಮಂದಿರವನ್ನೂ ನಿರ್ಮಿಸಿ, ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯ ದರ್ಶನಕ್ಕೂ ವ್ಯವಸ್ಥೆ ಮಾಡಲಾಗುತ್ತಿದೆ. ವಿದ್ಯಾಲಯದ ಪರಿಕಲ್ಪನೆಯಂತೆ ಮಂಡ್ಯದ ಕಲಾವಿದ ಮಹೇಶ್ ನೇತೃತ್ವದಲ್ಲಿ ಪ್ರತಿಕೃತಿ ಸಿದ್ಧಗೊಳ್ಳುತ್ತಿದೆ ಎಂದು ಹೇಳಿದರು.

ಇದರ ಉದ್ಘಾಟನೆಯನ್ನು ಫೆ.15ರಂದು ಸಂಜೆ 6.30ಕ್ಕೆ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ನೆರವೇರಿಸಲಿದ್ದಾರೆ. ವಿದ್ಯಾಲಯದ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ಬಿ.ಕೆ.ಲಕ್ಷ್ಮೀಜಿ ಸಾನ್ನಿಧ್ಯ ವಹಿಸಲಿದ್ದು, ಅರಕಲಗೂಡು ತಾಲೂಕಿನ ಅರೇಮಾದನಹಳ್ಳಿ ಮಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಯಾಗಿ ಶಾಸಕ ಎಸ್.ಎ.ರಾಮದಾಸ್ ಭಾಗವಹಿಸಲಿದ್ದು, ಅತಿಥಿಗಳಾಗಿ ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್‌ನ ಉಪಾಧ್ಯಕ್ಷ ವಿ.ಈಶ್ವರ ರಾವ್, ವಿಕ್ರಾಂತ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಎಸ್.ಲೋಕೇಶ್, ಪಾಲಿಕೆ ಸದಸ್ಯೆ ರೂಪಾ ಯೋಗೇಶ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ವಿದ್ಯಾಲಯದ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ಬಿ.ಕೆ.ಲಕ್ಷ್ಮೀಜಿ, ಆಲನಹಳ್ಳಿ ಸೇವಾ ಕೇಂದ್ರದ ಸೀಮಾಜಿ ಗೋಷ್ಠಿಯಲ್ಲಿದ್ದರು.

ನಾಳೆ 'ಡಾ.ರಾಗೌ-80 ನುಡಿಗೌರವ' ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ



ಮೈಸೂರು,ಫೆ.13(ಪಿಎಂ)- ಮಂಡ್ಯ ಕರ್ನಾಟಕ ಸಂಘ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂವಹನ ಪ್ರಕಾಶನ, ಡಾ.ರಾಗೌ ಶಿಷ್ಯರು ಮತ್ತು ಅಭಿಮಾನಿಗಳ ಬಳಗದ ಸಂಯುಕ್ತಾಶ್ರಯದಲ್ಲಿ ಫೆ.15ರಂದು 'ಡಾ.ರಾಗೌ-80 ನುಡಿಗೌರವ' ಅಭಿನಂದನಾ ಗ್ರಂಥ ಮತ್ತು ಡಾ.ರಾಗೌ ಅವರ 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಕೃತಿ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಡಾ.ರಾಗೌ ಶಿಷ್ಯ ಪ್ರೊ.ಎ.ರಂಗಸ್ವಾಮಿ ತಿಳಿಸಿದರು.



ಡಾ.ರಾಗೌ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ರಾಗೌ (ಡಾ.ರಾಮೇಗೌಡ) ಅವರು ಕವಿ, ವಿಮರ್ಶಕರು, ಸಂಶೋಧಕರು ಮತ್ತು ಕನ್ನಡ ಅಭಿಜಾತ ವಿದ್ವಾಂಸರೂ ಆಗಿದ್ದಾರೆ. ಅವರಿಗೆ 80 ಸಂವತ್ಸರಗಳು ತುಂಬಿದ್ದು, ಈ ಸಂದರ್ಭದ ಸವಿನೆನಪಿಗಾಗಿ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5ಕ್ಕೆ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಸಮಾರಂಭ ನಡೆಯಲಿದೆ ಎಂದರು.

ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಕೃತಿಗಳನ್ನು ಬಿಡುಗಡೆ ಮಾಡಲಿದ್ದಾರೆ. ಹಿರಿಯ ಸಾಹಿತಿ ಡಾ.ಸಿಪಿಕೆ (ಸಿ.ಪಿ.ಕೃಷ್ಣಕುಮಾರ್) ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಅಭಿನಂದನಾ ಭಾಷಣ ಮಾಡಲಿದ್ದಾರೆ. 'ಡಾ.ರಾಗೌ-80 ನುಡಿಗೌರವ' ಅಭಿನಂದನಾ ಗ್ರಂಥ ಕುರಿತು ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು ಕೃತಿ ಕುರಿತು ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಮಾತನಾಡಲಿದ್ದಾರೆ. ಮಾಜಿ ಶಾಸಕ ವಾಸು, ಶಾಸಕ ಎಂ.ಶ್ರೀನಿವಾಸ್, ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅತಿಥಿಗಳಾಗಿ ಭಾಗವಹಿಸಲಿದ್ದು, ಡಾ.ರಾಗೌ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು. ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ನಿವೃತ್ತ ಉಪಪ್ರಾಂಶುಪಾಲ ಎಸ್.ಉದಯಶಂಕರ್, ರಾಗೌ ಶಿಷ್ಯ ಡಾ.ಉಮೇಶ್ ಗೋಷ್ಠಿಯಲ್ಲಿದ್ದರು.

224 ವಿಧಾನಸಭಾ ಕ್ಷೇತ್ರಗಳಲ್ಲೂ ಕೆಜೆಪಿ ಸ್ಪರ್ಧೆ



ಮೈಸೂರು,ಫೆ13(ಪಿಎಂ)- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ಜನತಾ ಪಕ್ಷವು (ಕೆಜೆಪಿ) ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂದು ಪಕ್ಷದ ಸಂಸ್ಥಾಪಕ ರಾಜ್ಯಾಧ್ಯಕ್ಷ ಪದ್ಮನಾಭ ಪ್ರಸನ್ನ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 6 ತಿಂಗಳಿಂದ ರಾಜ್ಯದಲ್ಲಿ ಪ್ರಚಾರ ಕಾರ್ಯ ನಡೆಸುತ್ತಿದ್ದೇವೆ. ಮುಂದಿನ ವಾರ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಲಿದ್ದೇವೆ. ರಾಷ್ಟ್ರೀಯ ಪಕ್ಷಗಳು ಆಡಳಿತ ನಡೆಸಿ, ಕರುನಾಡಿಗೆ ನ್ಯಾಯ ಕೊಡಿಸುವಲ್ಲಿ ವಿಫಲವಾಗಿವೆ ಎಂದು ಆರೋಪಿಸಿದರು. ಚಿಕ್ಕನಾಯಕನಹಳ್ಳಿ ಅಥವಾ ತಿಪಟೂರು ಕ್ಷೇತ್ರದಲ್ಲಿ ಸ್ಪರ್ಧಿಸಲು ತಾವು ತೀರ್ಮಾನಿಸಿರುವುದಾಗಿ ಹೇಳಿದರು. ಪಕ್ಷದ ಮುಖಂಡರಾದ ದುರ್ಗಾಪ್ರಸಾದ್, ಶ್ರೀನಿವಾಸ್, ಲೋಕೇಶ್ ಗೋಷ್ಠಿಯಲ್ಲಿದ್ದರು.

ಇಂದು ಶಿಶಿಕ್ಷು ತರಬೇತಿ ಜಾಗೃತಿ ಕಾರ್ಯಾಗಾರ

ಮೈಸೂರು,ಫೆ13- ಪ್ರಾಂತೀಯ ನಿರ್ದೇಶನಾಲಯದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ, ಇವರ ಆಶ್ರಯದಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಕರ್ನಾಟಕ ಸರ್ಕಾರ, ಮೈಸೂರು ಕೈಗಾರಿಕೆಗಳ ಸಂಘ MSME, ಮೈಸೂರು ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು ಇವರುಗಳ ಸಹಯೋಗದೊಂದಿಗೆ ಒಂದು ದಿನದ ಅಪ್ರೆಂಟಿಸ್‌ಶಿಪ್ (ಶಿಶಿಕ್ಷು) ತರಬೇತಿ ಜಾಗೃತಿ ಕಾರ್ಯಾಗಾರವನ್ನು ಫೆ.14 ರ ಮಂಗಳವಾರ ಬೆಳಗ್ಗೆ 10.00 ರಿಂದ ಸಂಜೆ 4 ರವರೆಗೆ ಮೈಸೂರಿನ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಕೈಗಾರಿಕೆಗಳು, ಕೈಗಾರಿಕಾ ಸಂಘ ಸಂಸ್ಥೆಗಳು, ಇತರೆ ವಾಣಿಜ್ಯ ಸಂಘ ಸಂಸ್ಥೆಗಳು, ಆಸ್ಪತ್ರೆಗಳು ಹಾಗೂ ಹೋಟೆಲ್ ಮಾಲೀಕರು ಭಾಗವಹಿಸಿ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಬಗ್ಗೆ ಅವಹೇಳನ ಪ್ರಕರಣ

ಜೈನ್ ವಿವಿ ಮಾನ್ಯತೆ ರದ್ದುಗೊಳಿಸಿ, ಆಡಳಿತ ಮಂಡಳಿಯವರ ಜೈಲಿಗೆ ಕಳುಹಿಸಿ

ಸರ್ಕಾರಕ್ಕೆ ಎಂಎಲ್‌ಸಿ ಅಡಗೂರು ಹೆಚ್.ವಿಶ್ವನಾಥ್ ಒತ್ತಾಯ



ಮೈಸೂರು,ಫೆ.13(ಪಿಎಂ)- ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯದಲ್ಲಿ ಇಲ್ಲಿನ ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುನಾಟಕದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿರುವುದು ರಾಷ್ಟ್ರೀಯ ಅವಮಾನ. ಈ ಪ್ರಕರಣ ಸಂಬಂಧ ಸದರಿ ವಿವಿಯ ಮಾನ್ಯತೆ ರದ್ದುಗೊಳಿಸಿ, ವಿವಿ ಆಡಳಿತ ಮಂಡಳಿಯವರನ್ನು ಜೈಲಿಗೆ ಕಳುಹಿಸುವ ಕಠಿಣ ಕ್ರಮವನ್ನು ಸರ್ಕಾರ ಈ ಕೂಡಲೇ ತೆಗೆದುಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಜೈನ್ ವಿವಿಯಲ್ಲಿ ಅಲ್ಲಿನ ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುನಾಟಕದ ಕ್ಲಿಪ್ಪಿಂಗ್ಸ್ ನೋಡಿದ್ದೇನೆ. ಒಬ್ಬ ಮೇಲ್ಜಾತಿಯ ಹೆಣ್ಣು ಮಗಳು ದಲಿತ ಹುಡುಗನನ್ನು ಲವ್ ಮಾಡುತ್ತಿರುವ ದೃಶ್ಯಾವಳಿಯಲ್ಲಿ ಆತ ಆಕೆಯನ್ನು ಮುಟ್ಟಲು ಬಂದಾಗ, 'ಟಚ್ ಮಿ ನಾಟ್' ಎಂಬ ಹಾಡನ್ನು ಸಾದರಪಡಿಸುವ ಮೂಲಕ ನೇರವಾಗಿ ಅಸ್ಪೃಶ್ಯತೆ ಆಚರಣೆ ಮಾಡಲಾಗಿದೆ ಎಂದು ದೂರಿದರು.

'ಬಿ.ಆರ್.ಅಂಬೇಡ್ಕರ್' ಎಂಬುದನ್ನು 'ಬೀಯರ್ ಅಂಬೇಡ್ಕರ್' ಎಂದು ಹೇಳಿ ಕೇಕೆ ಹಾಕುತ್ತಾರೆ. ಪದವಿ ಪೂರ್ಣಗೊಳಿಸಿ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಇಂತಹ ನಾಟಕ ಪ್ರದರ್ಶಿಸುತ್ತಿದ್ದರೆ, ವಿವಿಯ ಪ್ರಾಧ್ಯಾಪಕರು, ಆಡಳಿತ ಮಂಡಳಿಯವರು ನೋಡುತ್ತಾ ಕೇಕೆ ಹಾಕುತ್ತ ನಗುತ್ತಾರೆ. ಇದು ನಿಜಕ್ಕೂ ರಾಷ್ಟ್ರೀಯ ಅವಮಾನ. ಈಗಾಗಲೇ ಈ ಸಂಬಂಧ ಎಫ್‌ಐಆರ್ ಸಹ ದಾಖಲಾಗಿದ್ದು, ಸರ್ಕಾರ ಶೀಘ್ರವೇ ಕಠಿಣ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಲಂಗು-ಲಗಾಮು ಇಲ್ಲ: ಸದರಿ ನಾಟಕ ಪ್ರದರ್ಶನಕ್ಕೂ ಮುನ್ನ ನಾಲ್ಕು ಬಾರಿ ಅಭ್ಯಾಸ ನಡೆಸಲಾಗಿದೆ. ಹಾಗಾಗಿ ಇಲ್ಲಿ ಎಲ್ಲವೂ ಗೊತ್ತಿದ್ದೇ ನಡೆದಿದೆ. ಇದೊಂದು ಖಾಸಗಿ ವಿವಿ ಆಗಿದ್ದು, ಖಾಸಗಿ ವಿವಿಗಳಿಗೆ ಲಂಗು-ಲಗಾಮು ಇಲ್ಲ. ಸಿ.ಟಿ.ರವಿ ಉನ್ನತ ಶಿಕ್ಷಣ ಸಚಿವರಾಗಿದ್ದ ಕಾಲದಲ್ಲಿ ಕೋಟ್ಯಾಂತರ ಹಣ ಪಡೆದು ಖಾಸಗಿ ವಿವಿ ವ್ಯವಸ್ಥೆಗೆ ಅನುಮೋದನೆ ನೀಡಲಾಯಿತು. ಶಿಕ್ಷಣ ಕ್ಷೇತ್ರವನ್ನು ಯಾವ ರೀತಿ ಹಾಳು ಮಾಡುತ್ತಾರೆ ಎಂಬುದಕ್ಕೆ ಇದು ಉದಾಹರಣೆ ಎಂದು ಕಿಡಿಕಾರಿದರು.

ನಮ್ಮ ಸಂವಿಧಾನದಿಂದ ಭಾರತೀಯರಿಗೆ ಇಂದು ಗೌರವವಿದೆ. ಜಗತ್ತಿನಲ್ಲೇ ಅತ್ಯಂತ ಉತ್ತಮ ಸಂವಿಧಾನ ನಮ್ಮದು. ಅಂತಹ ಸಂವಿಧಾನ ಕೊಟ್ಟವರು ಡಾ.ಬಿ.ಆರ್.ಅಂಬೇಡ್ಕರ್. ಅವರನ್ನು 'ಬೀಯರ್' ಎಂದು ಹೇಳುವುದು ಅಕ್ಷಮ್ಯ. ಹಲವು ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ ಬಳಿಕ ಸರ್ಕಾರ ಕಣ್ಣು ಬಿಟ್ಟಿದ್ದು, ಕೇವಲ ವಿದ್ಯಾರ್ಥಿಗಳನ್ನು ಅಮಾನತು ಮಾಡಲಾಗಿದೆ. ಆದರೆ ಸದರಿ ವಿವಿಯ ಮಾನ್ಯತೆ ರದ್ದುಗೊಳಿಸುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು. ಹಲವು ಮುಲಾಜುಗಳಿಗೆ ಒಳಗಾಗಿ ಸರ್ಕಾರ ಸುಮ್ಮನಾಗಿದೆ ಎಂದು ದೂರಿದರು.

ರಾಜ್ಯಪಾಲರೂ ಚಕಾರವೆತ್ತಿಲ್ಲ: ಘಟನೆ ನಡೆದ ವಾರದ ಬಳಿಕ ಇಂದು ಉನ್ನತ ಶಿಕ್ಷಣ ಸಚಿವರು ಎಚ್ಚೆತ್ತುಕೊಂಡಿದ್ದು, ಉನ್ನತ ಶಿಕ್ಷಣ ಇಲಾಖೆ ಮುಖ್ಯ ಕಾರ್ಯದರ್ಶಿಗಳಿಗೆ ಕ್ರಮಕ್ಕೆ ಸೂಚನೆ ನೀಡಿದ್ದೇನೆ ಎಂದು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ವಿವಿಗಳ ಕುಲಾಧಿಪತಿಗಳಾದ ರಾಜ್ಯಪಾಲರು, ಸಮಾಜ ಕಲ್ಯಾಣ ಇಲಾಖೆ ಈ ಬಗ್ಗೆ ಚಕಾರ ಎತ್ತಿಲ್ಲ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ (ಸಿಆರ್‌ಇ ಸೆಲ್) ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲು ಅವಕಾಶವಿದೆ. ಆದರೂ ಗಂಭೀರ ಕ್ರಮಗಳು ಕೈಗೊಳ್ಳುತ್ತಿಲ್ಲವೆಂದರೆ ಈ ಎಲ್ಲಾ ವ್ಯವಸ್ಥೆ ಯಾರ ಅಧೀನದಲ್ಲಿವೆ ಎಂದು ಪ್ರಶ್ನಿಸಿದರು. ಮುಖಂಡರಾದ ಸೋಮಸುಂದರ್, ಬೀರಪ್ಪ ಗೋಷ್ಠಿಯಲ್ಲಿದ್ದರು.

ಹೆಚ್ಚುವರಿ ಸಂವಿಧಾನಿಕ ಶಕ್ತಿಗಳಿಂದ ಸರ್ಕಾರದ ನಿಯಂತ್ರಣ

ಮೈಸೂರು,ಫೆ.13(ಪಿಎಂ)- ಹೆಚ್ಚುವರಿ ಸಂವಿಧಾನಿಕ ಶಕ್ತಿಗಳಾಗಿ (extra constitutional force) ಬೆಳೆದಿರುವ ಕೆಲವರು ರಾಜ್ಯ ಸರ್ಕಾರವನ್ನು ನಿಯಂತ್ರಿಸುತ್ತಿದ್ದಾರೆ ಎಂದು ಎಂಎಲ್‌ಸಿ ವಿಶ್ವನಾಥ್ ಆರೋಪಿಸಿದರು.

ಏನೇನೋ ಬರೆದು ದೊಡ್ಡ ದೇಶಭಕ್ತನಂತೆ ಬಿಂಬಿಸಿಕೊಂಡಿರುವ ಚಕ್ರವರ್ತಿ ಸೂಲಿಬೆಲೆ, ಶತವಧಾನಿ, ಪಠ್ಯಪುಸ್ತಕ ಕುಲಗೆಡಿಸಿದ ರೋಹಿತ್ ಚಕ್ರತೀರ್ಥ, ಪ್ರಮೋದ್ ಮುತಾಲಿಕ್‌ರಂತಹ ಹೆಚ್ಚುವರಿ ಸಂವಿಧಾನಿಕ ಶಕ್ತಿಗಳು ಸರ್ಕಾರವನ್ನು ನಿಯಂತ್ರಿಸುತ್ತಿದ್ದು, ನಿಜಕ್ಕೂ ಸರ್ಕಾರ ಇದ್ದರೆ, ಈ ಪ್ರಕರಣದಲ್ಲಿ ಇಷ್ಟೊತ್ತಿಗೆ ಜೈನ್ ವಿವಿ ಆಡಳಿತ ಮಂಡಳಿಯವರು ಜೈಲಿನಲ್ಲಿ ಇರಬೇಕಿತ್ತು ಎಂದು ಹೇಳಿದರು.

ಈ ವಿವಿಯಿಂದ ಕ್ಷಮೆಯಾದರೂ ಕೇಳಿ ಬಂದಿಲ್ಲ. ಪ್ರಾತಿಪರರ ಚಿಂತಕರು, ಅಂಬೇಡ್ಕರ್ ವಾದಿಗಳು ಅಷ್ಟಾಗಿ ಬಾಯಿ ಬಿಡುತ್ತಿಲ್ಲ. ಇವರ ಬಾಯಿ ಯಾರು ಕಟ್ಟಿದ್ದಾರೋ ಗೊತ್ತಿಲ್ಲ. ಇಷ್ಟೊತ್ತಿಗೆ ಭುಗಿಲೇಳಬೇಕಿತ್ತು ನಾವು 'ಭಾರತೀಯರು' ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಅಂಬೇಡ್ಕರ್ ಅವರ ಸಂವಿಧಾನ ಕಾರಣ. ಭಾರತೀಯರಿಗೆ ಸಂವಿಧಾನವೇ ಎಲ್ಲಾ. ರಾಮಾಯಣ-ಮಹಾಭಾರತ, ಬೈಬಲ್, ಕುರಾನ್‌ಗಿಂತಲೂ ಮಿಗಿಲಾದದ್ದು ಸಂವಿಧಾನ. ಅಂತಹ ಸಂವಿಧಾನಕ್ಕೆ ಅಪಚಾರ ಆಗುತ್ತಿದ್ದು, ಜನತೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇದರ ಬಗ್ಗೆ ಯಾಕೋ ನಾಡಿನ ಸಂಸದರು, ಶಾಸಕರು ಸೊಲ್ಲು ಎತ್ತುತ್ತಿಲ್ಲ. ವಿಪಕ್ಷಗಳೂ ಬಾಯಿ ಮುಚ್ಚಿವೆ ಎಂದು ಬೇಸರ ವ್ಯಕ್ತಪಡಿಸಿದರು.

ನಿನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು 'ಭಾರತ ಮಾತ ದೇವಸ್ಥಾನ' ಉದ್ಘಾಟಿಸಿದ್ದಾರೆ. ಎಲ್ಲೆಡೆ ಭಾರತ ಮಾತ ದೇವಸ್ಥಾನ ಕಟ್ಟುತ್ತೇವೆ ಎಂದೂ ಹೇಳಿದ್ದಾರೆ. ಭಾರತೀಯರ ಹೃದಯ ಮಂದಿರದಲ್ಲಿ ಭಾರತ ಮಾತ ರಾರಾಜಿಸುತ್ತಿದ್ದು, ಅದನ್ನು ಇವರು ಹೇಳಿಕೊಡಬೇಕೇ. ಇರುವ ದೇವರುಗಳೇ ಹೆದರಿ ಓಡಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಛೇಡಿಸಿದರು.

ಮೈಸೂರು ವಿವಿಯನ್ನು ವಿಭಜಿಸಿ ನಾಲ್ಕು ವಿವಿ ಮಾಡುವ ಪ್ರಸ್ತಾಪ ಕೇಳಿ ಬಂದಿದೆ. ಆ ಮೂಲಕ ಖಾಸಗಿಯವರಿಗೆ ಕೊಟ್ಟು ಬಡವರನ್ನು ಉನ್ನತ ಶಿಕ್ಷಣದಿಂದ ದೂರವಿಡುವ ಹುನ್ನಾರ ಇಲ್ಲಿ ನಡೆಯುತ್ತಿದೆ. ಇಡೀ ದೇಶದಲ್ಲಿ ಎನ್‌ಇಪಿ-2020 ಜಾರಿಯಲ್ಲಿ ರಾಜ್ಯವೇ ಮೊದಲು ಎಂದು ಉನ್ನತ ಶಿಕ್ಷಣ ಸಚಿವರು ಹೇಳಿಕೊಳ್ಳುತ್ತಾರೆ. ಆದರೆ ಕೇಂದ್ರ ಸರ್ಕಾರ ಇದಕ್ಕೆ ಅಗತ್ಯವಿರುವ ಹಣವನ್ನೇ ಬಜೆಟ್‌ನಲ್ಲಿ ನೀಡಿಲ್ಲ. ಜೊತೆಗೆ ಕೊಡುತ್ತಿದ್ದನ್ನು ಕಡಿತ ಮಾಡಲಾಗಿದೆ. ಹಣವೇ ಇಲ್ಲದೆ, ಅದಕ್ಕೆ ಬೇಕಿರುವ ಮೂಲಸೌಲಭ್ಯ ಒದಗಿಸುವುದು ಹೇಗೆ ಎಂದು ಪ್ರಶ್ನಿಸಿದರು.

ಮುಂದಿನ ದಿನಗಳಲ್ಲಿ ಚುಂಚನಕಟ್ಟೆ

ಶ್ರೀರಾಮ ಸಕ್ಕರೆ ಕಾರ್ಖಾನೆ 5 ಸಾವಿರ ಟನ್ ಕಬ್ಬು ಅರೆಯಲಿದೆ

ದೊಡ್ಡವಡ್ಡರಗುಡಿಯಲ್ಲಿ ಶ್ರೀ ವೀರಭದ್ರೇಶ್ವರ ದೇವಾಲಯ ಉದ್ಘಾಟಿಸಿದ ಶಾಸಕ ಸಾ.ರಾ.ಮಹೇಶ್



ಭೇರ್ಯ, ಫೆ.13– ಮುಂದಿನ ದಿನಗಳಲ್ಲಿ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ 5 ಸಾವಿರ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಲಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಕೆ.ಆರ್.ನಗರ ತಾಲೂಕಿನ ದೊಡ್ಡವಡ್ಡರಗುಡಿ ಗ್ರಾಮದಲ್ಲಿ ನೂತನ ಶ್ರೀವೀರಭದ್ರೇಶ್ವರ ದೇವಾಲಯ ಉದ್ಘಾಟಿಸಿ ಮಾತನಾಡಿದ ಅವರು, ಮೊದಲು ಒಂದೂವರೆ ಸಾವಿರ ಟನ್ ಕಬ್ಬು ಅರೆಯಲಾಗುತ್ತಿತ್ತು. ಕಾರ್ಖಾನೆ ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್ ಹೊಸ ಯಂತ್ರೋಪಕರಣ ಅಳವಡಿಸಲು 3 ತಿಂಗಳು ಸಕ್ಕರೆ ಕಾರ್ಖಾನೆ ಸ್ಥಗಿತಗೊಳಿಸಿದ್ದಾರೆ. ಜೂನ್ ವೇಳೆಗೆ ಅಂದಾಜು 5 ಸಾವಿರ ಟನ್ ಕಬ್ಬು ಅರೆಯಲು ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ರೈತರು ಯಾವುದೇ ಗಾಳಿ ಸುದ್ದಿಗೆ ಕಿವಿಕೊಡಬಾರದು ಎಂದರು.

ದೊಡ್ಡವಡ್ಡರಗುಡಿ ಗ್ರಾಮಕ್ಕೆ ಹಾಸನ–ಮೈಸೂರು ಹೆದ್ದಾರಿಯಿಂದ ಉತ್ತಮ ರಸ್ತೆ ಮಾಡಲಾಗಿದ್ದು, ಹಳ್ಳದ ಸೇತುವೆಗೆ 1.61 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣ ಮಾಡಲಾಗುವುದು. ಈಗಾಗಲೇ 3 ದೇವಾಲಯಗಳಿಗೆ ಅನುದಾನ ನೀಡಿ ಉದ್ಘಾಟಿಸಲಾಗಿದ್ದು, ನಿಮ್ಮೂರಿನ ರಸ್ತೆಗಳೆಲ್ಲ ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಿದ್ದೇನೆ ಎಂದರು.

ಚುನಾವಣೆ ಹತ್ತಿರ ಬರುತ್ತಿದ್ದಂತೆ ಕೆಲವರು ಊರು ಸುತ್ತಲೂ ಬರುತ್ತಾರೆ. ಚುನಾವಣೆ ಕಳೆದ ನಂತರ ಮಾಯವಾಗುತ್ತಾರೆ. ಆದರೆ ನಾನು ಆ ರೀತಿ ಯಾವತ್ತು ಮಾಡಿಲ್ಲ. ಸದಾ ನಿಮ್ಮಗಳ ಜೊತೆಯಲ್ಲೇ ಇರುತ್ತೇನೆ. ನಿಮ್ಮ ಕಷ್ಟ ಸುಃಖಕ್ಕೆ ಭಾಗಿಯಾಗಿದ್ದು ಕಳೆದ 19 ವರ್ಷಗಳಿಂದ ನಿಮ್ಮ ಸಹೋದರನಾಗಿ ನಿಮ್ಮ ಮನೆ ಮಗನಾಗಿ ತಾಲೂಕಿನ ಸೇವೆ ಮಾಡಿದ್ದೇನೆ ಎಂದರು.

ತೆಂಡೆಕೆರೆ ಶ್ರೀರಂಭಾಪುರಿ ಶಾಖಾ ಮಠದ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮಿ ಭಕ್ತರಿಗೆ ಆಶೀರ್ವಚನ ನೀಡಿದರು. ಇದಕ್ಕೂ ಮೊದಲು ಬೆಳಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ನೂತನ ವಿಗ್ರಹಗಳಿಗೆ ಅಷ್ಟಬಂಧನ ಪ್ರತಿಷ್ಠಾಪನೆ, ರುದ್ರಾಭಿಷೇಕ, ಪ್ರಾಣ ಪ್ರತಿಷ್ಠಾಪನೆ, ರುದ್ರ ಹೋಮ, ಮಂಗಳಾರತಿ, ಪೂರ್ಣಾಹುತಿ ಬಲಿಹರಣ ನಡೆಸಲಾಯಿತು.

ಶ್ರೀವೀರಭದ್ರೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಪೂರ್ಣಕುಂಭ ಹೊತ್ತ ಮುತ್ತೈದೆಯರು, ರಂಗಸ್ಥಲಂ ಸುಪ್ರಸಿದ್ಧ ವೀರಗಾಸೆ ಜನಪದ ಕಲಾವಿದ ನಾಗಮಂಗಲದ ಮಹದೇವಪ್ಪ ತಂಡದ ವೀರಗಾಸೆ ಕುಣಿತದೊಂದಿಗೆ ಗ್ರಾಮದ ಬೀದಿಗಳಲ್ಲಿ ಗುಡ್ಡರು ಹಾಗೂ ಸಾಂಸ್ಕೃತಿಕ ಕಲಾ ಗೊಂಬೆಗಳ ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ದೇವಸ್ಥಾನ ಪ್ರವೇಶಿಸಲಾಯಿತು.

> ದೇವಾಲಯ ಕಟ್ಟಿದರೆ ಸಾಲದು ದೇವರನ್ನು ಪೂಜಿಸುವ ವೇಳೆ ಎಲ್ಲರಿಗೂ ಒಳಿತು ಬಯಸು ಎಂದು ಬೇಡಿಕೊಳ್ಳಬೇಕು. ಇನ್ನೊಬ್ಬರಿಗೆ ಕೇಡು ಬಯಸಿ ದೇವರ ಮುಂದೆ ನನ್ನೊಬ್ಬನಿಗೆ ಒಳ್ಳೆಯದು ಮಾಡು ಎಂದು ಬೇಡಿಕೊಳ್ಳುವುದು ಎಷ್ಟು ಸರಿ ಎಂದ ಅವರು, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಬೇಡಿಕೊಂಡಾಗ ಮಾತ್ರ ನಿಮಗೆ ಯಶಸ್ಸು ಸಿಗುತ್ತದೆ.
> – ಸಾ.ರಾ. ಮಹೇಶ್, ಶಾಸಕ.

ಬಳಿಕ ಗೋಪುರದ ಕಳಸವನ್ನು ಹಾಸನದ ದೇವರಾಜ ಹಾಗೂ ನಂದೀಶ ಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಪ್ರತಿಷ್ಠಾಪಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಸೌಮ್ಯ, ಮಾಜಿ ಅಧ್ಯಕ್ಷ ಡಿ.ಎಸ್.ಯೋಗೇಶ್, ದೊಡ್ಡ ಯಜಮಾನ ಡಿ.ಕೆ.ಪ್ರಭಾಕರ್, ವೀರಯೋಧ ಮನೋಹರ್, ಯಜಮಾನರಾದ ಕೃಷ್ಣನಾಯಕ, ಪ್ರಸನ್ನ, ಡಿ.ಎಂ.ಶಿವಣ್ಣ, ಚಂದ್ರಶೇಖರ್, ಡಿ.ಕೆ.ಗೋವಿಂದ, ರವೀಂದ್ರ, ದೇವಿಕ ಶ್ರೀಧರ್, ಮಾಸ್ಟರ್ ಮಹದೇವ್, ಕಾಶಿ, ಗ್ರಾಪಂ ಸದಸ್ಯರಾದ ಬಸವರಾಜು, ಸಣ್ಣಸ್ವಾಮಿ, ಮಾಜಿ ಸದಸ್ಯೆ ಪೂರ್ಣಿಮಾ, ಜಯಮ್ಮ, ಜೆಡಿಎಸ್ ಮುಖಂಡರಾದ ಕುಮಾರ್, ನರಸಿಂಹೇಗೌಡ, ಚಂದ್ರು, ದೇವು, ಧನಪಾಲ್, ಶಂಭು, ಮಧು ಇತರರಿದ್ದರು.

ಹುಣಸೂರಲ್ಲಿ ಹೆಚ್‌ಪಿಬಿಎಸ್ ಶಾಲೆ ವಾರ್ಷಿಕೋತ್ಸವ



ಹುಣಸೂರು, ಫೆ13– ರಾಜ್ಯದ ಸುಮಾರು 5 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ನಡೆಸಲು ಯೋಗ್ಯವಲ್ಲ ಎಂಬ ಸರ್ಕಾರದ ಇತ್ತೀಚಿನ ಸಮೀಕ್ಷಾ ವರದಿ ಪೋಷಕರಲ್ಲಿ ಭಯ ಮೂಡಿಸಿದೆ ಎಂದು ಮೈಸೂರಿನ ಒಡನಾಡಿ ಸಂಸ್ಥೆ ಮುಖ್ಯಸ್ಥ ಸ್ಟ್ಯಾನ್ಲಿ ಆತಂಕ ವ್ಯಕ್ತಪಡಿಸಿದರು.

ನಗರದ ಹೆಚ್‌ಪಿಬಿಎಸ್ ಶಾಲೆ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳ ಉಳಿವಿಗೆ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲು ಪೋಷಕರು ಮನಸ್ಸು ಮಾಡಬೇಕು ಎಂದರು.

ಸರ್ಕಾರಿ ಶಾಲೆಗಳ ಇಂದಿನ ಸ್ಥಿತಿ ಹೀನಾಯವಾಗಿದ್ದು, ಇದೇ ರೀತಿ ಮುಂದುವರೆದರೆ ಬಡ ಹಾಗೂ ಮಧ್ಯಮ ಕುಟುಂಬಗಳ ಮಕ್ಕಳ ಭವಿಷ್ಯದ ಆತಂಕ ಕಾಡುತ್ತಿದೆ ಎಂದರು.

ಟ್ಯಾಲೆಂಟ್ ಸಂಸ್ಥೆ ಮುಖ್ಯಸ್ಥ ನವೀನ್ ರೈ ಮಾತನಾಡಿ, ಒಂದು ಕಾಲದಲ್ಲಿ ಜಿಲ್ಲೆಯ ಪ್ರಮುಖ ಖಾಸಗಿ ಶಾಲೆಗಳಿಗೆ ಕ್ರೀಡೆಯಲ್ಲಿ ಪೈಪೋಟಿ ನೀಡುತ್ತಿದ್ದ ಹೆಚ್‌ಪಿಬಿಎಸ್ ಶಾಲೆ ನಂತರ ದಿನಗಳಲ್ಲಿ ಅವಸಾನದತ್ತ ಸಾಗಿ ಈಗ ಪುನಶ್ಚೇತನ ಕಂಡಿರುವುದು ಸಂತೋಷದ ಸಂಗತಿ. ಮುಂದಿನ ದಿನಗಳಲ್ಲಿ ಈ ಶಾಲೆ ಅಭಿವೃದ್ಧಿಗೆ ಸಹಕರಿಸುವುದಾಗಿ ಭರವಸೆ ನೀಡಿದರು.

ಮುಖ್ಯ ಶಿಕ್ಷಕ ಡಾ.ಮಾಧುಪ್ರಸಾದ್ ಮಾತನಾಡಿ, ಇತಿಹಾಸ ಪ್ರಸಿದ್ಧ ಈ ಶಾಲೆ ಅವನತಿಯತ್ತ ಸಾಗಿ ಮುಚ್ಚುವ ಹಂತ ತಲುಪಿತ್ತು. ಅಂತಹ ಸಮಯದಲ್ಲಿ ಹಳೇ ವಿದ್ಯಾರ್ಥಿಗಳ ಪ್ರಯತ್ನದ ಫಲವಾಗಿ ಶಾಲೆ ಪ್ರಗತಿ ಕಾಣುತ್ತಿದ್ದು, ಇದಕ್ಕೆ ಸಹಕರಿಸುತ್ತಿರುವ ಎಸ್‌ಡಿಎಂಸಿ ಸಮಿತಿ, ಶಿಕ್ಷಕರು, ಪೋಷಕರುಗಳಿಗೆ ಧನ್ಯವಾದ ಅರ್ಪಿಸಿ ಮುಂದಿನ ದಿನಗಳಲ್ಲೂ ಇದೆ ರೀತಿ ಸಹಕಾರ ಕೋರಿದರು.

ಕಾರ್ಯಕ್ರಮದಲ್ಲಿ ವಕೀಲರಾದ ಪುಟ್ಟರಾಜು, ಕರವೇ ಅಧ್ಯಕ್ಷ ಪುರುಷೋತ್ತಮ್, ನಗರಸಭಾ ಸದಸ್ಯ ವಿವೇಕಾನಂದ, ಶಿಕ್ಷಕರ ಸಂಘದ ಅಧ್ಯಕ್ಷ ನರಸಿಂಹ, ಸಿಆರ್‌ಪಿ ಸ್ಮಿತಾ ಶಿಂಧೆ, ಶಿಕ್ಷಕ ಹಾಗೂ ಸಾಹಿತಿಗಳಾದ ಮಹದೇವ್.ಜೆ, ಲೋಕೇಶ್, ಪೋಷಕರ ಸಂಘದ ಅಧ್ಯಕ್ಷ ಹಾಗು ಪತ್ರಕರ್ತ ಮುಹಮ್ಮದ್ ರಫೀಕ್, ಎಸ್‌ಡಿಎಂಸಿ ಸಮಿತಿ ಉಪಾಧ್ಯಕ್ಷೆ ನಂದಿನಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.



ಹುಣಸೂರು ತಾಲೂಕಿನ ಗಾವಡಗೆರೆ ಗುರುಲಿಂಗ ಜಂಗಮ ಮಠದ ಪೀಠಾಧ್ಯಕ್ಷ ಶ್ರೀನಟರಾಜ ಸ್ವಾಮೀಜಿ ಅವರ 64ನೇ ಹುಟ್ಟುಹಬ್ಬದ ಅಂಗವಾಗಿ ಮಠಕ್ಕೆ ಭೇಟಿ ನೀಡಿದ ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಸ್ವಾಮೀಜಿಗೆ ಶುಭಾಶಯ ಕೋರಿ, ಆಶೀರ್ವಾದ ಪಡೆದರು. ಈ ಸಂದರ್ಭ ಮಠದ ಆಡಳಿತಾಧಿಕಾರಿ ಶಿವರಾಜ್, ಮುಖಂಡರಾದ ಪುಟ್ಟಲಿಂಗಪ್ಪ, ನಾಗರಾಜ್ ಹಾಗೂ ಜೆಡಿಎಸ್ ಕಾರ್ಯಕರ್ತರು ಹಾಜರಿದ್ದರು.

ಫೆ.16, ಕಾಳಮ್ಮದೇವಿ ದೇವಾಲಯ ಉದ್ಘಾಟನೆ



ತಿ.ನರಸೀಪುರ, ಫೆ13– ಮಾಜಿ ಸಚಿವರು, ಶಾಸಕರ ಅನುದಾನ ಮತ್ತು ಭಕ್ತರ ಕಾಣಿಕೆಯಿಂದ 64 ಲಕ್ಷ ರೂ. ವೆಚ್ಚದಲ್ಲಿ ಜಗಜೀವನ ಗ್ರಾಮದಲ್ಲಿ ನಿರ್ಮಿಸಿರುವ ಕಾಳಮ್ಮದೇವಿ ದೇವಾಲಯ ಉದ್ಘಾಟನೆ ಹಾಗೂ ದೇವಿ ವಿಗ್ರಹ ಪ್ರತಿಷ್ಠಾಪನಾ ಕಾರ್ಯ ಫೆ16 ರಿಂದ 2 ದಿನಗಳ ವಿಜೃಂಭಣೆಯಿಂದ ನಡೆಯಲಿದೆ ಎಂದು ಶ್ರೀಕಾಳಮ್ಮದೇವಿ ದೇವಾಲಯ ಟ್ರಸ್ಟ್ ಅಧ್ಯಕ್ಷ ಎಸ್.ಸಿದ್ದಪ್ಪ ತಿಳಿಸಿದರು.

ತಾಲೂಕಿನ ಜಗಜೀವನ ಗ್ರಾಮದ ದೇವಾಲಯದ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಜಗಜೀವನ ಗ್ರಾಮಕ್ಕೆ 200 ವರ್ಷಗಳ ಇತಿಹಾಸವಿದೆ. ಇಲ್ಲಿ ಮಹಾಶಕ್ತಿಶಾಲಿ ಕಾಳಮ್ಮದೇವಿ ನೆಲೆಗೊಂಡಿದ್ದು, ದೇವಾಲಯ ಬಹಳ ಮಹತ್ವ ಪಡೆದಿದೆ. ಬಹುವರ್ಷಗಳಿಂದ ಹೆಂಚಿನ ಮನೆಯಲ್ಲಿದ್ದ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲಾಗಿದೆ ಎಂದರು.

ದೇವಸ್ಥಾನ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಸಚಿವರಾಗಿದ್ದ ಹೆಚ್.ಆಂಜನೇಯ 12 ಲಕ್ಷ ರೂ. ಅನುದಾನ ಹಾಗೂ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮುದಾಯ ಭವನಕ್ಕೆ ನೀಡಿದ್ದ 4 ಲಕ್ಷ ರೂ.ಗಳೊಂದಿಗೆ ಸಾಕಷ್ಟು ದಾನಿಗಳು ದೇವಾಲಯ ನಿರ್ಮಾಣಕ್ಕೆ ಲಕ್ಷಾಂತರ ರೂ. ಕಾಣಿಕೆ ನೀಡಿದ್ದು, ಈಗ ದೇವಸ್ಥಾನ ಪ್ರತಿಷ್ಠಾಪನಾ ಹಂತಕ್ಕೆ ಬಂದು ತಲುಪಿದೆ. ತತ್ಸಂಬಂಧ ಇದೇ ತಿಂಗಳು 16 ರಿಂದ 2 ದಿನಗಳ ಕಾಲ ದೇವಸ್ಥಾನ ಉದ್ಘಾಟನೆ ಹಾಗೂ ಪ್ರತಿಷ್ಠಾಪನೆ ಕಾರ್ಯ ವಿಜೃಂಭಣೆಯಿಂದ ಜರುಗಲಿದ್ದು, ಅಂದು ಕಾವೇರಿ ನದಿಯಿಂದ 201 ಮಂದಿ ಕಳಸಹೊತ್ತ ಸುಮಂಗಲಿಯರೊಂದಿಗೆ 5 ರಿಂದ 6 ಸಾವಿರ ಜನ ಕಾಲ್ನಡಿಗೆಯಲ್ಲಿ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿ ಬರಲಿದ್ದಾರೆ. 17 ರಂದು ಅಲಂಕಾರ, ವಿಶೇಷ ಅಭಿಷೇಕ, ಬಲಿ ಪ್ರಧಾನ ಹೋಮ, ಜಯಾದಿ ಹೋಮ, ಪೂರ್ಣಾಹುತಿ ನೇತ್ರೋಗ್ಮಿಲನ, ವಿಶೇಷ ಅಲಂಕಾರ, ಮಹಾ ಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮ ಇರಲಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಮಂಜು ಮಾತನಾಡಿ, ದೇವಾಲಯದ ಆವರಣದಲ್ಲಿ 17 ರಂದು 4 ಸಾವಿರ ಜನರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಸ್ಥಾನದ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಮುಖಂಡ ಎಂ.ಸುರೇಶ್, ಸಿದ್ದನಹುಂಡಿ ನಟರಾಜು, ಗ್ರಾಮದ ಸಿದ್ದಪ್ಪ, ಮಲ್ಲೇಶ್, ನಾಗರಾಜು, ಸೋಮಣ್ಣ, ನವೀನ್ ಕುಮಾರ್ ಗೋಷ್ಠಿಯಲ್ಲಿದ್ದರು.

ಚಿಕ್ಕದೇವಮ್ಮನ ಬೆಟ್ಟ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಸರಗೂರು, ಫೆ.13– ತಾಲೂಕಿನ ಇತಿಹಾಸ ಪ್ರಸಿದ್ಧ ಚಿಕ್ಕದೇವಮ್ಮನ ಬೆಟ್ಟದಲ್ಲಿ 80 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಚಿಕ್ಕದೇವಮ್ಮನ ಬೆಟ್ಟದ ರಸ್ತೆ ಅಭಿವೃದ್ಧಿಗೆ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆ. ಸರ್ಕಾರ ಅನುದಾನ ನೀಡಿದ ಹಿನ್ನೆಲೆಯಲ್ಲಿ ಬೆಟ್ಟದ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಬೆಟ್ಟದಲ್ಲಿ ತಡೆಗೋಡೆ, ಮೆಟ್ಟಿಲುಗಳಾಗುತ್ತಿವೆ. ಆದರೆ ರಸ್ತೆಯೇ ಸರಿ ಇಲ್ಲ. ಇದನ್ನು ಸರಿಪಡಿಸಬೇಕೆಂದು ಹಲವು ದೂರು ಕೇಳಿ ಬಂದವು. ಹೀಗಾಗಿ ಇದನ್ನು ಗಮನದಲ್ಲಿಟ್ಟುಕೊಂಡು ಬೆಟ್ಟದ ರಸ್ತೆ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ ಎಂದರು.

ಜಿಪಂ ಸದಸ್ಯ ಪಿ.ರವಿ ಮಾತನಾಡಿ, ಶಾಸಕರು ತಾಲೂಕು ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಅವರಿಗೆ ತಾಲೂಕಿನ ಜನತೆ ಮತಗಳನ್ನು ಕೂಲಿ ರೂಪದಲ್ಲಿ ನೀಡಿ ಅವರ ಗೆಲುವಿಗೆ ಶ್ರಮಿಸಬೇಕು. ಜೊತೆಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಹೆಚ್.ಡಿ.ಕೋಟೆ ಕ್ಷೇತ್ರದ ಅಭಿವೃದ್ಧಿಗೆ ಮತ್ತೊಮ್ಮೆ ಅನಿಲ್ ಚಿಕ್ಕಮಾದು ಅವರನ್ನು ಶಾಸಕರನ್ನಾಗಿ ಮಾಡಬೇಕು. ಇದಕ್ಕೆ ಎಲ್ಲರೂ ಒಗ್ಗೂಡಿ ಪಣ ತೊಡಬೇಕು ಎಂದರು.

ಜಿಪಂ ಮಾಜಿ ಸದಸ್ಯರಾದ ಪಿ.ರವಿ, ಕೆ.ಚಿಕ್ಕವೀರನಾಯಕ, ಮುಖಂಡರಾದ ಶಂಭುಲಿಂಗನಾಯಕ, ಬಸವರಾಜು, ಬಸವರಾಜು, ಹರೀಶ್, ಎಂ.ಕೆಂಡಗಣ್ಣಸ್ವಾಮಿ, ಬೆಟ್ಟದ ಪಾರುಪತ್ತೇದಾರ ಮಹದೇವಸ್ವಾಮಿ, ಚಿನ್ನಸ್ವಾಮಿ, ಪುಟ್ಟೇಗೌಡ, ಸಿದ್ದರಾಜು ಇನ್ನಿತರರಿದ್ದರು.



ಬನ್ನೂರಿನ ಸಮೀಪದ ಮಾಕನಹಳ್ಳಿ ಹೆಗ್ಗೆರೆಯಲ್ಲಿ ಹೇಮಾದ್ರಂಭ ದೇವಿ ತೆಪ್ಪೋತ್ಸವ ಸೋಮವಾರ ಅದ್ಧೂರಿಯಾಗಿ ನಡೆಯಿತು.

ಕಿರಣ್‌ಕುಮಾರ್‌ಗೆ ಪಿಎಚ್.ಡಿ

ಮೈಸೂರು, ಫೆ. 13– ಡಾ. ಜೆ.ಎಸ್. ಆಶಾದೇವಿ ಅವರ ಮಾರ್ಗದರ್ಶನದಲ್ಲಿ ಕೆ.ವಿ. ಕಿರಣ್ ಕುಮಾರ್ ಅವರು ಜೆನೆಟಿಕ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಮಹಾಪ್ರಬಂಧ'ವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.





ಪಿರಿಯಾಪಟ್ಟಣದ ಬ್ಯಾಡರ ಬಿಲಗೂಳಿ ಗ್ರಾಮದಲ್ಲಿ ಡೈರಿ ಕಟ್ಟಡಕ್ಕೆ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಭೂಮಿ ಪೂಜೆ ನೆರವೇರಿಸಿದರು. ಸಂಘದ ಅಧ್ಯಕ್ಷ ಮಲ್ಲೇಶ್, ಮಾಜಿ ಗ್ರಾಪಂ ಅಧ್ಯಕ್ಷ ಮೈಲಾರಪ್ಪ, ಚಿಕ್ಕನೇರಳೆ ಗ್ರಾಪಂ ಸದಸ್ಯ ಕುಬೇರ್, ಮಾಜಿ ಅಧ್ಯಕ್ಷ ಸುನೀಲ್, ಮುಖಂಡರಾದ ಮಹದೇವ್, ರಾಮದಾಸ್, ಕೃಷ್ಣೇಗೌಡ, ಬೋರೇಗೌಡ, ಸಂಘದ ನಿರ್ದೇಶಕರು, ಸಿಇಓ ವಿಜಯ್ ಹಾಗೂ ಗ್ರಾಮಸ್ಥರು ಇದ್ದರು.

ಇಂದು ಗೋಣಹಳ್ಳಿ ಮಾರಮ್ಮ ವಾರ್ಷಿಕೋತ್ಸವ

ಕಂಪಲಾಪುರ, ಫೆ.13– ಗ್ರಾಮದ ಗೋಣಹಳ್ಳಿ ಮಾರಮ್ಮ ದೇವಸ್ಥಾನದ 3ನೇ ವಾರ್ಷಿಕೋತ್ಸವ ಫೆ.14ರಂದು ನಡೆಯಲಿದೆ. ಬೆಳಗ್ಗೆ 7 ಗಂಟೆಗೆ ಹೆಗ್ಗೆರೆಯಿಂದ ಕಳಸ ತರುವುದು. ನಂತರ ಪೂಜಾ ವಿಧಿವಿಧಾನಗಳು ನೆರವೇರಲಿದ್ದು, 12 ಗಂಟೆಗೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎಜಾಜ್ ಅಹಮದ್ ನಿಧನ

ಹುಣಸೂರು, ಫೆ13– ನಗರದ ನಿವಾಸಿ ಎಜಾಜ್ ಅಹಮದ್ (70) ಸೋಮವಾರ ನಿಧನರಾದರು.



ಮೃತರು ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶಬ್ಬೀರ್ ನಗರದ ಖಬರಸ್ತಾನ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫೆ.20ಕ್ಕೆ, ಬನ್ನೂರು, ನಂಜನಗೂಡಿಗೆ ಪ್ರಜಾಧ್ವನಿ ಯಾತ್ರೆ

ಕಾರ್ಯಕ್ರಮ ಯಶಸ್ಸಿಗೆ ಮಾಜಿ ಶಾಸಕ ಹೆಚ್.ಸಿ. ಮಹದೇವಪ್ಪ ಕರೆ

ತಿ.ನರಸೀಪುರ/ನಂಜನಗೂಡು, ಫೆ.13– ಕಾಂಗ್ರೆಸ್‌ನ ಪ್ರಜಾಧ್ವನಿ ಯಾತ್ರೆ ಫೆ.20 ರಂದು ಬನ್ನೂರು, ನಂಜನಗೂಡಿಗೆ ಆಗಮಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಕರೆ ನೀಡಿದ್ದಾರೆ.

ತಿ.ನರಸೀಪುರ: ಯಾವುದೇ ಸಮುದಾಯದ ಜನರು ಯಾವುದೇ ಪಕ್ಷಕ್ಕೆ ಗುತ್ತಿಗೆಯಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ತೀರ್ಮಾನ ಕೈಗೊಳ್ಳುತ್ತಾರೆ. ಕ್ಷೇತ್ರದ ಜನರು ಮನಸ್ಸು ಮಾಡಿದರೆ ಯಾರನ್ನ ಬೇಕಾದರೂ ಗೆಲ್ಲಿಸಲ್ಲಿದ್ದಾರೆ ಅಥವಾ ಸೋಲಿಸಲಿದ್ದಾರೆ. ಹೀಗಾಗಿ ಪ್ರಜಾಧ್ವನಿ ಯಾತ್ರೆ ಯಶಸ್ವಿಗೊಳಿಸುವ ಮೂಲಕ ಬನ್ನೂರು ಕಾಂಗ್ರೆಸ್ ಭದ್ರಕೋಟೆ ಎಂಬ ಸಂದೇಶ ನೀಡಬೇಕು ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಬನ್ನೂರು ಪಟ್ಟಣದ ಚಾಮನಹಳ್ಳಿಯಲ್ಲಿ ಸೋಮವಾರ ನಡೆದ ಪ್ರಜಾಧ್ವನಿ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬನ್ನೂರು ಜೆಡಿಎಸ್ ಭದ್ರಕೋಟೆಯಲ್ಲ ಎಂಬುದನ್ನು ಸುನೀತಾ ವೀರಪ್ಪಗೌಡ ಶಾಸರಾಗಿದ್ದಾಗಲೇ ಸಾಬೀತು ಮಾಡಿದ್ದಾರೆ. ನನ್ನ ಅಧಿಕಾರವಧಿಯಲ್ಲಿ ರಾಜ್ಯ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.





ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮಾತನಾಡಿ, ಅಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಆಗಮಿಸುವ ಯಾತ್ರೆಯನ್ನು ಬೈಕ್ ರ‍್ಯಾಲಿಯೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಲಾಗುವುದು. ಬನ್ನೂರಿನ ಶ್ರೀರಂಗಪಟ್ಟಣ ರಸ್ತೆಯ ಚಿತ್ರಮಂದಿರ ಆವರಣದಲ್ಲಿ ನಡೆಯುವ ಸಮಾವೇಶದಲ್ಲಿ 10 ಸಾವಿರ ಕಾರ್ಯಕರ್ತರು ಭಾಗವಹಿಸಬೇಕು. ಮಾಜಿ ಸಿಎಂ ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಅವರ ಪಂಚರತ್ನ ಯಾತ್ರೆಗೂ ಮಿಗಿಲಾಗಿ ಪ್ರಜಾಧ್ವನಿ ಯಾತ್ರೆ ನಡೆಯಬೇಕು ಎಂದರು.

ಮೈಮುಲ್ ನಿರ್ದೇಶಕ ಆರ್.ಚಲುವರಾಜು, ಮಾಜಿ ಶಾಸಕ ಎಸ್.ಕೃಷ್ಣಪ್ಪ ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿದರು. ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಗ್ರಾಪಂ ಸದಸ್ಯರ ಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಬೃಂದಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚೆನ್ನಕೇಶವ, ಮಹಿಳಾಧ್ಯಕ್ಷೆ ವೀಣಾ, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎ.ಎನ್.ಸ್ವಾಮಿ, ಪುರಸಭಾಧ್ಯಕ್ಷೆ ಭಾಗ್ಯ, ಮಾಜಿ ಅಧ್ಯಕ್ಷರಾದ ಅಜೀಜ್ ಉಲ್ಲಾ ಮುನಾವರ್ ಪಾಷ, ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಸದಸ್ಯರಾದ ಮಹೇಶ, ಮೂರ್ತಿ, ಲೋಕಾಂಬಿಕ, ಮಾಜಿ ಸದಸ್ಯರಾದ ಡಾ.ಬಿ.ಕೆ.ಜ್ಞಾನಪ್ರಕಾಶ್, ಬಿ.ಕೆ.ಕೃಷ್ಣ, ರಮೇಶ, ಎಸ್.ಸಿದ್ದೇಗೌಡ, ಮೈಮುಲ್ ಮಾಜಿ ನಿರ್ದೇಶಕ ಪ್ರಭಾಕರ್, ಗುತ್ತಿಗೆದಾರ ಕೆ.ಎಂ.ಮಧುಕುಮಾರ್, ಮಹೇಂದ್ರ, ಸಿದ್ದೇಗೌಡ, ಹೊಂಬಾಳಯ್ಯ, ಮುಖಂಡರಾದ ನಾಗಭೂಷಣ, ಟಿ.ಎಸ್.ಲೋಕೇಶ್, ಅಶೋಕ್ ಕುಮಾರ್, ಪ್ರೊ.ಸಿದ್ದರಾಜು, ಆನಂದಮೂರ್ತಿ, ವೆಂಕಟೇಗೌಡ, ಕೃಷ್ಣೇಗೌಡ, ನಾಗರಾಜು, ಜಯಮೂರ್ತಿ, ರಾಮಕೃಷ್ಣ, ರಮೇಶ, ಸ್ವಾಮಿಗೌಡ, ಕ್ಯಾತೇಗೌಡ, ಕಪಾಲಿ ಮಂಜು ಇನ್ನಿತರರಿದ್ದರು.

> **ಡಿಕೆಶಿ ಒಕ್ಕಲಿಗರೇ, ಸಿಎಂ ಆಗಬೇಕಲ್ವಾ**
>
> ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೂಡ ಒಕ್ಕಲಿಗರೇ. ಮುಂಬರುವ ಚುನಾವಣೆಯಲ್ಲಿ ಮುಖ್ಯಮಂತ್ರಿಯಾಗಬೇಕು. ಹೀಗಾಗಿ ಬನ್ನೂರು ಜನತೆ ಮತಗಳು ಕಾಂಗ್ರೆಸ್‌ಗೆ ಅಗತ್ಯವಿದೆ. ಶಿವಕುಮಾರ್‌ಗೆ ರಾಜಕೀಯ ನೈತಿಕ ಬೆಂಬಲ ನೀಡಬೇಕು. 3 ವರ್ಷ ಜಿಪಂ ಸದಸ್ಯ, 5 ವರ್ಷ ಶಾಸಕರಾಗಲು ಅಶ್ವಿನ್ ಕುಮಾರ್ ನಮ್ಮ ಮನೆ ಸೋಫಾ ಸವೆಸಿ ನಮ್ಮನ್ನೇ ಮರೆತು ಬಿಟ್ಟ, ಬಿಜೆಪಿಯಲ್ಲಿ ಒಳ್ಳೆಯ ಅಭ್ಯರ್ಥಿ ಇಲ್ಲ. ಹಾಗಾಗಿ ಕಾಂಗ್ರೆಸ್‌ಗೆ ಯಾವುದೇ ಷರತ್ತುಗಳಿಲ್ಲದೆ ಸೇರ್ಪಡೆಗೊಂಡಿದ್ದೇನೆ. –ಜೆ.ಸುನೀತಾ ವೀರಪ್ಪಗೌಡ, ಮಾಜಿ ಶಾಸಕಿ.

ನಂಜನಗೂಡು: ನಗರದ ಹೌಸಿಂಗ್‌ಬೋರ್ಡ್ ಕಾಲೋನಿಯಲ್ಲಿರುವ ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪನವರ ನಿವಾಸದಲ್ಲಿ ಪ್ರಜಾಧ್ವನಿ ಯಾತ್ರೆ ಪೂರ್ವಭಾವಿ ಸಭೆ ನಡೆಯಿತು.


ಸಭೆಯಲ್ಲಿ ಮಾತನಾಡಿದ ಹೆಚ್.ಸಿ.ಮಹದೇವಪ್ಪ, ನಂಜನಗೂಡಿನ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಸಂಜೆ 5 ಗಂಟೆಗೆ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಕಾರ್ಯಕ್ರಮ ನಡೆಯಲಿದೆ. ಫೆಬ್ರವರಿ ಕೊನೆ ವಾರ ಕಾಂಗ್ರೆಸ್ ಮೊದಲ ಪಟ್ಟಿ ಬಿಡುಗಡೆಯಾಗಲಿದ್ದು, 140 ಕ್ಷೇತ್ರಗಳ ಅಭ್ಯರ್ಥಿಗಳ ಘೋಷಣೆಯಾಗಲಿದೆ. ನಂಜನಗೂಡು ಕ್ಷೇತ್ರದಲ್ಲಿ ಈಗಾಗಲೇ ಸರ್ವೆ ನಡೆಸಿ ಅಭಿಪ್ರಾಯ ಸಂಗ್ರಹಣೆ ಮಾಡಿದ್ದಾರೆ. ಗೆಲ್ಲುವವರು ಯಾರು ಎಂದು ನಿರ್ಧರಿಸಿ ಟಿಕೆಟ್ ಅಂತಿಮಗೊಳಿಸಲಿದ್ದಾರೆ. ನಾನು ಸೇರಿದಂತೆ ಧ್ರುವನಾರಾಯಣ್, ಕೇಶವಮೂರ್ತಿ ಹೆಸರು ಅಂತಿಮಗೊಂಡಿದೆ. ಸ್ಕ್ರೀನಿಂಗ್ ಸಮಿತಿ ನಮ್ಮ ಮೂವರಲ್ಲಿ ಯಾರಿಗೆ ಟಿಕೆಟ್ ಕೊಟ್ಟರೆ ಯಾವ ಪರಿಣಾಮ ಬೀರುತ್ತದೆ. ಕೊಡದಿದ್ದರೆ ಏನಾಗುತ್ತದೆ ಎಂಬುದನ್ನು ತೀರ್ಮಾನಿಸಿ ಅಂತಿಮ ಅಭ್ಯರ್ಥಿ ಆಯ್ಕೆ ಮಾಡಲಿದ್ದಾರೆ. ಹೀಗಾಗಿ ಯಾವುದೇ ಬಣ ರಾಜಕೀಯ ಮಾಡದೆ ಎಲ್ಲರೂ ಒಟ್ಟಾಗಿ ಕಾಂಗ್ರೆಸ್ ಪಕ್ಷದ ಪ್ರಜಾಧ್ವನಿಯಾತ್ರೆಯನ್ನು ಯಶಸ್ವಿಗೊಳಿಸೋಣ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಚೋಳರಾಜು, ಕೆ.ಬಿ.ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಮಾಜಿ ಸದಸ್ಯ ಎಚ್.ಎಸ್. ಮೂಗಶೆಟ್ಟಿ, ಚಾಮರಾಜು, ಮುಖಂಡರಾದ ಇಂಧನಬಾಬು, ಮಹದೇವಪ್ಪ, ಮಹೇಶ್, ಅಜ್ಗರ್, ನಾಸಿರ್, ಎಚ್.ಎಂ.ಶಿವಣ್ಣ ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಜಿ ಪುರಸಭಾಧ್ಯಕ್ಷ ಪಿ.ಶ್ರೀನಿವಾಸ್ ಸೇರಿದಂತೆ ಹಲವರಿದ್ದರು.

ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ

ಶ್ರದ್ಧಾಭಕ್ತಿಯಿಂದ ಆಚರಿಸುತ್ತಿರುವ ದೇವಿಯ ಅಪಾರ ಭಕ್ತರು





ಮೈಸೂರು, ಫೆ.13(ಎಂಕೆ)– ಮೈಸೂರಿನ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಒಂದಾದ ಉತ್ತನಹಳ್ಳಿಯ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಶ್ರದ್ಧಾಭಕ್ತಿಯಿಂದ ನೆರವೇರಿತು.

ಚಾಮುಂಡೇಶ್ವರಿಯ ಸಹೋದರಿಯೆಂದೇ ಪ್ರಸಿದ್ಧಿ ಪಡೆದಿರುವ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಿಗೆ ಮೈಸೂರು, ರಾಮನಗರ, ಮಂಡ್ಯ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಪಾಲ್ಗೊಂಡ ಭಕ್ತರು ವಿಶೇಷ ಪೂಜೆ ನಡೆಸಿ ಪ್ರಾರ್ಥನೆ ಸಲ್ಲಿಸಿದರು.

ಫೆ.12 ರಂದು ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮವರ ವರ್ಧಂತಿ ಪ್ರಯುಕ್ತ ಬೆಳಿಗ್ಗೆಯಿಂದಲೇ ಪೂಜಾ ಕೈಂಕರ್ಯಗಳು ನಡೆದವು. ಸಾಂಸ್ಕೃತಿಕ ಕಲಾತಂಡಗಳೊಂದಿಗೆ ರಾತ್ರಿ 8 ಗಂಟೆಗೆ ಆರಂಭವಾದ ಅಮ್ಮನವರ ಮೆರವಣಿಗೆ ಉತ್ತನಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ತಡರಾತ್ರಿ 2 ಗಂಟೆಗೆ ದೇವಸ್ಥಾನ ತಲುಪಿತು. ಮೆರವಣಿಗೆಗೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ಕೆಪಿಸಿಸಿ ಸದಸ್ಯ ನರಸೇಗೌಡ, ಉತ್ತನಹಳ್ಳಿ ಶಿವಣ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು. ಈ ವೇಳೆ ದೇವಸ್ಥಾನದ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡವರನ್ನು ಸನ್ಮಾನಿಸಲಾಯಿತು.

ಫೆ.13 ರಂದು ದೇವಸ್ಥಾನದಲ್ಲಿ ಭಕ್ತರಿಗೆ ವಿಶೇಷ ದರ್ಶನ ವ್ಯವಸ್ಥೆ ಕಲ್ಪಿಸಲಾಗಿತ್ತು. ಮಧ್ಯಾಹ್ನದ ವೇಳೆಗೆ ಉತ್ತನಹಳ್ಳಿ, ಏಳಿಗೆಹುಂಡಿ, ಹಡಜನ ಗ್ರಾಮಸ್ಥರು ದೇವಿಗೆ ತಂಪು ತಂದು(ತಂಬಿಟ್ಟು ಆರತಿ)ಆರತಿ ಬೆಳಗಿದರಲ್ಲದೆ ಇಷ್ಟಾರ್ಥಗಳು ಕೈಗೂಡುವಂತೆ ಪೂಜೆ ಸಲ್ಲಿಸಿದರು. ರಾತ್ರಿ ವೇಳೆ ಜಾತ್ರಾ ಮಹೋತ್ಸವದ ಅಂಗವಾಗಿ ಉತ್ತನಹಳ್ಳಿ ಗ್ರಾಮದಲ್ಲಿ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ಪೌರಾಣಿಕ ನಾಟಕ ಹಾಗೂ ಏಳಿಗೆಹುಂಡಿಯಲ್ಲಿ ಸೌಂದರ್ಯ ಸೇಡು ಸಾಮಾಜಿಕ ನಾಟಕ ಪ್ರದರ್ಶನ ನಡೆಯಿತು.

ಮಾಂಸಾಹಾರ ಸೇವನೆ: ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಕಡೆಯ ದಿನವಾದ ನಾಳೆ(ಫೆ.14) ಉತ್ತನಹಳ್ಳಿ ಮತ್ತು ಏಳಿಗೆಹುಂಡಿ ಗ್ರಾಮಗಳಲ್ಲಿ ಗ್ರಾಮಸ್ಥರು ಮಾಂಸಾಹಾರ ಭೋಜನ ತಯಾರಿಸಿ ನೆಂಟರಿಷ್ಟರಿಗೆ ಊಣಬಡಿಸಲಿದ್ದಾರೆ.

ಮೈಸೂರು ಮೇಟಗಳ್ಳಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ



ಮೈಸೂರು, ಫೆ.13(ಎಸ್‌ಬಿಡಿ)– ಮೈಸೂರಿನ ಮೇಟಗಳ್ಳಿ ವಾರ್ಡ್(ಸಂ.7) ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಸೋಮವಾರ ಭೂಮಿಪೂಜೆ ನೆರವೇರಿಸಿದರು.

ಅಂಗನವಾಡಿ ಕಟ್ಟಡದ ಹಿಂಭಾಗದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ಪರಿಶಿಷ್ಟ ಜನಾಂಗದ ಫಲಾನುಭವಿಗಳಿಗಾಗಿ 100 ಮನೆಗಳ ನಿರ್ಮಾಣ ಕಾಮಗಾರಿಗೆ ಸ್ಥಳೀಯ ಕಾರ್ಪೊರೇಟರ್ ರಮೇಶ್ ಅವರೊಂದಿಗೆ ಭೂಮಿಪೂಜೆ ನೆರವೇರಿಸಿದ ಶಾಸಕರು, ಫಲಾನುಭವಿ ವಂತಿಗೆ 48 ಸಾವಿರ ರೂ. ಹಾಗೂ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಮಂಡಳಿ ವಂತಿಕೆ(4.50 ಲಕ್ಷ ರೂ.) ಸೇರಿ ಒಟ್ಟು 5 ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಿಸಿ ಕೊಡುವುದಾಗಿ ಇದೇ ವೇಳೆ ತಿಳಿಸಿದರು.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ 2 ಲಕ್ಷ ರೂ. ಅನುದಾನದಲ್ಲಿ ಕರಕುಶಲನಗರದ ಅಂಗನವಾಡಿ ಕಟ್ಟಡಕ್ಕೆ ಪೀಠೋಪಕರಣಗಳ ವಿತರಿಸಿದರು. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ 40 ಲಕ್ಷ ರೂ. ಅನುದಾನದಲ್ಲಿ ಅಂಬೇಡ್ಕರ್ ಜ್ಞಾನ ಲೋಕದ 1 ಹಾಗೂ 2ನೇ ಕ್ರಾಸ್ ಕಾಂಕ್ರಿಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

ಬಳಿಕ ಜಲದರ್ಶಿನಿಯಲ್ಲಿರುವ ತಮ್ಮ ಕಚೇರಿಯಲ್ಲಿ ಸಾಲ ಸೌಲಭ್ಯ ಹಾಗೂ ಸಹಾಯಧನ ಕೋರಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಅರ್ಜಿ ಸಲ್ಲಿಸಿದ್ದ ಫಲಾಪೇಕ್ಷಿಗಳಲ್ಲಿ, 2022–23ನೇ ಸಾಲಿನ 44 ಮಂದಿಗೆ ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಹಾಗೂ ಸಹಾಯಧನ ಮಂಜೂರಾತಿ ಪತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ಪಾಲಿಕೆ ಸದಸ್ಯ ಚಿಕ್ಕವೆಂಕಟು, ನಗರಪಾಲಿಕೆ ಮಾಜಿ ಸದಸ್ಯ ದೇವರಾಜು, ಬಿಎಲ್‌ಎ–1 ದಿನೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಪುನೀತ್, ವಾರ್ಡ್ ಅಧ್ಯಕ್ಷ ನರಸಿಂಹಮೂರ್ತಿ, ಆರಾಧನಾ ಸಮಿತಿ ಸದಸ್ಯ ಪುಟ್ಟಬುದ್ಧಿ, ಆಶ್ರಯ ಸಮಿತಿ ಸದಸ್ಯ ಅನೂಜ್ ಸಾರಸ್ವತ್, ಮುಖಂಡರಾದ ಮಧು, ರವಿಕೆಂಪಣ್ಣ, ಗುಂಡಣ್ಣ, ಬಾಬು ಆಚಾರಿ, ಸುರೇಶ್, ನವೀನ್, ವಿನೋದ, ಮಂಗಳಮ್ಮ, ಶೋಭಾ, ವಿನೋದ, ರವಿ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಕುಪ್ಪಳ್ಳಿಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಪರಿಸರ ನಾಶ ಸಲ್ಲದು ; ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ



ಮೈಸೂರು,ಫೆ.13(ಪಿಎಂ)–ಕುಪ್ಪಳಿಯಲ್ಲಿ ರಾಷ್ಟ್ರಕವಿ ಕುವೆಂಪು ಆಶಯಕ್ಕೆ ವಿರುದ್ಧವಾಗಿ ಅಭಿವೃದ್ಧಿ ಹೆಸರಿನಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಸಮಾಧಿ ಬಳಿ ಪರಿಸರ ನಾಶಗೊಳಿಸಿ, ಕಾಂಕ್ರಿಟ್ ಕಟ್ಟಡ ನಿರ್ಮಿಸಲು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಮುಂದಾಗಿದ್ದು, ಈ ಕೂಡಲೇ ಇದನ್ನು ಕೈಬಿಡಬೇಕು ಎಂದು ಹೋಟೆಲ್ ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರಕವಿ ಕುವೆಂಪು ಅವರು ತಮ್ಮ ಹುಟ್ಟೂರಿನ ಬಗ್ಗೆ ತಾವು ಹುಟ್ಟಿ ಬೆಳೆದ ನಿಸರ್ಗ ತಮ್ಮನ್ನು ಮಹಾಕವಿಯಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಹೇಳಿಕೊಂಡಿದ್ದಾರೆ. ಇಂತಹ ಪರಿಸರಕ್ಕೆ ಮಾರಕವಾಗುವಂತೆ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕ್ಯಾಂಟೀನ್ ಮತ್ತು ರೆಸ್ಟೋರೆಂಟ್ ನಿರ್ಮಾಣಕ್ಕೆ ಮುಂದಾಗಿದೆ. ಈಗಾಗಲೇ ಸಾಕಷ್ಟು ಶೌಚಾಲಯಗಳಿದ್ದರೂ ಇನ್ನಷ್ಟು ಶೌಚಾಲಯಗಳನ್ನು ನಿರ್ಮಿಸುವುದಾಗಿ ಪ್ರತಿಷ್ಠಾನ ಹೇಳುತ್ತಿದೆ. ಆದರೆ ಇವುಗಳ ಅಗತ್ಯ ಖಂಡಿತ ಇಲ್ಲ ಎಂದು ಪ್ರತಿಪಾದಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಡಾ.ಬಿ.ಶಿವಣ್ಣ ಸ್ಪರ್ಧೆಗೆ ಒತ್ತಾಯ



ಮೈಸೂರು,ಫೆ.13(ಪಿಎಂ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕರ್ನಾಟಕ ಪ್ರಜಾ ಪಾರ್ಟಿಯ ಸಂಸ್ಥಾಪಕ ಅಧ್ಯಕ್ಷ ಡಾ.ಬಿ.ಶಿವಣ್ಣ ತಮ್ಮ ಪಕ್ಷದಿಂದ ಸ್ಪರ್ಧಿಸಬೇಕೆಂಬ ಒತ್ತಾಯವು ಕ್ಷೇತ್ರದ ಮತದಾರರಿಂದ ಕೇಳಿ ಬರುತ್ತಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಪಿ.ಕುಮಾರಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಮತದಾರರು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಪರ್ಯಾಯವಾಗಿ ಹೊಸ ರಾಜಕೀಯ ಶಕ್ತಿಯತ್ತ ಒಲವು ತೋರುತ್ತಿದ್ದು ಕರ್ನಾಟಕ ಪ್ರಜಾ ಪಾರ್ಟಿಯ ಡಾ.ಬಿ.ಶಿವಣ್ಣ ಅವರು ಸ್ಪರ್ಧಿಸಿದರೆ ಬೆಂಬಲ ನೀಡುವುದಾಗಿ ಹೇಳುತ್ತಿದ್ದಾರೆ. ಹಾಗಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಬೇಕೆಂದು ಡಾ.ಬಿ.ಶಿವಣ್ಣ ಅವರಲ್ಲಿ ಮನವಿ ಮಾಡಲಿದ್ದೇವೆ ಎಂದು ಹೇಳಿದರು. ಪಕ್ಷದ ಮುಖಂಡರಾದ ಕುಮಾರ್, ಮುರುಗೇಶ್, ಜೋಸೆಫ್ ಸ್ಟೀಫನ್ ಗೋಷ್ಠಿಯಲ್ಲಿದ್ದರು.

ಕೆ.ಆರ್.ಕ್ಷೇತ್ರ ವ್ಯಾಪ್ತಿ ಅಶೋಕಪುರಂನಲ್ಲಿ ಪ್ರದೀಪ್‌ಕುಮಾರ್ ಪಾದಯಾತ್ರೆ; ಜನರ ಸಮಸ್ಯೆ ಆಲಿಕೆ



ಮೈಸೂರು, ಫೆ.13(ಎಸ್‌ಬಿಡಿ)– ಕೃಷ್ಣರಾಜ ಕ್ಷೇತ್ರದ ಮನೆ ಮನೆಗೆ ಜನ ಸಂಪರ್ಕ ಅಭಿಯಾನ ಹಮ್ಮಿಕೊಂಡಿರುವ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂ.ಪ್ರದೀಪ್ ಕುಮಾರ್, ಸೋಮವಾರ ಅಶೋಕಪುರಂನಲ್ಲಿ ಪಾದಯಾತ್ರೆ ನಡೆಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನದಲ್ಲಿರುವ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಪಾದಯಾತ್ರೆ ಆರಂಭಿಸಿದ ಅವರು 1ರಿಂದ 13ನೇ ಕ್ರಾಸ್‌ವರೆಗೆ ಪಾದಯಾತ್ರೆ ನಡೆಸಿ, ಜನಸಾಮಾನ್ಯರ ಸಮಸ್ಯೆ ಆಲಿಸಿದರು. ಅವರಿಗೆ ಶಿವು, ರಾಕೇಶ್, ಶ್ರೀಧರ್, ರವಿ ಸೇರಿದಂತೆ ಅನೇಕ ಮುಖಂಡರು, ಸ್ನೇಹಿತರು, ಹಿತೈಷಿಗಳು, ಕಾಂಗ್ರೆಸ್ ಕಾರ್ಯಕರ್ತರು ಸೇರಿ ನೂರಾರು ಮಂದಿ ಸಾಥ್ ನೀಡಿದರು.

ಗರಡಿ ಮನೆಗಳು, ದೇವಸ್ಥಾನ ಅಭಿವೃದ್ಧಿಯಾಗಬೇಕು. ಸರ್ಕಾರಿ ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರದ ಉನ್ನತೀಕರಣವಾಗಬೇಕು. ಕೆಲಸವಿಲ್ಲದೆ ಪರದಾಡುತ್ತಿರುವ ವಿದ್ಯಾವಂತ ಯುವಕರು, ಯುವತಿಯರು, ಪತಿ ಕಳೆದುಕೊಂಡವರು, ಅವಿವಾಹಿತ ಹೆಣ್ಣು ಮಕ್ಕಳಿಗೆ ಕಾರ್ಖಾನೆ ಇನ್ನಿತರ ಸಂಸ್ಥೆಗಳಲ್ಲಿ ಉದ್ಯೋಗ ಕಲ್ಪಿಸಿಕೊಡಬೇಕು. ಹೀಗೆ ಹತ್ತು ಹಲವು ಪ್ರಮುಖ ಬೇಡಿಕೆ, ಸಮಸ್ಯೆಗಳನ್ನು ಜನ ಹೇಳಿಕೊಂಡರು ಎಂದು ಪ್ರದೀಪ್ ಕುಮಾರ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರೆ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಮನೆಯೊಡತಿಗೆ 2 ಸಾವಿರ ನೆರವು ಸೇರಿದಂತೆ ಹತ್ತಾರು ಜನಪರ ಯೋಜನೆಗಳನ್ನು ಪಡೆಯಬಹುದು. ಖಂಡಿತವಾಗಿ ಸಾಮಾನ್ಯರ ಸಮಸ್ಯೆಗಳನ್ನು ಪ್ರತ್ಯಕ್ಷವಾಗಿ ಕಂಡು ಪರಿಹಾರಕ್ಕೆ ಸಾಧ್ಯವಾದ ರೀತಿಯಲ್ಲಿ ಕ್ರಮ ವಹಿಸಬೇಕೆಂಬ ಉದ್ದೇಶದಿಂದಲೇ ಜನ ಸಂಪರ್ಕ ಅಭಿಯಾನ ನಡೆಸುತ್ತಿದ್ದೇನೆ ಎಂದು ತಿಳಿಸಿದ್ದು, ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು ಎಂದರು.

ಪ್ರತಿಯೊಬ್ಬ ಶರಣರು ಕೂಡ ಮುತ್ತು ಇದ್ದಂತೆ



ಮೈಸೂರು, ಫೆ13(ಎಸ್‌ಪಿಎನ್)– ಹನ್ನೆರಡನೇ ಶತಮಾನದ ಶರಣರ ಜೀವನವೇ ಒಂದು ಮೌಲ್ಯ ಅವರು ಪ್ರತಿಯೊಬ್ಬರನ್ನು 'ಶರಣು–ಶರಣಾರ್ಥಿ' ಎಂದು ಸಂಬೋಧಿಸುತ್ತಿದ್ದರು. ಈ ಪದಕ್ಕೆ ವಿಶಾಲಾರ್ಥವಿದೆ ಎಂದು ಸರಗೂರು ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯಶಿಕ್ಷಕ ಮಹಮ್ಮದ್ ಅಂಜು ಪಾಷ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿಗಳಿಂದ ವಚನ ಗಾಯನ – ವ್ಯಾಖ್ಯಾನ ಕಾರ್ಯಕ್ರಮದಲ್ಲಿ 'ಶರಣರ ಜೀವನ ಮೌಲ್ಯಗಳು' ವಿಷಯ ಕುರಿತು ಮಾತನಾಡಿದರು.

ಈ ಭೂಮಿ ಮೇಲೆ ಹಲವು ಬಗೆಯ ಜೀವ ರಾಶಿಗಳಿವೆ. ಅದರಲ್ಲಿ ಮನುಷ್ಯ ಜನ್ಮವೇ ಶ್ರೇಷ್ಠವಾದ ಜನ್ಮ. ಮನುಷ್ಯನಿಗೆ ಒಳ್ಳೆಯದ್ದು, ಕೆಟ್ಟದ್ದು ಗುರುತಿಸುವ ಜ್ಞಾನವಿದೆ. ಹಾಗಾಗಿ ನಾವು ಬೇರೆಯವರನ್ನು ಮಾತನಾಡಿಸುವಾಗ 'ಶರಣು–ಶರಣಾರ್ಥಿ' ಎಂದು ಕರೆಯಬೇಕು. ಬೇರೆಯವರನ್ನು ಅತ್ಯಂತ ಗೌರವದಿಂದ ಮಾತನಾಡಿಸಿದಾಗ ಅವರಿಂದಲೂ ಅಷ್ಟೇ ಗೌರವ ಸಿಗುತ್ತದೆ. ಹಾಗಾಗಿ ಪ್ರತಿ ವಿದ್ಯಾರ್ಥಿಯೂ ಶರಣರ ಜೀವನ ಮೌಲ್ಯ ಹಾಗೂ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಅಕ್ಕ ಮಹಾದೇವಿ ರಚಿತ ವಚನದಲ್ಲಿ ಹೀಗೆ ಹೇಳುತ್ತಾರೆ ಉಪ್ಪು ನೀರಲ್ಲಾಯಿತು, ಆಲಿಕಲ್ಲು ನೀರಲ್ಲಾಯಿತು. ಮುತ್ತು ನೀರಲ್ಲಾಯಿತು, ವಾಯು ನೀರಲ್ಲಾಯಿತು ಎನ್ನುತ್ತಾರೆ. ಇದಕ್ಕೆ ಕಾರಣ ಹುಡುಕಿದರೆ, ಸಮುದ್ರದ ಪ್ರಭಾವವೇ ಇವೆಲ್ಲದಕ್ಕೂ ಕಾರಣ. ಹಾಗೆಯೇ ಉಪ್ಪು ವಾಯು, ಆಲಿಕಲ್ಲು ಎಲ್ಲವೂ ಕರಗುತ್ತವೆ. ಆದರೆ, ಮುತ್ತು ಮಾತ್ರ ಕರಗುವುದಿಲ್ಲ. ಹಾಗಾಗಿ ಹನ್ನೆರಡನೇ ಶತಮಾನದ ಪ್ರತಿಯೊಬ್ಬ ವಚನಕಾರರೂ ಒಂದೊಂದು ಮುತ್ತು ಇದ್ದ ಹಾಗೆ. ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳುವ ವಿದ್ಯಾರ್ಥಿ ದೇಶಕ್ಕೆ ಜ್ಞಾನದ ಮುತ್ತುಗಳಾಗಿ ಪರಿವರ್ತಿತನಾಗುತ್ತಾನೆ ಎಂದು ಶರಣರ ಮೌಲ್ಯಗಳನ್ನು ಎಳೆಎಳೆಯಾಗಿ ಬಿಡಿಸಿದರು.

ಈ ವೇಳೆ ವಚನಗಾಯನದಲ್ಲಿ 10ನೇ ತರಗತಿಯ ವಿದ್ಯಾರ್ಥಿ ಪವನ್ ಕುಮಾರ್ (ಪ್ರ), ಬಿ. ಮೈತ್ರಿ (ದ್ವಿ), ಸುಗುಣ(ತೃ) ಬಹುಮಾನ ಗಳಿಸಿದರು. ಎಂ.ಎನ್.ಮನು, ಅಪೇಕ್ಷಾ, ಎಂ.ವರ್ಣಿಕಾ, ಸುಷ್ಮಿತಾ, ಮನೋಜ್, ಕೆ.ವಿ. ಚೈತ್ರಾ, ಹರ್ಷಿತ್ ರೈ ವಚನ ಗಾಯನ ಸ್ಪರ್ಧೆಯಲ್ಲಿ ಪ್ರಮಾಣ ಪತ್ರ ಪಡೆದರು.

ಈ ವೇಳೆ ಹಿರಿಯ ಸಾಹಿತಿ ಡಾ.ಜಯಪ್ಪಹೊನ್ನಾಳಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಶ್ರೀ ಸಿದ್ದೇಶ್ವರ ಪ್ರೌಢಶಾಲೆಯ ಮುಖ್ಯಶಿಕ್ಷಕ ಎಂ.ಮುರುಳೀಧರರಾವ್, ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಅಮೂಲ್)ದ ನಿವೃತ್ತ ಅಧಿಕಾರಿ ಹೆಚ್.ಸಿ.ಈಶ್ವರ ಪ್ರಕಾಶ್, ಹೆಚ್.ಸಿ.ಮೋಹನಶಂಕರ, ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ ಉಪಸ್ಥಿತರಿದ್ದರು.

ತಂತ್ರಜ್ಞಾನ ಕೌಶಲ್ಯ ಬೆಳೆಸಿಕೊಳ್ಳಲು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಲಹೆ



ಮೈಸೂರು,ಫೆ.13(ಪಿಎಂ)– ತಾಂಡವಪುರದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ಡಿಪ್ಲೊಮಾ ಮೂಲಕ ಇಂಜಿನಿಯರಿಂಗ್‌ನ 3ನೇ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಿ.ಬನುಮಯ್ಯ ಪಾಲಿಟೆಕ್ನಿಕ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ.ರವಿ ಮಾತನಾಡಿ, ಇಂಜಿನಿಯರಿಂಗ್ ಪದವಿಯಿಂದ ದೊರೆಯುವ ಅವಕಾಶಗಳ ಬಗ್ಗೆ ತಿಳಿದುಕೊಳ್ಳಬೇಕು. ಇಂದಿನ ಯುಗಕ್ಕೆ ಅಗತ್ಯವಿರುವ ತಂತ್ರಜ್ಞಾನ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮತ್ತೊಬ್ಬ ಅತಿಥಿ ಚಾಮರಾಜನಗರದ ಪಾಲಿಟೆಕ್ನಿಕ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಪ್ರೊ.ಹೆಚ್.ಎ.ಪರಿಮಳಾ ಮಾತನಾಡಿ, ಡಿಪ್ಲೊಮಾ ನಂತರ ಇಂಜಿನಿಯರಿಂಗ್ ಶಿಕ್ಷಣದ ಮಹತ್ವದ ಬಗ್ಗೆ ಅರಿಯಬೇಕು. ಯಾವುದೇ ಕಾರಣಕ್ಕೂ ಇಂಜಿನಿಯರಿಂಗ್ ಪದವಿಯನ್ನು ಮೊಟಕುಗೊಳಿಸದೇ ಪೂರ್ಣಗೊಳಿಸಿ ಉನ್ನತ ಜ್ಞಾನ ಸಂಪಾದಿಸಬೇಕು ಎಂದು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ವೈ.ಟಿ.ಕೃಷ್ಣೇಗೌಡ ಮಾತನಾಡಿ, ಡಿಪ್ಲೊಮಾ ಮೂಲಕ ಇಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆಯುವವರಲ್ಲಿ ಬಹುತೇಕ ವಿದ್ಯಾರ್ಥಿಗಳು ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಪ್ರದೇಶದ ಹಿನ್ನೆಲೆ ಹೊಂದಿರುತ್ತಾರೆ. ಹಾಗಾಗಿ ನಮ್ಮ ಕಾಲೇಜಿನಲ್ಲಿ ಅವರಿಗೆ ಆರಂಭದಲ್ಲಿ ವ್ಯವಹಾರಿಕ ಇಂಗ್ಲಿಷ್ ಬೋಧನೆ ಮಾಡಲಾಗುತ್ತದೆ. ಇದು ಅವರಿಗೆ ಭವಿಷ್ಯದಲ್ಲಿ ಸಂದರ್ಶನ ಎದುರಿಸಲು ಮತ್ತು ಉನ್ನತ ಕಂಪನಿಗಳಲ್ಲಿ ನೇಮಕಾತಿ ಪಡೆಯಲು ಅನುಕೂಲವಾಗುತ್ತದೆ. ನಮ್ಮ ಹಳೆಯ ವಿದ್ಯಾರ್ಥಿಗಳು ಈ ಕಾರ್ಯಕ್ರಮವನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಕಾಲೇಜಿನ ಕಾರ್ಯದರ್ಶಿ ಪ್ರೊ.ಹೆಚ್.ಕೆ.ಚೇತನ್ ಸೇರಿದಂತೆ ಕಾಲೇಜಿನ ಎಲ್ಲಾ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.